
ರಂಜನೆ ಬೋಧನೆ ಪ್ರಚೋದನೆ

ಗೌರಿ ಲಂಕೇಶ್

ಫೆಬ್ರವರಿ 13, 2008 ರೂ. 12/-


ಕೊರಂಗು ಮತ್ತೆ ಬಚಾವ್



ಬೆಕ್ಕಿಗೆ 9 ಜೀವ



ಕನ್ಯಾಪೀಡಕ ವರದಿಗಾರ



ಜನರ ಸುಲಿಗೆ

ನ್ಯಾನೋ ಕಾರ್ ರಿಲಯನ್ಸ್ ಪವರ್


ನಿಮ್ಮ ಶಾಸಕರು ಕಡಿದಿದ್ದೇನು?

ಗಂಗಾವತಿ

ಬೀದರ್

ಹಾಸನ

ಂಗಾ ಕಾಲೆಳೆಯೋದು!





ಜನರ ಹೆಸರಲ್ಲಿ ಜನರನ್ನು ಸುಲಿಯುವ ಎರಡು ಹೊಸ ವಿಧಾನಗಳು:

ಟಾಟಾನ ನ್ಯಾನೋ ರಿಲಯನ್ಸ್‌ನ ಪವರ್ರು

ಚಾರ್ವಾಕ

ಶಿವಸುಂದರ್

ಭಾರತದ ಉದ್ಯಮಿಗಳು ಮಹಾ ಚತುರರು. ಜನರನ್ನು ನೋವಿಲ್ಲದೆಯೇ ಸುಲಿಯಬಲ್ಲರು ಮತ್ತು ತಮ್ಮ ಎಣೆಯರಿಯದ ಲೂಟಿಗೆ ಜನಸೇವೆಯ ಮುಖವಾಡವನ್ನು ತೊಡಿಸಿಕೊಂಡು ಪದ್ಮ ವಿಭೂಷಣರೂ ಆಗಬಲ್ಲರು. ಇತ್ತೀಚೆಗೆ ಪದ್ಮ ಪ್ರಶಸ್ತಿಗಳಿಗೆ ಪಾತ್ರರಾದ ಉದ್ಯಮಿಗಳನ್ನೇ ನೋಡಿ. ಟಾಟಾ, ಇನ್ಫೋಸಿಸ್‌ನ ನಾರಾಯಣಮೂರ್ತಿ, ಭಾರತದ ಮಲ್ಟಿ ನ್ಯಾಷನಲ್ ಲಕ್ಷ್ಮಿ ಮಿಟ್ಟಲ್, ಪಂಚತಾರಾ ಸಂಸ್ಕೃತಿಯ ಒಬೆರಾಯ್ ಇವರೆಲ್ಲರೂ ಈಗ ಪದ್ಮ ವಿಭೂಷಣರು. ಅಂದರೆ ಇವರು ಭಾರತದ ಜನತೆಗೆ ಮಾಡಿದ ಸೇವೆಯನ್ನು ಪರಿಗಣಿಸಿ ಸರ್ಕಾರ ಜನತೆಯ ಪರವಾಗಿ ಅವರಿಗೆಲ್ಲಾ ಅತ್ಯುನ್ನತ ನಾಗರಿಕ ಗೌರವವಾದ ಪದ್ಮ ಪ್ರಶಸ್ತಿಗಳನ್ನು ಕೊಟ್ಟಿದೆ.

ಅಂದರೆ ಆ ಮೂಲಕ ಅವರು ಮಾಡುತ್ತಿರುವ ಸರ್ಕಾರಿ ಬೊಕ್ಕಸದ ಲೂಟಿಗೆ ಅಧಿಕೃತವಾಗಿ "ಅತ್ಯುನ್ನತ ಜನಸೇವೆ" ಎಂಬ ಬಿರುದನ್ನು ದಯಪಾಲಿಸಲಾಗಿದೆ. ಆ ಮೂಲಕ ಭಾರತದ ದೈನ್ಯತೆಯ ಪ್ರತೀಕವಾಗಿರುವ ಭೋಪಾಲಿನ ಯೂನಿಯನ್ ಕಾರ್ಬೈಡ್ ಕಂಪನಿಯ ದುರಂತವನ್ನು ಮುಚ್ಚಿ ಹಾಕಿ ಡೌ ಎಂಬ ಅಂತರರಾಷ್ಟ್ರೀಯ ಕೆಮಿಕಲ್ ದೈತ್ಯನೊಂದಿಗೆ ಕೈಜೋಡಿಸಿರುವ ಟಾಟಾನ ದೇಶದ್ರೋಹವನ್ನು ಮರೆಮಾಚಿದೆ. ಅದೇರೀತಿ ಡಾಲರ್ ಎದುರು ರೂಪಾಯಿ ಕುಸಿಯುತ್ತಿದ್ದಂತೆ ಭಾರತದಲ್ಲಿನ ತನ್ನ ಸಂಸ್ಥೆಗೆ ಬರುತ್ತಿದ್ದ ಬಿಸಿನೆಸ್ಸನ್ನು ಚೀನಾ ದೇಶದ ತನ್ನ ಬ್ರಾಂಚಿಗೆ ವರ್ಗಾಯಿಸಿದ ಮತ್ತು ಬಾಯಿ ಬಿಟ್ಟರೆ ದಲಿತ ವಿರೋಧಿ ಮತ್ತು ಕೊಳೆತ ಬ್ರಾಹ್ಮಣ್ಯದ ಪರ ವಕಾಲತು ವಹಿಸುವ ನಾರಾಯಣಮೂರ್ತಿಯ ಜನ ದ್ರೋಹಿ ಮತ್ತು ದೇಶದ್ರೋಹಿ ತನದ ಮೇಲೆ ಪದ್ಮ ವಿಭೂಷಣದ ಮಖಮಲ್ ಮುಸುಕನ್ನು ಹೊದಿಸಲಾಗಿದೆ.

ಇದು ಜಾಗತೀಕರಣ ಕಾಲದ ದೊಡ್ಡ ಮೋಸ. ತನ್ನ ಬದುಕಿಗೆ ಮತ್ತು ಭವಿಷ್ಯಕ್ಕೆ ಮಾರಕವಾಗಿರುವ ತನ್ನ ಶತ್ರುಗಳನ್ನು ತನ್ನ ರಕ್ಷಕರೆಂದು ಪರಿಗಣಿಸುವಂತೆ ಮಾಡುವ ಬ್ರಾಹ್ಮಣ್ಯದ ಆಧುನಿಕ ರೂಪವಿದು. ಜಾಗತಿಕರಣದ ದಾಳಿ ಹುಟ್ಟಿ ಹಾಕುವ ಅಸಹಾಯಕ ತರ್ಕವಿದು. ಈ ಹಿಂದೆ ಒಬ್ಬ ಬಂಡವಾಳಶಾಹಿಯು ನಡೆಸುತ್ತಿದ್ದ ಶೋಷಣೆಯ ವಿರುದ್ಧ ಕಾರ್ಮಿಕರು ಸಂಘಟಿತ ಹೋರಾಟ ನಡೆಸಲಿ ಬಿಡಲಿ ಕನಿಷ್ಠ ಅವರಿಗೆ ತಮ್ಮ ಶೋಷಣೆಯ ಬಗ್ಗೆ ಮತ್ತು ತಮ್ಮ ಹಕ್ಕಿನ ಬಗ್ಗೆ ಪ್ರಜ್ಞೆ ಇರುತ್ತಿತ್ತು, ಬಂಡವಾಳಶಾಹಿಯ ಕುರಿತು ಕಾರ್ಮಿಕರಲ್ಲಿ ಋಣೀಭಾವವೇನೂ ಇರುತ್ತಿರಲಿಲ್ಲ. ಬ್ರಾಹ್ಮಣೀಯ ಶಕ್ತಿಗಳು ಮತ್ತು ಗಾಂಧೀವಾದಿ ಶಕ್ತಿಗಳು ಈ ಪ್ರಜ್ಞೆಯನ್ನ ಆರ್ಥಿಕ ಮತ್ತು ರಾಜಕೀಯ ಶೋಷಣೆಯನ್ನು ನೈತಿಕ ಮುಸುಕಿನಲ್ಲಿ ಮುಳುಗಿಸಲು ಪ್ರಯತ್ನಿಸುತ್ತಿದ್ದರಾದರೂ ಶೋಷಿತ ಪ್ರಜ್ಞೆ ಜಾಗೃತವಾಗಿರುತ್ತಿತ್ತು, ಆದರೆ ಬಂಡವಾಳಶಾಹಿಯು ಕಾರ್ಮಿಕ ವರ್ಗದ ವಿರುದ್ಧ ತಾತ್ಕಾಲಿಕ ಸೈದ್ಧಾಂತಿಕ ಮತ್ತು ರಾಜಕೀಯ ವಿಜಯ ಪಡೆದಿರುವ ಜಾಗತೀಕರಣದ ಈ ಕಾಲಘಟ್ಟದಲ್ಲಿ ಒಬ್ಬ ಬಂಡವಾಳಶಾಹಿ ತನ್ನ ಕಾರ್ಖಾನೆ ಸ್ಥಾಪಿಸುವ ಮುನ್ನ ಸಮಾಜ ಮತ್ತು ಪರಿಸರಕ್ಕೆ ಅನ್ಯಾಯವಾಗುವ ಏನೆಲ್ಲಾ ಯೋಜನೆಗಳನ್ನು ಹಾಕಿದರೂ, ನಂತರದಲ್ಲಿ ಸರ್ಕಾರದ ಬೊಕ್ಕಸಕ್ಕೆ ಏನೆಲ್ಲಾ ತೂತುಗಳನ್ನು ಕೊರೆದರೂ ಅವೆಲ್ಲವನ್ನು ಮಾಫಿ ಮಾಡುವಂತ ಉದ್ಯೋಗದಾತರ ಇಮೇಜನ್ನು ಮಾತ್ರ ಧರಿಸುವಂತಹ ಸೈಕಿಯನ್ನು ಸಮಾಜದಲ್ಲಿ ಬೆಳೆಸುವಲ್ಲಿ ಯಶಸ್ವಿಯಾಗಿದ್ದಾರೆ.

ಆದ್ದರಿಂದಲೇ ಈ ಕಾರ್ಪೊರೇಟ್‌ಶಾಹಿಗಳು ಸಹ ಈಗ ಎಲ್ಲಕ್ಕೂ ಜನತೆಯ ಕಲ್ಯಾಣದ ಹೆಸರನ್ನು ಬಳಸಲು ಪ್ರಾರಂಭಿಸಿದ್ದಾರೆ. ಪೀಪಲ್ಸ್ ಕಾರು ಅದಕ್ಕೆ ಒಂದು ಉದಾಹರಣೆ. ಜನತೆಯ ಕತ್ತಲನ್ನು ನೀಗಿಸಲು ರಿಲಯನ್ಸ್ ಪವರ್ ಎಂಬುದು ಮತ್ತೊಂದು ಉದಾಹರಣೆ. ಮಾಧ್ಯಮಗಳು ಸಹ ಅವುಗಳಿಗೆ ಎಗ್ಗಿಲ್ಲದ ಪ್ರಚಾರವನ್ನು ಕೊಟ್ಟು ಜನರನ್ನು ಮೋಸಗೊಳಿಸುವ ಗಾರುಡಿಗೆ ಇಂಬು ಕೊಟ್ಟಿದ್ದಾರೆ. ಕೆಲವು ಗೊಂದಲ ಮಯ ಬುದ್ಧಿಜೀವಿಗಳಂತೂ ಟಾಟಾನನ್ನು ವಿರೋಧಿಸುವುದು ದೇಶದ್ರೋಹವೆಂದೇ ಅಪ್ಪಣೆ ಕೊಡಿಸಿದ್ದಾರೆ. "ಟಾಟಾನ ನ್ಯಾನೋ ಕಾರು, ದೇಶ ಕಟ್ಟುವ ಕೆಲಸವನ್ನು ಸದ್ದಿಲ್ಲದೆಯೇ, ಸ್ವಾರ್ಥವಿಲ್ಲದೆಯೇ ಆದರೆ ನಿರಂತರ ಅನ್ವೇಷಣೆಯ ಕುತೂಹಲದೊಂದಿಗೆ ,ಸಮಷ್ಟಿ ಕಲ್ಯಾಣದ ಕಾಳಜಿಯೊಂದಿಗೆ ಹೇಗೆ ಸಾರ್ಥಕವಾಗಿ ಮಾಡಬಹುದೆಂಬ ಟಾಟಾ ಪರಿವಾರದ ಆರೋಗ್ಯಕರ ಬಿಸಿನೆಸ್ ಸಂಹಿತೆಯ ಸಂಕೇತವಾಗುಳಿಯಲಿದೆ'' ಎಂದು ತಾವೂ ಆತ್ಮವಂಚನೆ ಮಾಡಿಕೊಳ್ಳುತ್ತಿರುವುದಲ್ಲದೆ ಜನತೆಯನ್ನು ದಾರಿ ತಪ್ಪಿಸುತ್ತಿದ್ದಾರೆ. ಯಾವುದೇ ಬಂಡವಾಳಶಾಹಿ ಯತ್ನಗಳಿಗೆ ಪ್ರೇರಣೆ ನೀಡುವುದೇ ಲಾಭದ ಲಾಲಸೆ ಎಂಬುದನ್ನು ಮರೆಮಾಚಿ ಅದಕ್ಕೆ ಸಮಾಜ ಸೇವೆಯ ತ್ಯಾಗದ ಮುಖವಾಡ ತೊಡಿಸುತ್ತಿದ್ದಾರೆ.

ಹೀಗಾಗಿ ಇತ್ತೀಚೆಗೆ ಭಾರತದ ದೊಡ್ಡ ಬಂಡವಾಳಶಾಹಿಗಳಾದ ಟಾಟಾ ಮತ್ತು ರಿಲಯನ್ಸ್ ಕಂಪನಿಗಳು ಜನತೆಯ ಹೆಸರಲ್ಲಿ ಪ್ರಾರಂಭಿಸಿರುವ ಉದ್ಯಮದಲ್ಲಿ ಜನಪರ ಹಿತಾಸಕ್ತಿ ಎಷ್ಟು ಮತ್ತು ಜನರಿಗೆ ಹಾಕಿದ ಟೋಪಿಯೆಷ್ಟು ಎಂಬುದನ್ನು ಇಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ಈಗಾಗಲೇ ಇದೇ ಅಂಕಣದಲ್ಲಿ (ಜನವರಿ 30, 2008 ಸಂಚಿಕೆ) ನ್ಯಾನೋ ಕಾರು ಹೇಗೆ ಬಡ ಮಧ್ಯಮ ವರ್ಗದ ಜನತೆಯ ನಿತ್ಯದ ಬದುಕಿಗೆ ದೊಡ್ಡ ಕುತ್ತಾಗಿ ಪರಿಣಮಿಸಲಿದೆ ಎಂದು ವಿವರಿಸಲಾಗಿದೆ. ಈಗ ಟಾಟಾನ ನ್ಯಾನೋ ಲಾಭ ಹೇಗೆ ಮಾಡುತ್ತದೆ ಎಂಬುದನ್ನು ನೋಡೋಣ.

ನ್ಯಾನೋ ಕಾರಿನ ಬೆಲೆ ಒಂದು ಲಕ್ಷ. ಇದರಲ್ಲಿ ಅದನ್ನು ತಯಾರು ಮಾಡಲು ಆಗುವ ಖರ್ಚೆಷ್ಟು ಮತ್ತು ಅದರಿಂದ ಪ್ರತಿ ಕಾರಿಗೆ ಟಾಟಾ ಪಡೆಯುವ ಲಾಭವೆಷ್ಟು? ಇಂಜನಿಯರ್‌ಗಳ ಪ್ರಕಾರ ಆ ಒಂದು ಲಕ್ಷ ಖರ್ಚಾಗುವುದು ಈ ರೀತಿ:

ಬಾಡಿ ಶೆಲ್-25,000

ಇಂಜಿನ್ ಮತ್ತು ಟ್ರಾನ್ಸ್‌ಮಿಷನ್- 30,000

ಎಲೆಕ್ಟ್ರಿಕಲ್ಸ್- 10,000

ಇಂಟೀರಿಯರ್ ಟ್ರಿಮ್ಮಿಂಗ್- 20,000

ಟೈರ್ ಮತ್ತು ಸಸ್ಪೆನ್ಷನ್- 10,000

(18ನೇ ಪುಟಕ್ಕೆ)

No Comments

"ನಾವು ನೀಡುವ ನೃಪತುಂಗ ಪ್ರಶಸ್ತಿ ಜ್ಞಾನಪೀಠ ಪ್ರಶಸ್ತಿಗಿಂತ ಮಿಗಿಲು. ವಿ ಜ್ಞಾನಪೀಠ ಪ್ರಶಸ್ತಿಯ ಮೊತ್ತ 5,00,000ವಾದರೆ ನೃಪತುಂಗ ಪ್ರಶಸ್ತಿಯ 5,00,001!"

-ಕನ್ನಡ ಸಾಹಿತ್ಯ ಪ

"ಕಳೆದ ಕೆಲದಿನಗಳ ವಿದ್ಯಮಾನ ತಂಡವನ್ನು ಕುಗ್ಗಿಸಿರುವುದರಿಂದ ಮೃದು ಧ ತೋರಿಸುವುದು ತಂಡಕ್ಕೆ ಕಷ್ಟವಾಗಲಿದೆ. ಅದಕ್ಕೆ ಹೊಂದಿಕೊಳ್ಳಲು ಕಾಲಾವಕಾಶಬೇಕು."

-ರಿಕಿ ಪಾಂ



"ಎಲ್ಲಾ ಮಾಹಿತಿಗಳನ್ನು ಮೊದಲೇ ತಲುಪಿಸಿದ್ದರೆ ಹರಭಜನ್ ಪ್ರಕರಣದಲ್ಲಿ ಸರಿಯಾದ ತೀರ್ಪು ನೀಡಲು ಸಾಧ್ಯವಾಗುತ್ತಿತ್ತು."

-ಜಾನ್ ಹ್ಯಾನ್ಸೆನ್, ಭಜ್ಜಿ ಪ್ರಕರಣದ ನ್ಯಾಯಾಧೀಶ

"ಸಾರ್ವಜನಿಕ ಹಿತದೃಷ್ಟಿಯಿಂದ ನೀಡಿದ ಮಾಹಿತಿಯಿಂದ ಭ್ರಷ್ಟರ ಮಾನಭಂಗವಾಗುತ್ತದೆ ಎಂಬ ವಾದವೇ ಹಾಸ್ಯಾಸ್ಪದ."

-ಸಂತೋಷ್ ಹೆಗ್ಡೆ ಲೋಕಾಯುಕ್ತ


"ರಾಹುಲ್ ಗಾಂಧಿಯನ್ನು ಹೊಗಳಿದ್ದಕ್ಕೆ ಉತ್ತರ ಪ್ರದೇಶದ ಮಾಯಾವತಿ ಸರ್ಕಾ ನಾಲ್ವರು ಹಿರಿಯ ಅಧಿಕಾರಿಗಳ ಅಮಾನತ್ತು."

-ಪತ್ರಿಕಾ

"ಪಾಕಿಸ್ತಾನದಲ್ಲಿ ನಡೆಯುವ ಚುನಾವಣೆ ಪರ್ಫೆಕ್ಟ್ ಆಗಿಯೇನೂ ಇರುವು

-ಕಾಂಡೊಲಿನ ರೈಸ್, ಅಮೆರಿಕದ ಗೃಹ ಕಾರ್ಯ

ನಂಬಿದ್ರೆನಂಬಿ ಬಿಟ್ರೆಬಿಡಿ



"ಒಂದೇ ಬೆಳೆ ಇರುವ ಭೂಮಿ ಇರಬಾರದು, ಒಂದೇ ಆದಾಯ ಮೂಲ ಇರುವ ರೈತನಿರಬಾರದು."

-ಕರ್ನಾಟಕ ರೈತ ಕಮಿಷನ್ನಿನ ಘೋಷಣೆ

"ಉತ್ಪಾದನಾ ಮತ್ತು ಕಟ್ಟಡ ನಿರ್ಮಾಣ ರಂಗದ ಗಮನಾರ್ಹ ಬೆಳವಣಿಗೆಯಿಂದಾಗಿ ದೇಶದ ಒಟ್ಟಾರೆ ಅಭಿವೃದ್ಧಿ ದರ ಶೇ.9.6ರಷ್ಟಾಗಲಿದೆ."

-ಪಿ. ಚಿದಂ



"ಕನ್ನಡ ವರ್ಣಮಾಲೆಯಲ್ಲಿ ಋ ಅಕ್ಷರ ಅನಗತ್ಯ, ಅದರ ಬದಲು ರ್ ಬಳಸಬಹುದು ಎಂಬ ಕುರಿತು ಚರ್ಚೆ ಆಗಿದೆ. ಋ ವನ್ನು ಇರಗೊಡಬೇಕು ಎಂದು ವಾದಿಸುವವರಲ್ಲಿ ನಾನೂ ಒಬ್ಬ."

-ಕೆ. ವಿ. ತಿರುಮಲೇಶ್

"ಗೊರೂರು ಅವರ ಸಹಾಯಕಿಯಾಗಿದ್ದ ಆಯಾಗೆ ಸಹಾಯ ಮಾಡಿ."

-ಚಿದಾನಂದ ಮೂರ್ತಿಗಳ ಮೊದಲ ಭಿನ್ನ ವಾಚಕರ ವಾಣಿ

"ನಾನು ಧೂಮಪಾನವನ್ನೇನೂ ಬೆಂಬಲಿಸುವವನಲ್ಲ. ಆದರೆ ನಾನು ಸಿಗ ಸೇದಬೇಕೆ ಬೇಡವೇ ಎಂಬುದನ್ನು ಮಂತ್ರಿ ರಾಮದಾಸರಿಂದ ನಾನು ಕಲಿಯಬೇ

-ಶಾರೂಖ್


"ಸಾಂಪ್ರದಾಯಿಕವಾಗಿ ಗಂಡನ ಮನೆಗೆ ಕೊಡಬೇಕಾದ ಕಾಣಿಕೆಗಳನ್ನು ವರದಕ್ಷಿಣೆಯ ಪರಿಗಣಿಸಲಾಗುವುದಿಲ್ಲ."

-ಸುಪ್ರೀಂಕೋ

ಅಸಹಾಯಕತೆಯ ಆಕ್ರಂದನ

"ಪ್ರತಿಭಾವಂತನಾಗಿರುವ ನನ್ನ ಮಗ ನಿರಪರಾಧಿ. ನನ್ನ ಕುಟುಂಬಕ್ಕೆ ಯಾ ಉಗ್ರಗಾಮಿಗಳ ಸಂಪರ್ಕವಿಲ್ಲ. ಇದೆಲ್ಲದರ ಮಧ್ಯೆ ಆತ ನಿಜಕ್ಕೂ ತಪ್ಪೆ ಶಿಕ್ಷೆಯಾಗಲಿ."

-ಆಸಿಫ್‌ನ ತಂದೆ ಖಾದರ್



ಇದನ್ನು ಸ್ವಾಭಿಮಾನ ಎನ್ನುವುದಿಲ್ಲ!

"ಆಟಗಾರರು ಬಾಯ್ಮುಚ್ಚಿಕೊಂಡು ಆಡುವುದು ಅಸಾಧ್ಯ."


-ಧೋನಿ

ಒಲ್ಲದ ಗಂಡ, ಮೊಸರಿನಲ್ಲಿ ಕಲ್ಲು!

"ರಾಜ್ಯ ರಾಜಕೀಯದಲ್ಲಿ ರಾಜ್ಯಪಾಲರು ಮೂಗು ತೂರಿಸುವ ಅಗತ್ಯವಿಲ್ಲ. ಸರ್ಕಾರ ರೂಪಿಸಿದ ಜನಪರ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಅವರ ಕರ್ತವ್ಯ."

-ಯಡಿಯ

ಅದು ಬೇಕಿರುವುದು ಹಸಿವಿನಿಂದ ಸಾಯುತ್ತಿರುವ ಕನ್ನಡಿಗರಿಗ



"ವಿಮಾನದಲ್ಲಿಯೂ ರಾಗಿ ಮುದ್ದೆ, ಹುರುಳಿ ಸಾರು ಮತ್ತು ಕನ್ನಡ ದಿನಪತ್ರಿಕೆಗಳನ್ನು ನೀಡಬೇಕು."

-ವಾಟಾಳ್ ನಾಗರಾಜ್

ಸ್ಥಳೀಯ ಅಂದರೆ ಸರ್ಕಾರಿ ಎಂದರ್ಥ!

"ರೈತರ ಆತ್ಮಹತ್ಯೆ ವಿಷಯದಲ್ಲಿ ನಾನು ಸ್ಥಳೀಯ ಪತ್ರಕರ್ತರನ್ನು ನಂಬುತ್ತೇನೆಯೇ ಹೊರತು ಹಿರಿಯ ಪತ್ರಕರ್ತರನ್ನಲ್ಲ."

-ವಿಲಾಸ್‌ರಾವ್ ದೇಶ್‌ಮುಖ್, ಮಹಾರಾಷ್ಟ್ರ ಮುಖ್ಯ

ಮಹಾಶ್ವೇತಾದೇವಿಯೂ ಕೇವಲ moralist ಮಾತ್ರವೇ ಕಾಮ್ರೇಡರೆ

"ಕೇವಲ ಓಟಿನಾಸೆಗಾಗಿ ತಸ್ಲಿಮಾಳನ್ನು ಬಂಗಾಳದಿಂದಾಚೆಗೆ ಓಡಿಸಿದ ಬು ಭಟ್ಟಾಚಾರ್ಯ ಗುಜರಾತಿನ ಮೋದಿಗಿಂತ ಕಡಿಮೆ ಮೂಲಭೂತಿವಾದಗಳ

-ಮಹಾಶ್ವೇತಾ ದೇವಿ, ಹಿರಿಯ ಪ್ರಸಿದ್ಧ ಕಥೆಗಾರ್ತಿ ಮತ್ತು ಪ

ಮುಸ್ಸಂಜೆಯ ನೆನಪಿನಲಿ....

ನನ್ನ ತಂಗಿ ಕವಿತಾ ನಿರ್ದೇಶನದ 'ಅವ್ವ' ಇದೇ ಶುಕ್ರವಾರ (ಫೆಬ್ರವರಿ 8) ತೆರೆ ಕಾಣುತ್ತಿದೆ. ನಿಮಗೆಲ್ಲಾ ಗೊತ್ತಿರುವಂತೆ 'ಅವ್ವ' ನಮ್ಮ ಅಪ್ಪನ 'ಮುಸ್ಸಂಜೆಯ ಕಥಾಪ್ರಸಂಗ' ಕಾದಂಬರಿಯನ್ನು ಆಧರಿಸಿ ಮಾಡಿರುವ ಸಿನಿಮಾ. ಈ ಹಿಂದೆ ಇದನ್ನು ಪ್ರಕಾಶ್ ಬೆಳವಾಡಿ ಟಿವಿ ಸೀರಿಯಲ್ ಮಾಡಿದ್ದರು. ಕೆಲ ತಿಂಗಳ ಹಿಂದೆ ನನ್ನ ಪರಿಚಯದ ಬಸವರಾಜ್ ಸೂಳೇರಿಪಾಳ್ಯ ಇದನ್ನು ನಾಟಕವಾಗಿ ರೂಪಾಂತರಿಸಿದ್ದರು. ಅವುಗಳನ್ನೆಲ್ಲ ನೋಡಿರುವ ನನಗೆ ಈಗ ಬೇಬ (ಕವಿತಾ) ಸಿನಿಮಾ ಹೇಗೆ ಬಂದಿದೆ ಎಂಬ ಕಾತರ, ತವಕ... ನಿಮಗಿರುವಂತೆಯೇ.



ಈಗ್ಗೆ 30 ವರ್ಷಗಳ ಹಿಂದೆ 1978 ರಲ್ಲಿ ಈ ಕಾದಂಬರಿ ಬರೆಯುವಾಗ ಮುಂದೆ ಅದು ಹೀಗೆ ಟೀವಿ ಸೀರಿಯಲ್, ನಾಟಕ, ಕೊನೆಗೆ ಸಿನಿಮಾ ಆಗಿಯೂ ಬೆಳೆಯುತ್ತಾ ಹೋಗುತ್ತದೆ ಎಂಬ ಕಲ್ಪನೆ ಅಪ್ಪನಿಗೆ ಇದ್ದಿರಲಿಕ್ಕಿಲ್ಲ. ನನಗೆ ನೆನಪಿರುವಂತೆ 'ಮುಸ್ಸಂಜೆ'ಯನ್ನು ಮೊದಲು ಪ್ರಕಟಿಸಿದ್ದು ಹೆಗ್ಗೋಡಿನ ಅಕ್ಷರ ಪ್ರಕಾಶನದ ಕೆ.ವಿ. ಸುಬ್ಬಣ್ಣನವರು. ಅವೊತ್ತು ಸುಬ್ಬಣ್ಣನವರಿಂದ ಅಡ್ವಾನ್ಸೆಂದು ಎರಡೂವರೆ ಸಾವಿರ ರೂಪಾಯಿ ತೆಗೆದುಕೊಂಡು ಬಂದಿದ್ದ ಅಪ್ಪ ಅದನ್ನೆಲ್ಲಾ ರೇಸಿಗೆ ಹಾಕಿ ಕಳೆದುಕೊಂಡಿದ್ದರಂತೆ. ಆದರೆ ಇವತ್ತು ಅದೇ ಕತೆಯನ್ನಾಧರಿಸಿ ರೂಪಗೊಂಡಿರುವ ಸಿನಿಮಾಗೆ ಪಿರಮಿಡ್ ಸಾಯಿಮಿರ ಒಂದು ಕೋಟಿಗೂ ಹೆಚ್ಚು ಖರ್ಚು ಮಾಡಿದೆ!

'ಅವ್ವ' ಕವಿತಾ ನಿರ್ದೇಶನದಲ್ಲಿ ಸಿನಿಮಾ ಆಗುತ್ತಿರುವ ಅಪ್ಪನ ಎರಡನೇ ಕಾದಂಬರಿ. ಈ ಮೊದಲು 'ಅಕ್ಕ' ಕಾದಂಬರಿ 'ದೇವೀರಿ' ಆಗಿ ಯಶಸ್ಸು ಕಂಡಿತ್ತು. ಈಗಿನ 'ಅವ್ವ' ಬಗ್ಗೆ ಯೋಚಿಸುತ್ತಿರುವಾಗಲೇ ನಾನು ಮೊನ್ನೆ ನೋಡಿದ ನೀನಾಸಂನ 'ಈ ನರಕ-ಈ ಪುಳಕ' ತಿರುಗಾಟದ ನಾಟಕ ನೆನಪಾಗುತ್ತಿದೆ. ಅಪ್ಪನ 'ತೆರೆಗಳು', 'ಟಿ. ಪ್ರಸನ್ನನ ಗೃಹಸ್ಥಾಶ್ರಮ', 'ಪೋಲೀಸರಿದ್ದಾರೆ ಎಚ್ಚರಿಕೆ', 'ಕ್ರಾಂತಿ ಬಂತು ಕ್ರಾಂತಿ', 'ಗಿಳಿಯು ಪಂಜರದೊಳಿಲ್ಲ', 'ನನ್ನ ತಂಗಿಗೊಂದು ಗಂಡು ಕೊಡಿ' ಹಾಗೂ 'ಸಿದ್ಧತೆ' ಎಂಬ ಏಳು ನಾಟಕಗಳನ್ನು ಸಂಕ್ಷಿಪ್ತಗೊಳಿಸಿ, ಒಂದು theme ಗೆ ಒಳಪಡಿಸಿ ಈ ಹೊಸ ನಾಟಕವನ್ನು ರೂಪಿಸಲಾಗಿತ್ತು. ಸಂಸಾರ, ಸಮಾಜ, ಮಹಿಳೆ, ಕ್ರಾಂತಿ ಇತ್ಯಾದಿಗಳ ಬಗ್ಗೆ ಅಪ್ಪನ ಅಭಿಪ್ರಾಯಗಳು ಆ ನಾಟಕದಲ್ಲಿ ಸ್ಪಷ್ಟವಾಗಿ ವ್ಯಕ್ತಗೊಂಡಿದ್ದವು. ನಿರ್ದೇಶಕ ರಘುನಂದನ್‌ರ ಶ್ರಮ, ಶ್ರದ್ಧೆ ಹಾಗೂ ಪ್ರತಿಭೆ ಕಂಡು ನನಗೂ ಸಂತೋಷವಾಗಿತ್ತು.

ಅಪ್ಪ ಇಲ್ಲವಾಗಿ ಈಗ ಎಂಟು ವರ್ಷ ಕಳೆದಿವೆ. ಆದರೂ ಅವರು ನಾಟಕವಾಗಿ, ಸಿನಿಮಾ ಆಗಿ, ಲೇಖನವಾಗಿ, ಚಿಂತಕರಾಗಿ, ಪದ್ಯವಾಗಿ ಮತ್ತೆ ಮತ್ತೆ ನಮ್ಮೆದುರು ಬಂದು ನಿಲ್ಲುತ್ತಿರುವುದು ಆಶ್ಚರ್ಯ ಹುಟ್ಟಿಸುತ್ತಿದೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಕನ್ನಡ ಸಾಂಸ್ಕೃತಿಕ ಜಗತ್ತು ಈಗಲೂ ಮತ್ತೆಮತ್ತೆ ಅಪ್ಪನತ್ತ ಹೊರಳುತ್ತಿರುವುದು ತನ್ನ ಕ್ರಿಯಾಶೀಲತೆಯನ್ನು ನವೀಕರಿಸಿಕೊಳ್ಳಲು, ಸ್ಫೂರ್ತಿ ಪಡೆಯಲು ಅನಿಸುತ್ತದೆ.

ಲೇಖಕನಾದವನಿಗೆ ಇದಕ್ಕಿಂತ ಸಾರ್ಥಕತೆ ಬೇರೆ ಏನಿರಲು ಸಾಧ್ಯ!

ಈ ಮಾತನ್ನು ಹೇಳುವಾಗ ನಾನು ಇನ್ನೊಂದು ಆಧಾರವನ್ನು ಕೊಡಬಹುದು. ಅದು ಅಪ್ಪನ ಪುಸ್ತಕಗಳ ಬಗ್ಗೆ. ಅಪ್ಪನ ಎಲ್ಲಾ ಬರವಣಿಗೆಯ ಹಕ್ಕುಗಳು ಈಗ ಅಮ್ಮ ಇಂದಿರಾ ಬಳಿ ಇವೆ. ನಾನು ಒಂದೂವರೆ ವರ್ಷದ ಹಿಂದೆ ಲಂಕೇಶ್ ಪ್ರಕಾಶನ ಶುರು ಮಾಡಿದ ಮೇಲೆ ಅಪ್ಪನ 10 ಪುಸ್ತಕಗಳನ್ನು ಮುದ್ರಿಸಿದ್ದೇವೆ. (ನೀಲು ಕಾವ್ಯ ನಾನಲ್ಲ, ಪ್ರಸ್ತುತ, ಸಂಕ್ರಾಂತಿ, ಗುಣಮುಖ, ಅಕ್ಕ, ಉಲ್ಲಂಘನೆ, ಕೆರೆಯ ನೀರನು ಕೆರೆಗೆ ಚೆಲ್ಲಿ, ದೊರೆ ಈಡಿಪಸ್ ಮತ್ತು ಅಂತಿಗೊನೆ, ಕಲ್ಲು ಕರಗುವ ಸಮಯ). ಓದುಗರು ಖುಷಿಯಿಂದ ಇವನ್ನೆಲ್ಲಾ ಕೈಗೆತ್ತಿಕೊಳ್ಳುತ್ತಿದ್ದಾರೆ. ಅಂದರೆ ಕನ್ನಡದ ಸದಭಿರುಚಿಯ ಓದುಗರಿಗೆ ಲಂಕೇಶ್ ಈಗಲೂ ಬೇಕಾಗಿದ್ದಾರೆ ಎಂದಾಯಿತು. ಇದೇ ಹುಮ್ಮಸ್ಸಿನಲ್ಲಿ ಮುಂದೆ ಅಪ್ಪನ ಅಪ್ರಕಟಿತ ಬರಹಗಳಾದ ಟೀಕೆ-ಟಿಪ್ಪಣಿ ಭಾಗ 3, ಸಾಹಿತ್ಯ ವಿಮರ್ಶೆ, ನಾಟಕ ವಿಮರ್ಶೆ, ನೀಲು ಕಾವ್ಯ ಭಾಗ 2, ಮರೆಯುವ ಮುನ್ನ ಹಾಗೂ ಸಿನಿಮಾ ಬರವಣಿಗೆಗಳ ಹೊಸ ಪುಸ್ತಕಗಳನ್ನು ತರುವ ಕೆಲಸ ಶುರು ಮಾಡಿದ್ದೇವೆ.

1971 ರಲ್ಲಿ 'ತೆರೆಗಳು' ನಾಟಕ ಪ್ರಕಟಗೊಂಡಾಗ ಅದರ ಮುನ್ನುಡಿಯಲ್ಲಿ ಅಪ್ಪ ಒಂದು ಮಾತು ಬರೆದಿದ್ದರು:

"ನನಗೆ ಒಂದೆರಡು ವರ್ಷ ನಾಟಕ ಬರೆಯಲಾಗಲಿಲ್ಲ, ಆಗ ನಾನು ನಾಟಕಕಾರನಾಗಿ ತೀರಿಕೊಂಡವ ಎನ್ನುವ ಮಿತ್ರರು ಇದ್ದರು. ಆದರೆ ಅಷ್ಟು ಸಲೀಸಾಗಿ ತೀರುವ ಮನುಷ್ಯ ನಾನಲ್ಲ... ಎಂದುಕೊಳ್ಳುವ ಆಶೆ ನನಗೆ" ಅಂತ.

ಈಗ ಅದೇ ಧೈರ್ಯದ ಮೇಲೆ ನಾನು ಅಪ್ಪನ ಬರಹಗಳನ್ನು ಕನಿಷ್ಠ 10 ಹೊಸ ಪುಸ್ತಕಗಳಾಗಿ ಇನ್ನೊಂದು ವರ್ಷದೊಳಗೆ ನಿಮ್ಮ ಕೈಗಿಡಲು ಸಿದ್ಧಳಾಗುತ್ತಿದ್ದೇನೆ.

ಅವರ 40 ವರ್ಷಗಳ ಕ್ರಿಯಾಶೀಲ ಜೀವನದಲ್ಲಿ ನಾಲ್ಕು ಸಿನಿಮಾ ಮಾಡಿದ, ಹನ್ನೊಂದು ನಾಟಕ ಬರೆದು-ಆಡಿಸಿದ, 40 ಪುಸ್ತಕ ಸೃಷ್ಟಿಸಿ ಜೊತೆಗೆ 20 ವರ್ಷ ಪತ್ರಿಕೋದ್ಯಮಿಯಾಗಿದ್ದ ಸಾಹಸಗಳಿವೆ.

ಇವುಗಳಲ್ಲಿ ಯಾವುದನ್ನೇ ಆಗಲಿ, ಇನ್ನೊಂದು ಸೃಜನಶೀಲ ಮಾಧ್ಯಮಕ್ಕೆ ಅಳವಡಿಸುವುದೆಂದರೆ ಅದೊಂದು ಸವಾಲೇ ಸರಿ. ಬೇಬ ಅದನ್ನು ಚೆಂದವಾಗಿ ನಿರ್ವಹಿಸಿದ್ದಾಳೆಂಬ ನಂಬಿಕೆ ನನ್ನದು.

ನೀವು 'ಅವ್ವ' ನೋಡಿ ಹೇಗನ್ನಿಸಿತೆಂದು ತಿಳಿಸಿ.

■ ಗೌರಿ ಲಂಕೇಶ್



ಕಂಡಹಾಗೆ

ಒಂದು ಮನವಿ


ಕರ್ನಾಟಕದ ನೂರಾರು ಕಡೆ ಸುತ್ತಾಡಿ ಹಲವಾರು ಸಭೆ, ಸಮಾರಂಭ, ಚರ್ಚೆಗಳಲ್ಲಿ ಪಾಲ್ಗೊಂಡಿದ್ದ ಪಿ. ಲಂಕೇಶರ ಫೋಟೋಗಳು ನಿಮ್ಮಲ್ಲಿದ್ದರೆ ದಯವಿಟ್ಟು ನಮಗೆ ಕಳುಹಿಸಿ ಕೊಡಿ. (ಈ-ಮೇಲ್ ಮೂಲಕವಾದರೂ ಆದೀತು). ಅದೇ ರೀತಿ ಲಂಕೇಶ್ ಮಾಡಿರುವ ಭಾಷಣಗಳ ಧ್ವನಿಮುದ್ರಿತ ಕ್ಯಾಸೆಟ್ ನಿಮ್ಮ ಬಳಿ ಇದ್ದರೆ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಿಕೊಡಿ. ಜೊತೆಗೆ ಲಂಕೇಶರು ಬರೆದಿರುವ ಪತ್ರಗಳಿದ್ದರೆ ಅದರ ಜೆರಾಕ್ಸ್ ಕಳುಹಿಸಿ.



ಬರುವ ಮಾರ್ಚ್ 8 ರಂದು ನಡೆಯಲಿರುವ 'ಲಂಕೇಶ್' ಜನ್ಮದಿನ ಹಾಗೂ ಲಂಕೇಶ್ ವಾರಪತ್ರಿಕೆಯ ವಾರ್ಷಿಕೋತ್ಸವ ಕಾರ್ಯಕ್ರಮದಂದು ಈ ಫೋಟೋ, ಕ್ಯಾಸೆಟ್ ಹಾಗೂ ಪತ್ರಗಳನ್ನು ಪ್ರದರ್ಶಿಸಲಾದೀತೇ ಎಂದು ಯೋಚಿಸುತ್ತಿದ್ದೇವೆ. ದಯವಿಟ್ಟು ಸಹಕರಿಸಿ.

ಫೋಟೋ, ಪತ್ರ ಹಾಗೂ ಭಾಷಣದ ಕ್ಯಾಸೆಟ್‌ಗಳನ್ನು ಅಂಚೆ ಮೂಲಕ ಪತ್ರಿಕೆ ವಿಳಾಸಕ್ಕೆ ಕಳುಹಿಸಿ ಅಥವಾ ಈ-ಮೇಲ್ ಮೂಲಕವೂ ಕಳುಹಿಸಬಹುದು.

lankesh70@rediffmail.com



"ಮಾಂದಳಿರು ಬಿಸಿಲು ಬಂದರೆ ಬೊಡ್ಡೆ ಚಿಗುರದೆ" ಎಂದ

ಶಿವತೀರ್ಥನ್

ಮೊನ್ನೆ ಮೈಸೂರಿಗೆ ಹೋದಾಗ ಅಪ್ಪನ ಆಪ್ತಮಿತ್ರರಲ್ಲೊಬ್ಬರಾದ ಕವಿ ಕೆ.ನ. ಶಿವತೀರ್ಥನ್‌ರನ್ನು ನೋಡಲು ಹೋದೆ. ಅವರಿದ್ದ ಕೊಠಡಿಯನ್ನು ಪ್ರವೇಶಿಸುತ್ತಿದ್ದಂತೆ ಅನಾರೋಗ್ಯದಿಂದ ಮಂಚದ ಮೇಲೆ ಮಲಗಿದ್ದ ಶಿವತೀರ್ಥನ್‌ರು ನನ್ನತ್ತ ಕೈಚಾಚಿದರು. ಅವರತ್ತ ಹೋಗಿ, ಕುಳಿತು ಅವರನ್ನು ಅಪ್ಪಿಕೊಂಡೆ. ಅವರ ಗಂಟಲಿನಿಂದ "ಆಆಆಆ...." ಎಂಬ ದನಿ ಹೊರಟಾಗ ನನ್ನ ಕಣ್ಣಲ್ಲಿ ನೀರು. ಅವರ ದುಃಖ ಮತ್ತು ನನ್ನ ಕಣ್ಣೀರು ನಿಲ್ಲುವವರೆಗೂ ಅವರನ್ನು ಹಾಗೆ ಹಿಡಿದುಕೊಂಡಿದ್ದೆ.

ಶಿವತೀರ್ಥನ್‌ರ ದೇಹದ ಬಲಭಾಗಕ್ಕೆ stroke ಹೊಡೆದಿದೆ. ತಮ್ಮ ಗಟ್ಟಿ ಕಂಠದಿಂದಲೇ ಪ್ರೀತಿಯ ಮಾತುಗಳನ್ನು ಆಡುತ್ತಿದ್ದ ಅವರ ನಾಲಿಗೆ ಸ್ತಬ್ಧವಾಗಿದೆ. ಅವರ ಪ್ರಾಸಮಯ ಮಾತು, ನಗಿಸುವ ತಮಾಷೆಯ ಪದಗಳು, ಅವರ ಗಂಟಲಲ್ಲಿ ಸಿಕ್ಕಿಹಾಕಿಕೊಂಡಿವೆ. ಅವರ ಕವಿಹೃದಯ ನಿಶ್ಶಕ್ತ ದೇಹದ ಪಂಜರದಲ್ಲಿ ಬಂಧಿಸಲ್ಪಟ್ಟಂತಾಗಿದೆ.

ನನ್ನನ್ನು ಮಗಳಂತೆ ತುಂಬಾ ಪ್ರೀತಿಸುವ, ನನ್ನ ಬಗ್ಗೆ ಅಪಾರ ಕಾಳಜಿ ಹೊಂದಿರುವ ಶಿವತೀರ್ಥನ್‌ರು ಅಂದೂ ಕೂಡ, ಆ ಸ್ಥಿತಿಯಲ್ಲೂ ಕೂಡ ಅದನ್ನು ವ್ಯಕ್ತಪಡಿಸಿದರು: ಪುಟ್ಟ ಸ್ಲೇಟಿನ ಮೇಲೆ ಬಳಪದಲ್ಲಿ ತಮ್ಮ ಎಡಗೈಯಲ್ಲಿ ನಿಧಾನವಾಗಿ "ಪತ್ರಿಕೆ", "ಅಮ್ಮ", "ಪಾಪು (ಇಶಾ)", "ಕೆಲಸ" ಎಂದೆಲ್ಲಾ ಬರೆಯುತ್ತಾ ನನ್ನ ಕ್ಷೇಮಸಮಾಚಾರವಾಗಿ ನೋಡುತ್ತಾ ಎಲ್ಲದರ ಬಗ್ಗೆಯೂ ವಿಚಾರಿಸಿಕೊಂಡರು. ಅವರು ಕೇಳಿದ್ದ ವಿಷಯಗಳ ಬಗ್ಗೆ ವಿವರಿಸುತ್ತಾ "ಕೆಲಸ ಜಾಸ್ತಿಯಾಗಿ ಟೆನ್ಶನ್ ಹೆಚ್ಚಾಗಿದೆ" ಎಂದು ನಾನೆಂದಾಗ ಮತ್ತೆ ಸ್ಲೇಟ್ ಮೇಲೆ "You must do your duty" ಅಂತ ಬರೆದು 'ಟೆನ್ಶನ್ ಗೊಳಗಾಗಬೇಡ' ಎಂಬಂತೆ ಎಚ್ಚರಿಸಿದರು.

ಸುಮಾರು ಮೂವತ್ತು ವರ್ಷಗಳ ಕಾಲ ಸಾವಿರಾರು ವಿದ್ಯಾರ್ಥಿಗಳಿಗೆ ಕನ್ನಡ, ಸಾಹಿತ್ಯ, ಸಂಸ್ಕೃತಿ ಬಗ್ಗೆ ಪಾಠ ಹೇಳಿಕೊಟ್ಟ ಶಿವತೀರ್ಥನ್‌ರವರು ಕವಿಯಾಗಿ ತಮ್ಮ ಛಾಪನ್ನು ಮೂಡಿಸಿದವರು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಬಹಳ ಜನಕ್ಕೆ ಗೊತ್ತಿಲ್ಲದಿರುವುದೇನೆಂದರೆ ಇವರ ಸಾಮಾಜಿಕ ಕಾಳಜಿ. ಮೈಸೂರಿನ ಒಡನಾಡಿ ಸಂಸ್ಥೆಯ ಮಕ್ಕಳ ಭವಿಷ್ಯಕ್ಕೆಂದು ತಮ್ಮ ನಿವೃತ್ತ ವೇತನದಿಂದಲೇ ಹಣ ಸಹಾಯ ಮಾಡುವ ಅವರು ಚಾಮಲಾಪುರ ವಿದ್ಯುತ್ ಸ್ಥಾವರ ವಿರುದ್ಧದ ಹೋರಾಟಕ್ಕೂ ತಮ್ಮ ಕೈಲಾದಷ್ಟು ನೆರವು ನೀಡುವ ಸ್ವಭಾವದವರು. ಆದರೆ ಎಂದೂ ಇಂತಹ ನೆರವಿನ ಬಗ್ಗೆ ಬಹಿರಂಗವಾಗಿ ಮಾತನಾಡಿದವರಲ್ಲ, ವೇದಿಕೆಯನ್ನೇರಿ ತಮ್ಮ ಕಾಳಜಿ ಬಗ್ಗೆ ಭಾಷಣ ಬಿಗಿದವರಲ್ಲ. ಆದರೆ ಎಲ್ಲಾ ಜನಪರ ಹೋರಾಟಗಳಿಗೆ ತೆರೆಮರೆಯಲ್ಲಿದ್ದೇ ತಮ್ಮ ಬೆಂಬಲವನ್ನು ನೀಡುವ ಶಿವತೀರ್ಥನ್ ಅಂತಹ ಸಭೆಗಳಿಗೆ ಬಂದು ಸಭಿಕರೊಂದಿಗೆ ಸಾಮಾನ್ಯರಂತೆ ಕೂರುವ ಜಾಯಮಾನದವರು.

ಶಿವತೀರ್ಥನ್‌ರ ಬಗ್ಗೆ ಅಪ್ಪ ಬರೆದಿದ್ದ ಲೇಖನವೊಂದರಿಂದ ಹಲವು ಸಾಲುಗಳನ್ನು ನೀಡಿದರೆ ಅವರ ವ್ಯಕ್ತಿತ್ವ ಮತ್ತು ಅಪ್ಪ ಹಾಗೂ ಅವರ ನಡುವಿನ ಸ್ನೇಹ ಜನರಿಗೆ ಅರ್ಥವಾಗುತ್ತದೆ ಎನಿಸುತ್ತದೆ. "ನನಗೆ ಕೆಲವರನ್ನು ನೋಡಿದರೆ ವಿಸ್ಮಯವಾಗುತ್ತದೆ. ರಾಮಚಂದ್ರ ಶರ್ಮ, ಶಿವತೀರ್ಥ, ಚಂದ್ರಶೇಖರ ಕಂಬಾರ ಈ ಕೆಲವರು. ಇವರು ಪ್ರತಿಸಲ ಸಿಕ್ಕಾಗಲೂ ನನ್ನನ್ನು ಹಲವು ತರಹೆ ವ್ಯಸನಗಳಿಂದ ಕವನಗಳತ್ತ ಹೇಗೋ ಕರೆದೊಯ್ಯುತ್ತಾರೆ.... ಹುಟ್ಟುವವರಿಗೆಲ್ಲ ಅಣ್ಣ ಮತ್ತು ಬೆಳೆಯುವವರಿಗೆಲ್ಲ ತಮ್ಮನಂತಿರುವ ಈ ಶಿವತೀರ್ಥ ಗಂಗಾಮತ ಅಥವಾ ಬೆಸ್ತರ ಕುಲಕ್ಕೆ ಸೇರಿದವನು. ಸುಮಾರು ಇಪ್ಪತ್ತರಿಂದ ನೂರು ವರ್ಷಗಳೊಳಗೆ ಎಷ್ಟಾದರೂ ಇರಬಹುದಾದ ಈತ ನಮ್ಮಂತಹ ಅಸಹಾಯಕರಿಗೆ ತಮ್ಮ, ಅಣ್ಣ, ಮಿತ್ರ, ಶಿಷ್ಯ ಇತ್ಯಾದಿ ಏನಾದರೂ ಆಗಬಲ್ಲವನು.

ಪದ್ಯ ಬರೆಯುವುದು ಅನಂತತೆಯೊಂದಿಗಿನ ಮೆಲುದನಿಯ ಖಾಸಗಿ ಸಂಭಾಷಣೆ. ಈ ಅನಂತತೆ, ಈ ಖಾಸಗಿ ನಡುವೆ ಎಲ್ಲೋ ಕೂತು ಪದ್ಯ ಕೇಳುವ ಜನರೇ ಓದುಗರು. ಬೆಸ್ತರು, ಬೇಡರು, ಕುರುಬರು, ಹರಿಜನರು ನಮ್ಮಲ್ಲಿ ಬೆಳೆಸಿದ ಸಾವಿರಾರು ವರ್ಷದ ಈ ಖಾಸಗಿ ಸಂಭಾಷಣೆ ಅಲ್ಲಲ್ಲಿ ಕಾವ್ಯವಾಗಿ ಕಾಣಿಸಿಕೊಳ್ಳುತ್ತಿದೆ. ಅದರಲ್ಲಿ ಶಿವತೀರ್ಥನದೂ ಒಂದು ಮುಖ್ಯ ದನಿಯಾಗಲಿ. ಈ ನನ್ನ ಪ್ರೀತಿಯ ಮಿತ್ರ, ಸ್ನೇಹದ ಮನುಷ್ಯ ನನ್ನ ತುಂಟ ಮಾತುಗಳಿಂದ ನಿರುತ್ಸಾಹಿಯಾಗದೆ ಬರೆಯುವಂತಾಗಲಿ.

ಎಷ್ಟಾದರೂ ನಾನೂ ಇವನಂತಹವನೇ ಅಲ್ಲವೇ?"

ಅಪ್ಪನ ಬಗ್ಗೆ ಶಿವತೀರ್ಥನ್‌ರಿಗೂ ಎಷ್ಟು ಪ್ರೀತಿ ಎಂದರೆ ಅವರ 'ಗೆಂಡಗಯ್ಯ' ಕವನದ ಬಗ್ಗೆ ನಾಡಿನ ಸಾಹಿತಿಗಳೆಲ್ಲ ಮೆಚ್ಚುಗೆಯ ಮಾತುಗಳನ್ನು ಬರೆದಿದ್ದರೂ, ಅಪ್ಪ ಬರೆದಿದ್ದ, ಸ್ವಲ್ಪ ಟೀಕೆ ಹೆಚ್ಚಾಗಿದ್ದ ಸಾಲುಗಳನ್ನೇ ತಮ್ಮ 'ಗೆಂಡಗಯ್ಯನ ಒಲವು' ಎಂಬ ಪುಸ್ತಕದ ಬೆನ್ನುಡಿಯಾಗಿ ಪ್ರಕಟಿಸಿದ್ದರು. ಹಾಗೆ ಮಾಡುವ ಮೂಲಕ ಕವಿ ಶಿವತೀರ್ಥನ್ ತಮ್ಮ ಕಾವ್ಯವನ್ನು ಅಪ್ಪನ ನಿಷ್ಠುರ ವಿಮರ್ಶೆಗೆ ಬಿಟ್ಟುಕೊಟ್ಟರು. ಆದರೆ ಅಪ್ಪನ ಸ್ನೇಹವನ್ನು ಮಾತ್ರ ಬಿಡಲಿಲ್ಲ. ಇದೊಂದು ಶ್ರೇಷ್ಠ ಸಾಹಿತ್ಯಿಕ ಮೌಲ್ಯ ಅಲ್ಲವೆ? ನಾನು ಚಿಕ್ಕವಳಾಗಿದ್ದಾಗಿನಿಂದಲೂ ಅಪ್ಪನ ಸ್ನೇಹಿತರಲ್ಲಿ ಮರೆಯಲಾಗದ ಮೂರು ಜನರ ದನಿ ನನ್ನ ನೆನಪಿನಲ್ಲಿ ಸ್ಪಷ್ಟವಾಗಿ ಉಳಿದಿದೆ. ಅದು ರಾಮಚಂದ್ರ ಶರ್ಮ, ಆಲನಹಳ್ಳಿ ಕೃಷ್ಣ ಮತ್ತು ಶಿವತೀರ್ಥನ್‌ರ ದನಿ. ಆದರೆ ಶರ್ಮರ ದನಿಯಲ್ಲಿ ಠೇಂಕಾರ, ಕೃಷ್ಣರ ದನಿಯಲ್ಲಿ ಅಬ್ಬರ ಇದ್ದರೆ ಶಿವತೀರ್ಥನ್‌ರ ದನಿಯಲ್ಲಿ ನನಗೆ ಎಂದಿಗೂ ಕಂಡಿರುವುದು ಅವರ ಪ್ರೀತಿ, ಸೂಕ್ಷ್ಮತೆ ಮತ್ತು ಕಾಳಜಿ. ಆ ಕಾರಣದಿಂದಲೇ ಮೊನ್ನೆ ಅವರಿಗೆ ಹೇಳಿದೆ: "ನಿಮ್ಮ ಕಂಠ ಅದೆಂತಹ ಕಂಠ. ಅದನ್ನು ಅಡಗಿಸುವುದು ಅಂದ್ರೆ ಏನು? ಅಪ್ಪನಿಗೂ ಸ್ಟ್ರೋಕ್ ಆಗಿತ್ತು, ಆದರೆ ಅದನ್ನು ಎದುರಿಸಲು ಅಪ್ಪ ಗಟ್ಟಿ ಮನಸ್ಸು ಮಾಡಿದರು, ಆತ್ಮವಿಶ್ವಾಸ ಹೊಂದಿದ್ದರು. ಅದಕ್ಕೇ ಅದನ್ನು ಮೀರಿ ನಿಂತು ಸ್ಟ್ರೋಕ್ ಆದ ನಂತರ ಆರು ವರ್ಷ ಕ್ರಿಯಾಶೀಲರಾಗಿ ಬದುಕಿದರು. ನೀವೂ ಹಾಗೆ ಮಾಡಬೇಕು. ಅಷ್ಟೇ ಅಲ್ಲ, ಸದ್ಯದಲ್ಲೇ ನಮ್ಮ ಆಫೀಸಿಗೆ ಬಂದು ಕೆಳಗಿನಿಂದಲೇ 'ಗೌರಿ' ಅಂತ ನೀವು ಕರೆದು, ನಾನು 'ಶಿವತೀರ್ಥನ್ ಬಂದರು' ಅಂತ ಸಂತೋಷಗೊಳ್ಳಬೇಕು" ಅಂದೆ ಅವರಿಗೆ.

ಅವರು ತಮ್ಮ ಎಡಗೈಯಿಂದ ನನ್ನ ಕೈಹಿಸುಕಿ ಹಾಗೇ ಮಾಡುವುದಾಗಿ ಭರವಸೆ ನೀಡಿದರು. ಆಗ "ನೀವು ಕವಿ. ನಿಮ್ಮಲ್ಲಿ ಮೂಡುವ ಕವನಗಳನ್ನು ಸ್ಲೇಟಿನ ಮೇಲೆ ಬರೆಯುತ್ತಿರಿ. ಅವನ್ನು ನನಗೆ ಕಳುಹಿಸಿ" ಎಂದೆ. ಕೆಲಕ್ಷಣ ಯೋಚಿಸಿದ ಶಿವತೀರ್ಥನ್ ಈ ಸಾಲುಗಳನ್ನು ಬರೆದು ಕೊಟ್ಟರು:

"ಮಾಂದಳಿರು ಬಿಸಿಲು ಬಂದರೆ
ಬೊಡ್ಡೆ ಚಿಗುರದೆ"

ನನ್ನ ಪ್ರೀತಿಯ ಶಿವತೀರ್ಥನ್‌ರು ಅದನ್ನು ಬೇಗ ಚೇತರಿಸಿಕೊಂಡು ಮತ್ತೆ ತಮ್ಮ ಗಟ್ಟಿ ಕಂಠದಲ್ಲಿ "ಹೇಗಿದ್ದೀಯಾ ಮರಿ" ಎನ್ನುತ್ತಾ ನನ್ನನ್ನು ಮತ್ತೆ ತಮ್ಮ ಎರಡೂ ಕೈಗಳಿಂದ ಅಪ್ಪಿಕೊಳ್ಳುವಂತಾಗಲಿ ಎಂದು ಆಶಿಸುತ್ತೇನೆ....

■ ಗೌರಿ

ಕೊರಂಗು ಮತ್ತೆ ಬಚಾವ್?

ಬೆಕ್ಕಿಗೆ ಒಂಭತ್ತು ಜೀವ!

ಸದ್ಯ ಬೆಂಗಳೂರು ಕ್ರೈಂ ಜಗತ್ತಿನಲ್ಲಿ ಅತ್ಯಂತ ಅಪಾಯಕಾರಿ ಪಡೆಯೆಂದರೆ ಅದು ಕೊರಂಗು ಗ್ಯಾಂಗ್ ಎಂಬ ಬಗ್ಗೆ ಯಾರಲ್ಲೂ ಅನುಮಾನಗಳಿಲ್ಲ. ಮಚ್ಚನ ಹತ್ಯೆಯ ನಂತರ ತಲೆಕೆಟ್ಟ ಮಂಗನಂತೆ ಒಂದಲ್ಲ ಒಂದು ಅನಾಹುತ ಮಾಡಿಕೊಂಡೇ ಬಂದವನು ಕೊರಂಗು ಬಹುಶಃ 2006ರ ಅಕ್ಟೋಬರ್ 16ರ ಸಂಜೆ ಏಳು ಗಂಟೆ ಇಪ್ಪತ್ತೈದು ನಿಮಿಷಕ್ಕೆ ಚಿತ್ರದುರ್ಗ ಸಮೀಪದ ಸಿರಾ-ಹಿರಿಯೂರುಗಳ ನಡುವಿನ ಜವಗೊಂಡನಹಳ್ಳಿಯ ಜೈಭಾರತ್ ಡಾಬಾದ ಮೇಲೆ ಹೆಬ್ಬೆಟ್ ಮಂಜನ ಗ್ಯಾಂಗ್ ದಾಳಿ ನಡೆಸಿ ಕೊರಂಗೂನ ಎಡಗೈಯನ್ನೆ ಕತ್ತರಿಸಿ ಹಾಕಿತಲ್ಲ; ಅದಾದ ನಂತರವಾದರೂ ಕೊರಂಗು ಬುದ್ಧಿ ಕಲಿಯಬೇಕಿತ್ತು.

ಸಿಡಿದದ್ದು ಕೇವಲ ಒಂದೇ ಬಾಂಬಾ? ಜೊತೆಗೆ ಮೂರ್‍ನಾಲ್ಕು ಸೇರಿಕೊಂಡು ಸ್ಫೋಟಗೊಂಡವಾ? ಸಿಡಿತದಿಂದಾಗಿ ಕೊರಂಗೂನ ಬಲಗಾಲೇ ಲ್ಯಾಪ್ಸ್ ಎಂಬುದು ಎಷ್ಟು ನಿಜ? ಅಥವಾ ಹೀಗೊಂದು ಗುಲ್ಲೆಬ್ಬಿಸಿ ಯಾವ ತಲೆ ಉರುಳಿಸುವುದು ಆತನ ತಂತ್ರವಾಗಿರಬಹುದು? ಏಕೆ ಆಂಧ್ರದ ಪೊಲೀಸರು ಇಡೀ ಘಟನೆಯ ಕುರಿತಂತೆ ತುಟಿಪಿಟಕ್ಕೆನ್ನುತ್ತಿಲ್ಲ?


ಪ್ರಶ್ನೆಗಳೆಲ್ಲ ಪ್ರಶ್ನೆಗಳಾಗಿಯೇ ಉಳಿದುಬಿಟ್ಟವೆ. ಕಳೆದ ಭಾನುವಾರ ರಾತ್ರಿ, ಅಂದರೆ 2008ರ ಜನವರಿ 27ರ ರಾತ್ರಿ ಆಂಧ್ರದ ಚಿತ್ತೂರು-ಯರಗೊಂಡ ರಸ್ತೆಯಲ್ಲಿ ಹೋಗುತ್ತಿದ್ದ ಕೊರಂಗು ಕಾರೊಳಗಿದ್ದ crude ಬಾಂಬ್ ಒಂದು ಸ್ಫೋಟಗೊಂಡಿತೆಂಬುದು ಒಂದು ಸುದ್ದಿ. ಹಾಗೇ ಸಿಡಿದ ಕೈ ಬಾಂಬಿಗೆ ಕೊರಂಗು ಬಲಗಾಲೇ ಛಿದ್ರಗೊಂಡಿದೆಯೆಂಬುದು ಇನ್ನೊಂದು ಸುದ್ದಿ. ಇಲ್ಲ; ಇನ್ನಾರೋ ವಿರೋಧಿ ಗ್ಯಾಂಗ್ ಕೊರಂಗು ಪ್ರಯಾಣಿಸುತ್ತಿದ್ದ ಕಾರೊಳಗೆ ಕೈ ಬಾಂಬ್ ಎಸೆದು ನಾಪತ್ತೆಯಾಯಿತೆಂಬುದು ಮತ್ತೊಂದು ಸುದ್ದಿ. ಕೊರಂಗು ಸದ್ಯ ಆಂಧ್ರದ ಯಾವುದೋ ಆಸ್ಪತ್ರೆಯಲ್ಲಿ ಮಲಗಿದ್ದಾನೆಂದೂ, ಆತನ ಕಾರೊಳಗೇ ಇದ್ದ ಮೂರ್‍ನಾಲ್ಕು ಬಾಂಬುಗಳು ಒಟ್ಟೊಟ್ಟಿಗೇ ಸ್ಫೋಟಿಸಿದವೆಂದೂ, ಹಾಗೊಮ್ಮೆ ಆತನ ಕಾರೊಳಗಿದ್ದ ಅಷ್ಟೂ ಬಾಂಬುಗಳೇನಾದರೂ ಬೆಂಗಳೂರಿಗೆ ಬಂದಿದ್ದರೆ ಈ ಹೊತ್ತಿಗೆ ಲಗ್ಗೆರೆಯ ರೌಡಿ ಮುಲಾಮನೋ, ಕಾಮಾಕ್ಷಿಪಾಳ್ಯದ ಗೋಪಾಲಯ್ಯನೋ, ಕಡಬಗೆರೆಯ ಪಾಯ್ಸನ್ ರಾಮನೊ; ನಿಕಾಲಿಯಾಗಿ ಬಿಡುತ್ತಿದ್ದರೆಂದೂ ಭೂಗತ ಕೊಂಪೆಗಳ ಸಂದಿಗೊಂದಿಗಳಲ್ಲಿ ರೂಮರ್ ಹೊಗೆಯಾಡುತ್ತಲೇ ಇದೆ.

ಮತ್ತೊಂದೆಡೆ ಬೆಂಗಳೂರು ಅಂಡರ್‌ವರ್ಲ್ಡ್‌ನ ಬಹುತೇಕ ಅಡ್ಡೆಗಳೆಲ್ಲ ಖಾಲಿ ಹೊಡೆಯುತ್ತಿವೆ. ಬೆನ್ನಲ್ಲೇ ಕೊರಂಗು ಬಂಟ ಕೋತಿರಾಮನ ತಂಡದ ಪ್ರಮುಖ ಬ್ಯಾಟ್ಸ್‌ಮನ್ ದಿನೇಶ ಮತ್ತು ಬನಶಂಕರಿಯ ಅರಸಯ್ಯನ ಬಲಗೈ ಬಂಟ ಮರ್ಡರ್ ಸೂರಿಯನ್ನು ಒಟ್ಟೊಟ್ಟಿಗೆ ಹಿಡಿದು ಜೈಲಿಗೆ ಹಾಕಿದ್ದಾರೆ. ಮಚ್ಚನ ಹತ್ಯೆಯ ನಂತರ ಭೂಗತನಾದ ಮುಲಾಮ ಈತನಕ ಎಲ್ಲೂ ಬಹಿರಂಗ

ರಾ. ಸೋಮನಾಥ್

ವಾಗಿ ಕಾಣಿಸಿಕೊಂಡಿಲ್ಲ. ಕಾಮಾಕ್ಷಿಪಾಳ್ಯದ ಗೋಪಾಲಯ್ಯನಂತೂ ಶಸ್ತ್ರಧಾರಿ ಪೊಲೀಸರಿಲ್ಲದೆ ಮನೆಯಿಂದಾಚೆ ಹೆಜ್ಜೆಯಿಡುತ್ತಿಲ್ಲ. ತಿಮ್ಮೇನಹಳ್ಳಿ ಗೋವಿಂದನನ್ನು ಚಿಲ್ರೇ ಹುಡುಗರು ಕತ್ತರಿಸಿ ಹಾಕಿದ ನಂತರವಂತೂ ಕೊರಂಗು ವಿರೋಧಿ ಪಾಳಯದ ಯಾರೊಬ್ಬರೂ ನೆಮ್ಮದಿಯಿಂದ ನಿದ್ರಿಸುತ್ತಿಲ್ಲ.


ಈಗ ಹರಿಬಿಟ್ಟ ಬಾಂಬ್ ಬ್ಲಾಸ್ಟ್ ಮತ್ತು ಕೊರಂಗು ಕಾಲು ಲ್ಯಾಪ್ಸ್ ಕತೆ ಈ ಎಲ್ಲದರ ಮುಂದುವರಿಕೆ ಮಾತ್ರ. ಸದ್ಯ ಬೆಂಗಳೂರು ಕ್ರೈಂ ಜಗತ್ತಿನಲ್ಲಿ ಅತ್ಯಂತ ಅಪಾಯಕಾರಿ ಪಡೆಯೆಂದರೆ ಅದು ಕೊರಂಗು ಗ್ಯಾಂಗ್ ಎಂಬ ಬಗ್ಗೆ ಯಾರಲ್ಲೂ ಅನುಮಾನಗಳಿಲ್ಲ. ಮಚ್ಚನ ಹತ್ಯೆಯ ನಂತರ ತಲೆಕೆಟ್ಟ ಮಂಗನಂತೆ ಒಂದಲ್ಲ ಒಂದು ಅನಾಹುತ ಮಾಡಿಕೊಂಡೇ ಬಂದವನು ಕೊರಂಗು. ಬಹುಶಃ 2006ರ ಅಕ್ಟೋಬರ್ 16ರ ಸಂಜೆ ಏಳು ಗಂಟೆ ಇಪ್ಪತ್ತೈದು ನಿಮಿಷಕ್ಕೆ ಚಿತ್ರದುರ್ಗ ಸಮೀಪದ ಸಿರಾ-ಹಿರಿಯೂರುಗಳ ನಡುವಿನ ಜವಗೊಂಡನಹಳ್ಳಿಯ ಜೈಭಾರತ್ ಡಾಬಾದ ಮೇಲೆ ಹೆಬ್ಬೆಟ್ ಮಂಜನ ಗ್ಯಾಂಗ್ ದಾಳಿ ನಡೆಸಿ ಕೊರಂಗೂನ ಎಡಗೈಯನ್ನೇ ಕತ್ತರಿಸಿ ಹಾಕಿತಲ್ಲ; ಅದಾದ ನಂತರವಾದರೂ ಕೊರಂಗು ಬುದ್ಧಿ ಕಲಿಯಬೇಕಿತ್ತು.



ಕೊರಂಗು

ಆರೆಂಟು ತಿಂಗಳುಗಳ ಕಾಲ ಮಲ್ಯ ಆಸ್ಪತ್ರೆಯಲ್ಲಿ ತುಂಡಾದ ಕೈ ಜೋಡಣೆಗಾಗಿ ಕೊರಂಗು ಪಟ್ಟ ಪಾಡು ಅಷ್ಟಿಷ್ಟಲ್ಲ. ಆತನ ನೆಚ್ಚಿನ ಬಂಟ ದೀಪು ಜವಗೊಂಡನಹಳ್ಳಿಯ ಡಾಬಾದಲ್ಲೇ ಕೊಲೆಯಾಗಿ ಹೋಗಿದ್ದ. ಎಡಗೈ ತುಂಡಾಗುವುದಕ್ಕೂ ಮೊದಲೇ ಕೊರಂಗುಗೆ ಬೀಪಿ, ಶುಗರ್, ಆಸಿಡಿಟಿ ಇತ್ಯಾದಿ ನೂರೆಂಟು ಕಾಯಿಲೆಗಳಿದ್ದವು. ವಯಸ್ಸು ಐವತ್ತನ್ನು ಸಮೀಪಿಸುತ್ತಿತ್ತು. ಬಹುಶಃ ಬೇರೆ ಯಾರೇ ರೌಡಿಯಾಗಿದ್ದರೆ ಅಲ್ಲಿಗೆ ಅಂಡರ್‌ವರ್ಲ್ಡ್ ಸಹವಾಸವೇ ಸಾಕೆಂದುಬಿಡುತ್ತಿದ್ದರು. ಆದರೆ ಕೊರಂಗು ಹುಟ್ಟು ತಿಕ್ಕಲ. ಹೆಸರೇ ಹೇಳುವಂತೆ ತಮಿಳಿನಲ್ಲಿ ಕೊರಂಗು ಎಂದರೆ ಕೋತಿ. ಎಂಟು ತಿಂಗಳು ಮಲ್ಯ ಆಸ್ಪತ್ರೆಯಲ್ಲಿ ಕಳೆದವನು ಒಂದೋ ಮುಲಾಮನ್ನ ತೆಗಿತೀನಿ ಅಥವಾ ಹೆಬ್ಬೆಟ್ಟು ಮಂಜನನ್ನು ಮುಗಿಸಿದ ನಂತರವೇ ಎಲ್ಲರಿಗೂ ಮುಖಾ ತೋರಿಸ್ತೀನಿ ಎಂದು ಶಪಥಗೈದ. ಅದಕ್ಕೂ ಮುನ್ನ ಕೊರಂಗು ಬಂಟರು ತಿಮ್ಮೇನಹಳ್ಳಿ ಸೂರಿ ಮತ್ತು ಟೋನಿಯನ್ನು ಕೆಂಗೇರಿಯ ಬಳಿ ಅಟ್ಟಾಡಿಸಿ ಕೊಂದಿದ್ದು ಕೂಡ ಆತನ ಚಂಚಲ ಮನಸ್ಥಿತಿಯ ಸಂಕೇತವಾಗಿತ್ತು.

ಬಹುಶಃ ಟೋನಿ ಮತ್ತು ಸೂರಿ ಕೊಲೆಯಾಗದೇ ಹೋಗಿದ್ದರೆ ಕೊರಂಗು ಮೇಲೆ ಹೆಬ್ಬೆಟ್ಟು ಮಂಜನ ಗ್ಯಾಂಗ್ ದಾಳಿ ಮಾಡುತ್ತಲೇ ಇರಲಿಲ್ಲ. ಹೆಬ್ಬೆಟ್ಟು ಮಂಜ ಹತ ತಿಮ್ಮೇನಹಳ್ಳಿ ಸೂರಿಯ ನಂಬಿಕಸ್ತ ಶಿಷ್ಯ. ಜೊತೆಗೆ ಶಿವಮೊಗ್ಗ




ಕಡಬಗೆರೆ ರಾಮ

ನಾಗನಿಗೆ ಪರಮಾಪ್ತ. ಇಂಥವನನ್ನು ಕರೆತಂದು ತಲೆ ಕೆಡಿಸಿ ದುಡ್ಡು ಕೊಟ್ಟು ಕೊರಂಗು ಮೇಲೆ ಛೂಬಿಟ್ಟವನು ಮುಲಾಮ. ಮುಲಾಮ ಮತ್ತು ಕೊರಂಗು ನಡುವಿನ ಜಿದ್ದಾಜಿದ್ದಿ ಇಂದು ನಿನ್ನೆಯದಲ್ಲ. ಅದಕ್ಕೆ ರೌಡಿ ಬಲರಾಮನ ಕಾಲದಿಂದಲೂ ಅಸ್ತಿತ್ವವಿದೆ.

ಜವಗೊಂಡನಹಳ್ಳಿ ಡಾಬಾ ಮೇಲೆ ನಡೆದ ದಾಳಿ ಮೇಲುನೋಟಕ್ಕೆ ಸೂರಿ ಹತ್ಯೆಗೆ ಪ್ರತೀಕಾರವಾಗಿ ಕಂಡರೂ ಆಳದಲ್ಲಿ ಅದು ಮುಲಾಮ-ಕೊರಂಗು ಜಿದ್ದಾಜಿದ್ದಿಯಾಗಿತ್ತು. ಇದಾದ ನಂತರ ಮುಲಾಮ ಅದೆಷ್ಟು ಹುಷಾರಾದನೆಂದರೆ even ಆತನ ಎಡಗೈ ಬಲಗೈಗಳಂತಿದ್ದ ರಾಮ-ಲಕ್ಷ್ಮಣರೇ ಆತನಿಂದ ದೂರಾದರೆಂದೂ, ತಮ್ಮದೇ ಪ್ರತ್ಯೇಕ ಗ್ಯಾಂಗ್ ಕಟ್ಟಿಕೊಂಡು ಮುಲಾಮನನ್ನೇ ಮುಗಿಸಲು ಹವಣಿಸುತ್ತಿದ್ದಾರೆಂದೂ ಸುದ್ದಿ ಹಬ್ಬಿತ್ತು.


ಹಾಗೇ ಹುಯಿಲೆಬ್ಬಿಸಿದ್ದೇ ಮುಲಾಮ. ಅದು ಕೊರಂಗುನನ್ನು ದಿಕ್ಕುತಪ್ಪಿಸಲು ಆತ ಹೆಣೆದ ತಂತ್ರವಾಗಿತ್ತು. ಒಂದೆಡೆ ತಾನು ಭೂಗತನಾಗಿ ಹೋದ ಹಾಗೆ ತೋರಿಸಿ... ಹೋಗ



ಗೌರಿಶಂಕರ

ಕೈ ಜೋಡಿಸಿದ್ದ.

ಕಾಮಾಕ್ಷಿಪಾಳ್ಯದ ಗೂಳಿ ಬಸವ, ಆತನ ಬಾ[illegible] ಧರಣಿ, ಮುಲಾಮ, ಪಾಯ್ಸನ್ ರಾಮ, ನೆಲಮಂಗ[illegible] ಚೆತ್ತನಗೆರೆ ಸೀನ, ಇವರೆಲ್ಲರ ಬೆಂಗಾವಲಾಗಿ [illegible] ಚೆನ್ನಿಗಪ್ಪನ ಮಗ ಗೌರಿಶಂಕ್ರ. ಪರಿಣಾಮ ಅ[illegible] ಭೀಕರವಾಗಿತ್ತೆಂದರೆ ಇಲ್ಲಿಗೆ ತಿಂಗಳ ಹಿಂದೆ ಅ[illegible] ಜಡೇಜಾ ರವಿ ಹತ್ಯೆಯ ನಂತರ ಇವರೆಲ್ಲರೂ [illegible] ಮಂಗಲದ ಡಾಬಾ ಒಂದರಲ್ಲಿ ಕಲೆತು ವಿಲಕ್ಷಣ ಒ[illegible] ವೊಂದಕ್ಕೆ ಬಂದಿದ್ದಾರೆ. ಆ ಪ್ರಕಾರ ರಾಮ-ಲಕ್ಷ[illegible] ಸುಂಕದಕಟ್ಟೆ ಏರಿಯಾದಲ್ಲಿ ಯಾರ್‍ಯಾರು ದು[illegible] ಗಳಿದ್ದಾರೋ ಅವರನ್ನು ಕ್ಲಿಯರ್ ಮಾಡತಕ್ಕದ್ದು[illegible] ಗೂಳಿಬಸವ ಮತ್ತು ಧರಣಿ ಕಾಮಾಕ್ಷಿಪಾಳ್ಯವನ್ನೂ, ಕಡಬಗೆರೆ ಪಾಯ್ಸನ್ ರಾಮ, ವೈನ್ಸ್ ಲೋಕಿ ಮತ್ತು ಆತನ ಅಣ್ಣ ರಾಜ ಸೇರಿಕೊಂಡು ಬ್ಯಾಡರಹಳ್ಳಿ, ಹೇರೋಹಳ್ಳಿ, ಅಂಜನಾನಗರದಿಂದ ತಾವರೆಕೆರೆ ಮಾಗಡಿಯ ತನಕ ಯಾರೇ ದುಷ್ಮನ್ ಕಂಡರೂ ಮುಗಿಸಿಬಿಡಬೇಕೆಂದೂ ಹಾಗೇ ನೆಲಮಂಗಲ ಸುತ್ತಮುತ್ತಲ ಏರಿಯಾಗಳಲ್ಲಿ ಚೆತ್ತನಗೆರೆ ಸೀನನ ಆದಿಪತ್ಯ ಸ್ಥಾಪನೆಯಾಗಬೇಕೆ[illegible] ಪರಸ್ಪರ ಒಪ್ಪಂದಕ್ಕೆ ಬಂದಿದ್ದಾರೆ. ಇವರೆಲ್ಲರನ್ನೂ [illegible] ಸೇರಿಸಿ ಮಾಸ್ಟರ್ ಪ್ಲಾನ್ ಹಾಕಿದವನು ಮುಲ[illegible]




ಮುಲಾಮ

ಟಾರ್ಗೆಟ್ ಕಡಬಗೆರೆ ರಾಮು!

ಇವತ್ತಿಗೆ ವಾರದ ಹಿಂದಷ್ಟೇ ಮಾಗಡಿ ರಸ್ತೆ ತಾವರೆಕೆರೆ ಸಮೀಪದ ಮಾಚೋಹಳ್ಳಿ ಕ್ರಾಸ್ ಬಳಿ ರಾತ್ರಿ ಹೊತ್ತು ಕುಡಿದು ಚಿತ್ತಾಗಿದ್ದ ಕೆಲ ಹುಡುಗರು ಸುಮ್ಮನೇ ಪರೀಕ್ಷಿಸಲೆಂದು ಎಸೆದ ಕೈಬಾಂಬ್ ಒಂದು ಪಾಳು ಮನೆಯ ಗೋಡೆಯನ್ನೇ ಸೀಳಿ ಹಾಕಿದ್ದು ಇಡೀ ಪ್ರಕರಣಕ್ಕೆ ಬೇರೆಯದೇ ಆಯಾಮದ ಸುಳಿವು ಕೊಡುತ್ತಿದ್ದೆ.

ಹೀಗೆ ರಾತ್ರಿ ಹೊತ್ತು ಕೈ ಬಾಂಬ್ ಎಸೆದು ಪರೀಕ್ಷಿಸಿದ್ದು ಕಡಬಗೆರೆ ರಾಮನ ಹುಡುಗರೆಂಬುದು ವದಂತಿ. ಬಾಂಬ್ ಸಿಡಿದ ಜಾಗದಿಂದ ಕಡಬಗೆರೆಗೆ ಕೇವಲ ಒಂದೂವರೆ ಕಿ.ಮೀ. ದೂರ. ಜಡೇಜಾರವಿಯನ್ನು ಕೊರಂಗು ಗ್ಯಾಂಗ್ ಮುಗಿಸಿದ ಮೇಲೆ ಕಡಬಗೆರೆ ರಾಮ ಅದೆಷ್ಟು ಹುಷಾರಾಗಿದ್ದಾನೆಂದರೆ ಆತ ಕಡಬಗೆರೆಯಿಂದ ಎಲ್ಲಿಗೆ ಹೋಗಬೇಕೆಂದರೂ ಕನಿಷ್ಠ ಹತ್ತು ಗಾಡಿಗಳಿರುತ್ತವೆ. ಮೊದಲು ಮೂರು ಗಾಡಿಗಳು ಪಾಸ್ ಆದ ನಂತರವೇ ರಾಮನ ಕಾರು ಓಡುತ್ತದೆ. ಮಾಚೋಹಳ್ಳಿ, ಕಡಬಗೆರೆ, ಜನಪ್ರಿಯ ಟೌನ್‌ಶಿಪ್, ಅಂಜನಾನಗರ, ಗೊಲ್ಲರಹಟ್ಟಿ ಸುತ್ತಮುತ್ತ ಯಾರೇ ಅಪರಿಚಿತ ಹುಡುಗನನ್ನು ಕಂಡರೂ ರಾಮನ ಗ್ಯಾಂಗ್ ಎಳೆದೊಯ್ದು ವಿಚಾರಿಸುತ್ತದೆ. ಸಂದೇಹ ಬಂದರೆ ಹೊಡೆದು ಬಾಯಿ ಬಿಡಿಸುತ್ತದೆ. ಕಮ್ಮಿಯೆಂದರೂ ನೂರು ಮಂದಿಯ ಗ್ಯಾಂಗ್ ರಾಮನ ಜೊತೆಗಿರುತ್ತೆ, ರಿವಾಲ್ವರ್, ಬಾಂಬ್ ಎಲ್ಲವೂ ಯಥೇಚ್ಛ. ಇದೆಲ್ಲ ಗೊತ್ತಿದ್ದೇ ಕೊರಂಗು ಇನ್ನೂರು ಜನರ ಪಡೆ ಕಟ್ಟಿ ಕಡಬಗೆರೆ ರಾಮನ ಗ್ಯಾಂಗ್ ಮೇಲೆ ದೊಡ್ಡ ಮಟ್ಟದ ದಾಳಿಗೆ ಸ್ಕೆಚ್ ಹಾಕಿದ್ದನೆ? ಪೊಲೀಸರು ಮತ್ತು ದುಷ್ಮನ್‌ಗಳ ಗಮನವನ್ನು ಆಂಧ್ರದತ್ತ ಸೆಳೆದು ತನ್ನ ದಾಳಿಯನ್ನು ಸಲೀಸು ಮಾಡಿಕೊಳ್ಳಲು ಕೊರಂಗು ಇಂಥಾದೊಂದು ಗುಲ್ಲೆಬ್ಬಿಸಿರಬಹುದೆ?

ಏಕೆಂದರೆ ಬಾಂಬ್ ಸಿಡಿದ ರಾತ್ರಿ ಕೊರಂಗು ಬೆಂಗಳೂರಿನಲ್ಲೇ ಇದ್ದನೆಂಬ ಮಾಹಿತಿ ಪೊಲೀಸರಿಗಿದೆ. ಸಿಸಿಬಿಯ ಇನ್ಸ್‌ಪೆಕ್ಟರ್ ಬಾಳೇಗೌಡರು ವಿಶೇಷವಾಗಿ ಕೊರಂಗು ಬೆನ್ನಿಗೆ ಬಿದ್ದದ್ದು ಈ ಥರದ ವದಂತಿಗೆ ಕಾರಣವಾಗಿರಬಹುದೆ?



ಇನ್ಸ್‌ಪೆಕ್ಟರ್ ಬಾಳೇಗೌಡ

ಗುಲಬರ್ಗಾದಲ್ಲಿ ಡೋಂಗಿ ಗುರು ರವಿಶಂಕರನ ತಾಲೀಮು

ರವಿಶಂಕರ ಗುರೂಜಿ ಎಂಬ ತಗಡು ಆಧ್ಯಾತ್ಮವಾದಿ ಗುರುವೊಬ್ಬ ಇತ್ತೀಚೆಗೆ ಕರ್ನಾಟಕದ ಮೂಲೆಮೂಲೆಗೂ ಹೋಗಿ ಎಲ್ಲರ ತಲೆಗಳನ್ನು ಹಾಗೂ ಜೇಬುಗಳನ್ನು ಬೋಳಿಸುತ್ತಿರುವ ಸಂಗತಿ ಎಲ್ಲರಿಗೂ ವೇದ್ಯವಾಗಿರುವಂಥದ್ದೆ. ಇತ್ತೀಚೆಗೆ ಈ ಡೋಂಗಿ ಗುರುವಿನ ಸವಾರಿ ಗುಲಬುರ್ಗಿಯ ನಗರಕ್ಕೆ ಆಗಮಿಸುವ ಮೂಲಕ ದೊಡ್ಡ ಪ್ರಮಾಣದ ಹಗಲು ದರೋಡೆಯನ್ನೆ ನಡೆಸಿತು. ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಆಯೋಜಿಸಲಾದ ಈ ಸಭೆಯ ಕೊನೆಯವರೆಗೆ ನಡೆದದ್ದು ಬೆಂಗಳೂರಿನ ತಮ್ಮ ಆಶ್ರಮದಿಂದ ತಂದಿದ್ದ ಔಷಧಿ ಹಾಗೂ ಪುಸ್ತಕಗಳ ವ್ಯಾಪಾರ ಮಾತ್ರ. ಆದರೆ ಇವನ್ನೆಲ್ಲ ಅರಿಯುವ ಚಿಕಿತ್ಸಕ ಬುದ್ಧಿ ಇಲ್ಲದ ಇಲ್ಲಿನ ಅಬ್ಬೇಪಾರಿ ಸಂಘಟಕರು ರವಿಶಂಕರ ಎಂಬ ಡೋಂಗಿ ಗುರುವನ್ನು ತಮ್ಮ ತಲೆಯ ಮೇಲೆ ಹೊತ್ತು ಕುಣಿದದ್ದು ಮೂರ್ಖತನದ ಪರಮಾವಧಿಯಾಗಿತ್ತು.

ಯೋಗ ಉತ್ತಮ ಜೀವನ ನಿರ್ವಹಣೆಗೆ, ರೋಗ ರುಜಿನಗಳು ಬರದಂತೆ ತಡೆಯಲು ಪರಿಣಾಮಕಾರಿಯಾದ ಕ್ರಮವೇನೋ ಹೌದು. ಆದರೆ ಇದನ್ನು ತಗಡು ರವಿಶಂಕರನ ಮೂಲಕ ಕಲಿಯಬೇಕಾಗಿದೆಯಲ್ಲ ಎಂಬುದು ವ್ಯಥೆಯ ಸಂಗತಿಯಾಗಿದೆ. ತನ್ನ ಸುತ್ತಮುತ್ತ ದೇಶದ ವಿವಿಧ ರಾಜ್ಯಗಳ ಜನಗಳನ್ನು ಕೂಡಿಹಾಕಿಕೊಂಡು ಅವರೆಲ್ಲ ತನ್ನ ಆಧ್ಯಾತ್ಮ ಹಾಗೂ ಯೋಗ ಜೀವನಕ್ಕೆ ಮಾರುಹೋದವರು ಎಂದು ವೇದಿಕೆಯ ಮೇಲೆ ತೋರಿಸಿಕೊಳ್ಳುವುದು ಡೋಂಗಿ ರವಿಶಂಕರನ ಲೇಟೆಸ್ಟ್ ಚಾಳಿ. ಇದಿಷ್ಟೇ ಆದರೆ ಜನರನ್ನು ಆಕರ್ಷಿಸಲು ಸಾಧ್ಯವಾಗಲಿಕ್ಕಿಲ್ಲ ಎಂದು ತಿಳಿದಿರುವ ರವಿಶಂಕರ ತನ್ನ ಸುತ್ತ ಮುತ್ತ ಹದಿಹರೆಯದ ಬಿಳಿ ಬಣ್ಣದ ಬಟ್ಟೆ ತೊಟ್ಟುಕೊಂಡಿರುವ ಲಲನೆಯರನ್ನು ಸಾಕಿಕೊಂಡಿದ್ದಾನೆ. ಇವರಾದರೋ ಬೆಳಂಬೆಳಗ್ಗೆ ಎದ್ದು ಚಂದ್ರಶೇಖರ ಪಾಟೀಲ ಕ್ರೀಡಾಂಗಣಕ್ಕೆ ಬಳುಕುತ್ತ ಬರುವ ಪರಿ ಎಲ್ಲ ಯೋಗ ಶಿಬಿರಾರ್ಥಿಗಳನ್ನು ದಂಗುಬಡಿಸಿತ್ತು, ಇವರ ವಯ್ಯಾರ-ಒನಪು, ಲಿಪ್‌ಸ್ಟಿಕ್‌ಗಳಿಗೆ ಮಾರುಹೋದ ನಡುವಯಸ್ಸಿನ ಗಂಡಸರು ತಾವು ಕುಳಿತಲ್ಲೇ ಪುಲಕ ಅನುಭವಿಸಿದ್ದು ಸುಳ್ಳಲ್ಲ.



ಡೋಂಗಿ ಗುರು ರವಿಶಂಕರನ ಯೋಗಾಸನ ಶಿಭಿರಾರ್ಥಿಗಳು

ಯೋಗ ಎಂಬ ಜೀವನ ಕಲೆಯ ಬಗ್ಗೆ ಪಾಠ ಮಾಡಲು ಬಂದಿದ್ದ ರವಿಶಂಕರನಿಗೆ ಸಮಯದ ಮಹತ್ವವೇ ಗೊತ್ತಿರುವಂತಿಲ್ಲ, ಮೊದಲನೆಯ ದಿನ ಬೆಳಗೆ ಯೋಗ ಕ್ಲಾಸ್ 6 ಗಂಟೆಗೆ ಇದ್ದರೂ ಈ ಮಹಾಶಯ ಬಂದುದು 7.30ಕ್ಕೆ, ಸಮಯ ಪ್ರಜ್ಞೆಯೇ ಇಲ್ಲದ ಇಂಥ ಗುರುವನ್ನು ಪಡೆದು ಯೋಗಾಭ್ಯಾಸ ಕಲಿಯಲು ಬಂದ ಶಿಬಿರಾರ್ಥಿಗಳು ಧನ್ಯರಾದಂತೆ ಕಂಡುಬಂದರು. ಮೂರು ದಿನಗಳ ಕಾಲ ನಡೆದ ಯೋಗ ತರಬೇತಿ ಎಂಬ ನಾಟಕೀಯ ತರಗತಿಯಲ್ಲಿ ರವಿಶಂಕರ ಹೇಳಿದ ಆಸನಗಳು ದಿನಕ್ಕೆ ಮೂರ್‍ನಾಲ್ಕು ಮಾತ್ರ.


ಯೋಗದ ಸಂಪೂರ್ಣ ಮಾಹಿತಿಯ ಕುರಿತು, ತಮಗೆ ಈಗಾಗಲೇ ಇರುವ ರೋಗಗಳ ಕುರಿತು ಕೇಳುತ್ತಿದ್ದರೆ ಈ ತಗಡು ಕೂಡಲೇ ತನ್ನ ಪುಸ್ತಕದ ಅಂಗಡಿಯ ಕಡೆಗೋ, ಔಷಧ ಅಂಗಡಿಯ ಕಡೆಗೋ ಕೈಮಾಡಿ ಈ ಬಗ್ಗೆ ಅಲ್ಲೆಲ್ಲ ಮಾಹಿತಿ ದೊರೆಯುತ್ತದೆ. ನೀವು ಹೋಗುವಾಗ ಅವನ್ನು ಪಡಕೊಳ್ಳಿ ಎಂಬ ಸಲಹೆ ನೀಡುತ್ತಿದ್ದ. ಯೋಗವನ್ನು ತಾನು ಹೇಳಿಕೊಡುವ ಬದಲು 85 ವರ್ಷಗಳ ವಯೋವೃದ್ಧನೊಬ್ಬನ ಮೂಲಕ ಮಾಡಿಸುತ್ತ, ತಾನು ಮಾತ್ರ ಒನಪು-ವಯ್ಯಾರಗಳಲ್ಲೇ ಹೊತ್ತನ್ನು ಸಾಗಹಾಕುತ್ತಿದ್ದ. ತನ್ನ ಜೊತೆ ಕರೆದುಕೊಂಡು ಬಂದ ನಾಟಿ ವೈದ್ಯರ ಮೂಲಕ ರೋಗಿಗಳನ್ನು ಪರೀಕ್ಷಿಸುವ ಗಿಮಿಕ್ ಮಾಡುತ್ತ ಅವರ ಜೇಬು ಹಾಗೂ ತಲೆಯನ್ನು ಬೋಳಿಸಿದ್ದು ಯಾರಿಗೂ ಗೊತ್ತಾಗಲಿಲ್ಲ.



ಯೋಗಾಸನ ಬೋಧಿಸುತ್ತಿರುವ ರವಿಶಂಕರ್

ಇದನ್ನು ಆಯೋಜಿಸಿದ್ದ ಸಂಘಟಕರಾದರೋ ಗುರುವಿಗೆ ತಕ್ಕ ಶಿಷ್ಯರು ಎಂದು ಹೇಳುವಂತೆ ಸಾಕಷ್ಟು ಪ್ರಮಾಣದ ಟಿಕೇಟುಗಳನ್ನು ಮೊದಲೇ ಮಾರಾಟ ಮಾಡಿದ್ದಲ್ಲದೆ, ಹಲವಾರು ಶ್ರೀಮಂತ ಜನಗಳಲ್ಲಿ ಪಟ್ಟಿ ಎತ್ತಿದ್ದು ಎಲ್ಲರೂ ಮಾತಾಡುವಂತಾಗಿತ್ತು. ●

ಈ ಹೊತ್ತಿಗಾಗಲೇ ಕೊರಂಗು ಗ್ಯಾಂಗ್ ಮಂಡ್ಯದ ಜರ್ದೇಜಾ ರವಿಯನ್ನು ಮುಗಿಸಿತ್ತು. ತಿಮ್ಮೇನಹಳ್ಳಿ ಗೋವಿಂದನಿಗಾಗಿ ಲೇಔಟ್ ಮಂಜನ ತಮ್ಮ ನವೀನನ ಗ್ಯಾಂಗ್ ಮತ್ತು ಕಮಲಾನಗರದ ದಿನೇಶನ ಪಡೆಗಳು ರೌಂಡಿಂಗ್ ಪ್ರಾರಂಭಿಸಿದ್ದವು. ನೋಡ್ತಾ ಇರಿ, ಇಷ್ಟರಲ್ಲೇ ದೊಡ್ಡ ತಲೆಯೊಂದನ್ನು ಕೊರಂಗು ಗ್ಯಾಂಗ್ ನಿಕಾಲಿ



ಕೋತಿರಾಮ

ಮಾಡಲಿದೆ ಎಂಬ ರೂಮರ್ ಎಲ್ಲೆಂದರಲ್ಲಿ ಅನುರಣಿಸುತ್ತಿತ್ತು. ಅದು ಮುಲಾಮನೋ, ರಾಮ-ಲಕ್ಷ್ಮಣರೋ ಅಥವಾ ಕಡಬಗೆರೆ ರಾಮನೋ ಇಲ್ಲಾ ಗೋಪಾಲಯ್ಯನೋ ಎಂಬುದಷ್ಟೇ ನಿರ್ಧಾರವಾಗಬೇಕಿತ್ತು, ಅದೇ ಹೊತ್ತಿಗೆ ಕಾಮಾಕ್ಷಿಪಾಳ್ಯದ ಗೂಳಿ ಬಸವನನ್ನು ಆರ್‌ಪಿಸಿ ಲೇಔಟಿನಲ್ಲಿ ಅಟ್ಯಾಕ್ ಮಾಡಲಾಯಿತೆಂಬ ಸುಳ್ಳು ಸುದ್ದಿಯೂ ಹಬ್ಬಿತ್ತು.

ಈ ಮಧ್ಯೆಯೇ ಕಡಬಗೆರೆಯ ಪಾಯ್ಸನ್ ರಾಮನ ಬಂಟರಾದ ದಾಸರಹಳ್ಳಿ ಹೇಮಂತ ಮತ್ತು ಭವಾನಿ ಸೇರಿಕೊಂಡು [illegible] ಜಾನಿಯ ಶಿಷ್ಯ ದಿವಾಕರನನ್ನು ಗೊಲ್ಲರಹಟ್ಟಿ ಬಳಿ ಅಟ್ಯಾಕ್ ಮಾಡಿದ್ದೇ ನೆಲಮಂಗಲಕ್ಕೆ ಹೊತ್ತೊಯ್ದು ಎರಡೂ ಕಾಲುಗಳನ್ನು ಲ್ಯಾಪ್ಸ್ ಆಗುವಂತೆ ಕತ್ತರಿಸಿ ಬಿಸಾಕಿತು. ಇಷ್ಟಾ ದುರಂತವಾದರೆ ಜಾನಿ ಶಿಷ್ಯ ದಿವಾಕರ್ ನೆಲಮಂಗಲ ಪೊಲೀಸರಿಗೆ ದೂರು ಕೊಟ್ಟರೆ [illegible] ಮಾಜಿ ಮಂತ್ರಿ, ಚೆನ್ನಿಗಪ್ಪನ ಮಗ ಗೌರಿಶಂಕ್ರನ ಬಂಟರು. ಇತ್ತ ತಾವರೆಕೆರೆ ಪೊಲೀಸ್ ಠಾಣೆಯ ಎಸ್.ಐ. ರೆಡ್ಡಿ, ಮಾಗಡಿ ಪೊಲೀಸ್ ಇನ್ಸ್‌ಪೆಕ್ಟರ್ ರವಿಶಂಕರ್, ನೆಲಮಂಗಲದ ಎಸ್‌ಐ ವಿರೂಪಾಕ್ಷಸ್ವಾಮಿ ಇತ್ಯಾದಿ ಆಯಕಟ್ಟಿನ ಪೊಲೀಸ್ ಠಾಣೆಗಳಲ್ಲಿರುವವರೆಲ್ಲ ಒಂದೋ ಕಡಬಗೆರೆ ರಾಮನ ಅಣ್ಣ ಡಾಬಾ ಸೀನನ ಬಂಟರಾಗಿರುತ್ತಾರೆ ಅಥವಾ ನೆಲಮಂಗಲದ ಹಂತಕ ಚಿತ್ತನಗೆರೆ ಸೀನನ ಋಣದಲ್ಲಿರುತ್ತಾರೆ. ಪೊಲೀಸ್ ವ್ಯವಸ್ಥೆಯೇ ಹೀಗಿರುವಾಗ ಜಾನಿ ಶಿಷ್ಯ ದಿವಾಕರ್‌ಗೆ ತಾವರೆಕೆರೆ ಪೊಲೀಸ್ ಠಾಣೆಗೆ ಬಂದಾದರೂ ದೂರು ಕೊಡಲು ಮನಸ್ಸಾಗಲೇ ಇಲ್ಲ.

ಇನ್ನೂ ತಾವರೆಕೆರೆ ಪೊಲೀಸ್ ಠಾಣೆ ವ್ಯಾಪ್ತಿಯ ಹೇರೋಹಳ್ಳಿ ಪೊಲೀಸ್ ಠಾಣೆಯನ್ನು ನಿಭಾಯಿಸುವ ಕ್ರೈಂ ಪೇದೆ ಭಾಸ್ಕರ್ ಸಾಕ್ಷಾತ್ ಕಡಬಗೆರೆ ಪಾಯ್ಸನ್ ರಾಮನ ನಿಯತ್ತಿನ ನಾಯಿ. ಜನಪ್ರಿಯ ಅಪಾರ್ಟ್‌ಮೆಂಟ್ ಸಮೀಪದ ಪೊಲೀಸ್ ಚೌಕಿಯ ಉದ್ಘಾಟನೆಗೆ ಪಾಯ್ಸನ್ ರಾಮನೇ ಮುಖ್ಯ ಅತಿಥಿಯಾಗಿ ವೇದಿಕೆಯಲ್ಲಿ ಉಪಸ್ಥಿತನಿರುತ್ತಾನೆಂದರೆ ಈ ಭಾಗದ ಪೊಲೀಸ್ ವ್ಯವಸ್ಥೆ ಇನ್ನೆಷ್ಟು ಹದಗೆಟ್ಟಿರಬೇಡ?

ಮುಲಾಮ ಮತ್ತು ಕಡಬಗೆರೆ ರಾಮನ ಪರವಾಗಿ ಇಂಥದೊಂದು ಪೊಲೀಸ್ ವ್ಯವಸ್ಥೆಯನ್ನು ಕಟ್ಟಿಕೊಟ್ಟವನು ಚೆನ್ನಿಗಪ್ಪನ ಮಗ ಗೌರಿಶಂಕ್ರ. ಈ ಸುತ್ತಮುತ್ತ ಒಬ್ಬನೇ ಒಬ್ಬ ಕೊರಂಗು ಶಿಷ್ಯನಿರಲೇ ಕೂಡದೆಂದು ಮುಲಾಮನ ಗ್ಯಾಂಗ್ ಫರ್ಮಾನು ಹೊರಡಿಸಿತ್ತು. ಕೊರಂಗು ಆಪ್ತರಾದ ಜಾನಿ, ಕೋತಿ ರಾಮ, ಯದುಗಿರಿ, ಬಲರಾಮ, ಕೋಳಿ ಶಿವಾ ಇತ್ಯಾದಿ ಯಾರೊಬ್ಬರ ಕಡೆಯ ಹುಡುಗರೂ ಈ ಭಾಗದಲ್ಲಿ ಓಡಾಡಿದ ಹಾಗೇ ಮಾಡುವುದು ಕಡಬಗೆರೆ ರಾಮನ ಹುನ್ನಾರವಾಗಿತ್ತು. ಜಾನಿ ಶಿಷ್ಯ ದಿವಾಕರನನ್ನು ಹೊತ್ತೊಯ್ದು ಆತನ ಎರಡೂ ಕಾಲು ಲ್ಯಾಪ್ಸ್ ಮಾಡಿ ಹಾಕಿದ ರಾಮನ ಹುಡುಗರು ಅದಾಗಿ ವಾರಕ್ಕೇ ಜಾನಿಯ ಮತ್ತೊಬ್ಬ ಶಿಷ್ಯ ಲಾರಿ ಮಾದೇವನ ಮೇಲೆ ಅಟ್ಯಾಕ್ ಮಾಡಿದ್ದಾರೆ. ಈ ದಾಳಿಯಲ್ಲೂ ದಾಸರಹಳ್ಳಿ ಹೇಮಂತ ಮತ್ತು ಭವಾನಿ ಗ್ಯಾಂಗಿತ್ತು, ಇದಾದ ಮರುದಿನವೇ ನೆಲಮಂಗಲದ ಚಿತ್ತನಗೆರೆ ಸೀನನ ಭಾವ ಯಡಾಳುದೇವಿಯ ಫಾರ್ಮಿನಲ್ಲಿ, ಮುಲಾಮ, ರಾಮ-ಲಕ್ಷ್ಮಣ, ಕಡಬಗೆರೆಯ ರಾಮು, ಚಿತ್ತನಗೆರೆ ಸೀನ ಮುಂತಾದವರೆಲ್ಲ ಸೇರಿ ನೂರಕ್ಕೂ ಹೆಚ್ಚು ಹುಡುಗರನ್ನು ಕಲೆ ಹಾಕಿ ಪಾರ್ಟಿ ಕೊಟ್ಟಿದ್ದಾರೆ.



ಜಾನಿ

ತನ್ನ ದುಷ್ಮನ್‌ಗಳೆಲ್ಲ ಪರಸ್ಪರ ಕೈಜೋಡಿಸಿ ಪಾರ್ಟಿ ಮಾಡಿದ ಸುದ್ದಿ ಕೊರಂಗು ಕಿವಿಮುಟ್ಟುವುದು ಎಷ್ಟು ಹೊತ್ತು? ಇಲ್ಲಿಗೆ ವಾರದ ಹಿಂದಷ್ಟೇ ಸರಿಸುಮಾರು ಇನ್ನೂರು ಮಂದಿ ಹುಡುಗರನ್ನು ಪೀಣ್ಯ ಹೊರವಲಯದ ಫಾರ್ಮ್‌ಹೌಸ್ ಒಂದರಲ್ಲಿ ಕಲೆಹಾಕಿದ ಕೊರಂಗು ಅವರೆಲ್ಲರಿಗೂ ದುಬಾರಿಯ ಜೀನ್ಸ್ ಬಟ್ಟೆ ಕೊಡಿಸಿದ್ದಾನೆ. ಪಾರ್ಟಿಯನ್ನೂ ಕೊಟ್ಟಿದ್ದಾನೆ. ಬಹುಶಃ ಆವತ್ತೇ ಕಡಬಗೆರೆ ರಾಮನಿಗೆ ಮುಹೂರ್ತವಿತ್ತಾ? ಅಥವಾ ಮುಲಾಮನ ಮೇಲೆ ಭೀಕರ ಅಟ್ಯಾಕ್ ಮಾಡಲು ಸ್ಕೆಚ್ ಹಾಕಲಾಗಿತ್ತಾ? ಅಥವಾ ತನ್ನ ಕಾರಿನ ತುಂಬಾ ಕೈ ಬಾಂಬ್ ತುಂಬಿಸಿಕೊಂಡು ಬೆಂಗಳೂರಿಗೆ ಬರುತ್ತಿರುವಾಗಲೇ ಕೊರಂಗು ಬಳಿ ಇದ್ದ crude ಬಾಂಬ್ ಸ್ಫೋಟಿಸಿತಾ? ಸ್ಫೋಟಕ್ಕೆ ಆತನ ತೊಡೆ ಮಾಂಸ ಕಿತ್ತು ಬಂದಿರಬಹುದಾ? ಅಥವಾ ಹೀಗೊಂದು ರೂಮರ್ ಹಬ್ಬಿಸಿದಾಕ್ಷಣ ಬಚ್ಚಿಟ್ಟುಕೊಂಡಿರುವ ಮುಲಾಮ ಯಾಮಾರಿ ಹೊರಬರುತ್ತಾನೆಂದೂ ಅದನ್ನೇ ಕಾದು ಆತನನ್ನು ಮುಗಿಸಬಹುದೆಂದು ಕೊರಂಗು ಲೆಕ್ಕಾಚಾರವಾಗಿತ್ತಾ? ಮೊದಲು ಕೈ ಕಳಕೊಂಡ. ಈಗ ಕಾಲು ಸಿಡಿತಕ್ಕೆ ಸಿಲುಕಿದೆ.

ಬೆಕ್ಕಿಗೆ ಒಂಭತ್ತು ಜೀವವಂತೆ. ಏನೇ ಆದರೂ ಕೊರಂಗು ಸಾಯುತ್ತಿಲ್ಲವೆಂದರೆ ಆತ ಇನ್ನೆಷ್ಟು ಅನಾಹುತಕಾರಿಯಾಗಿರಬೇಡ?


Any how ಕೊರಂಗು ಎಂಬ ಪಾಪಿ ಚಿರಾಯು! ■

ಡಾ. ಗೋಪಿನಾಥ್ ರಕ್ತದಾಹಕ್ಕೆ ಮತ್ತೊಂದು ಬಲಿ

ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿಯ ಹಂತಕ ವೈದ್ಯ ಡಾ. ಗೋಪಿನಾಥ್ ಮತ್ತು ಮಲ್ಯ ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜರಿಯ ಖದೀಮ ಡಾ. ಆನಂದ್ ಜೋಡಿಯ ದುರಾಚಾರಕ್ಕೆ ಬಲಿಯಾದದ್ದು ಪತ್ರಕರ್ತೆ ತುಂಗರೇಣುಕ ಮಾತ್ರವೇ ಅಲ್ಲ, ಆ ಸಾಲಿಗೆ ಸೇರುವ ಕ್ಯಾನ್ಸರ್ ರೋಗಿಗಳ ಪಟ್ಟಿ ದಿನೇದಿನೇ ಬೆಳೆಯುತ್ತಲೇ ಇದೆ.


ಈ ಪೈಕಿ ಕುಮಾರ ಪಾರ್ಕ್‌ನ ಸುಮಿತ್ರಾ ಎಂಬ ಗೃಹಿಣಿಯ ಉದಾಹರಣೆಯೊಂದೇ ಗೋಪಿನಾಥ್-ಆನಂದ್ ಜೋಡಿಯ ದುರುಳ ಬುದ್ಧಿಯನ್ನು ಬಯಲುಗೊಳಿಸುತ್ತದೆ. ಸುಮಿತ್ರಾ ಡಾ. ಮಂಜುನಾಥ್‌ರ ಕಸಿನ್. ಸ್ತನದಲ್ಲಿ ಅದೇನೋ ಗುಳ್ಳೆ ಸಿಕ್ಕಂತಾಗಿ ಎಕ್ಸ್‌ರೇ ಮಾಡಿಸಿದಾಗಲೇ ಅದು ಕ್ಯಾನ್ಸರ್ ಎಂದು ಗೊತ್ತಾಗಿದೆ. ಸಹಜವಾಗೇ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿಗೆ ಬಂದು ಡಾ. ಗೋಪಿನಾಥ್ ಕಪಿಮುಷ್ಟಿಗೆ ಸಿಲುಕಿದ್ದಾರೆ. ದುರುಳ ಗೋಪಿನಾಥ್ ತುಂಗರೇಣುಕರನ್ನು ಯಾಮಾರಿಸಿದಂತೆ ಸುಮಿತ್ರಾರಿಗೂ ಡಾ. ಆನಂದ್‌ನ ಮೂಲಕ ಪ್ಲಾಸ್ಟಿಕ್ ಸರ್ಜರಿ ಮಾಡಿಸಿ ಕೃತಕ ಸ್ತನ ಜೋಡಿಸುತ್ತೇನೆಂದೂ-ಆನಂದ್ ಓರ್ವ ಮಾಂತ್ರಿಕ ಪ್ಲಾಸ್ಟಿಕ್ ಸರ್ಜರಿಕಾರರೆಂದೂ ನಂಬಿಸಿದ್ದಾರೆ.

ವಿಕಟವೆಂದರೆ ಪ್ಲಾಸ್ಟಿಕ್ ಸರ್ಜರಿ ಮಾಡಿದ ಒಂದೇ ತಿಂಗಳಿಗೆ ಸುಮಿತ್ರಾರ ಕೃತಕ ಸ್ತನ ಕೊಳೆತು ಕೀವು ಸೋರಲಾರಂಭಿಸಿತು. ಹೆದರಿದ ಸುಮಿತ್ರಾ ನೇರ ಮುಂಬಯಿಗೆ ಹೋಗಿ ಕೃತಕ ಸ್ತನವನ್ನು ಕಿತ್ತೆಸೆದು ಕೊಳೆತ ಸ್ತನವನ್ನು ಕ್ಲೀನ್ ಮಾಡಿಸಿ ನಿಟ್ಟುಸಿರಿಡುವ ಹೊತ್ತಿಗೆ ಹತ್ತು ಲಕ್ಷ ಕೈಬಿಟ್ಟಿತ್ತು.



ಇದೇ ರೀತಿ ಮೈಸೂರಿನ ಹೆಸರಾಂತ ಸಿನಿಮಾ ತಾರೆಯೊಬ್ಬರ ಸಂಬಂಧಿ ಕುಸುಮಾ ವೋಕಾರ್ಟ್‌ನ ಡಾ. ಜವಳಿಯವರಿಂದ ಆಪರೇಷನ್ ಮಾಡಿಸಿಕೊಂಡು ಕಿಮೋಥೆರಪಿಗೆಂದು BIO ಗೆ ಬಂದರು. ಹಾಗೇ ಮೂರು ತಿಂಗಳುಗಳ ಕಾಲ ಕಿಮೋಥೆರಪಿಗೆಂದು ದಾಖಲಾದ ಕುಸುಮಾ ಆಸ್ಪತ್ರೆಯ ಸೋಂಭೇರಿ ಸಿಬ್ಬಂದಿಗಳ ನಿರ್ಲಕ್ಷ ಮತ್ತು ಎಂ.ಡಿ. ಜಯಪ್ರಕಾಶನ ದುಡ್ಡುಬಾಕತನಕ್ಕೆ ಸಿಲುಕಿ ಸಾಯುವ ಸ್ಥಿತಿಗೆ ತಲುಪಿದ್ದಾರೆ. ಇನ್ನೇನು ಸತ್ತೇ ಹೋಗುತ್ತಾರೆ ಎಂಬಂಥ ಸ್ಥಿತಿಯಲ್ಲಿ ಕುಸುಮಾರ ಪತಿ ಡಿಸ್‌ಚಾರ್ಜ್ ಮಾಡಿಸಿಕೊಂಡು ಜಯನಗರದ ಡಾ. ಸುಂದರ್‌ರ ಹೋಮಿಯೋಪತಿ ಟ್ರೀಟ್‌ಮೆಂಟ್ ಕೊಡಿಸಿ ಪತ್ನಿಯನ್ನು ಬದುಕಿಸಿಕೊಂಡಿದ್ದಾರೆ. ಕುಸುಮ ಸದ್ಯ ಚೆನ್ನಾಗಿದಿದ್ದರಾದರೂ ಆವತ್ತು BIO ನಿಂದ ಡಿಸ್‌ಚಾರ್ಜ್ ಮಾಡಿಸಿಕೊಳ್ಳಲು ಎರಡೂವರೆ ಲಕ್ಷದಷ್ಟು ಬಿಲ್ ಕಕ್ಕಬೇಕಾಯಿತು. ಚಿಕಿತ್ಸೆಯ ನೆಪದಲ್ಲಿ ಕೊಲ್ಲುವ ಕೆಲಸಕ್ಕೆ ಎರಡೂವರೆ ಲಕ್ಷದ ದಂಡವೇ?

BIO ನ ಕಿಲ್ಲರ್ ಡಾ. ಗೋಪಿನಾಥ್ ಮತ್ತು ಪ್ಲಾಸ್ಟಿಕ್ ಸರ್ಜರಿ ಖದೀಮ ಆನಂದ್‌ರ ಜಂಟಿ ದರೋಡೆಗೆ ಈಗಲಾದರೂ ಪೊಲೀಸರು ಅಂತ್ಯ ಕಾಣಿಸಲಿ. ಸರ್ಕಾರ ಈ ಕೂಡಲೆ ಡಾ. ಗೋಪಿನಾಥ್ ಮತ್ತು ಆನಂದ್‌ರನ್ನು ಬಂಧಿಸಿ ಲಾಕಪ್ಪಿಗೆ ಹಾಕಲಿ. ನೊಂದ ಕ್ಯಾನ್ಸರ್ ರೋಗಿಗಳಿಗೆ ನ್ಯಾಯ ಸಿಗಲಿ. ■



tv9 ಕನ್ಯಾಪೀಡಕ ಕ್ರೈಂ ರಿಪೋರ್ಟರ್ ನವೀನ

ಕನ್ನಡದ ಟಿವಿ ನ್ಯೂಸ್‌ಗೆ ಒಂದು ವೇಗ, ಖದರ್ ತಂದದ್ದು ಟಿವಿ ನೈನ್ ಚಾನಲ್. ಯಾವುದೇ ನ್ಯೂಸ್ ಅನ್ನು ಸೆನ್ಸೇಷನಲೈಸ್ ಮಾಡುವುದು ಅದರ ಅಂತರ್ಗತ ಗುಣ. ಇದರಿಂದ ಜನರಿಗೆ ತಾಜಾ ಸುದ್ದಿ ಸಿಗುವುದರ ಜೊತೆಗೆ ಬಹುಪಾಲು ವಾಸ್ತವ ಹಾಗೂ ಒಂದಿಷ್ಟು ಉತ್ಪ್ರೇಕ್ಷಿತ ಆಯಾಮವೂ ಸಿಗುತ್ತದೆ. ಇರಲಿ ಬಿಡಿ, ಇದೆಲ್ಲಾ ಈ ಕಾಲಧರ್ಮದ ಅಗತ್ಯಗಳಿರಬಹುದು.

ಇತ್ತೀಚೆಗೆ ಎಚ್. ವಿಶ್ವನಾಥ್‌ರ 'ಹಳ್ಳಿ ಹಕ್ಕಿಯ ಹಾಡು' ಆತ್ಮಕಥನದಲ್ಲಿನ ಎಸ್.ಎಂ. ಕೃಷ್ಣ ಬಿ. ಸರೋಜಾದೇವಿಯವರ ಹಳೇ ಮದುವೆ ಪ್ರಪೋಸಲ್ ಕುರಿತ ಸಣ್ಣ ವಿಚಾರವನ್ನೇ ಭಾರಿ ಸುದ್ದಿ ಮಾಡಿದ್ದ ಟಿವಿ ನೈನ್ ತನಗರಿವಿಲ್ಲದೆ ತನ್ನದೇ ಕಚೇರಿಯಲ್ಲಿ ಕೀಚಕನೊಬ್ಬನಿಗೆ ಆಶ್ರಯ ನೀಡಿದ್ದ ಘಟನೆ ಬೆಳಕಿಗೆ ಬಂದಿದೆ.

ಈ ಕಥಾನಕದ ಅಸಲೀ ವಿಲ್ಲನ್‌ನ ಹೆಸರು ವೈ. ನವೀನ್. ಈತ ಸದ್ಯ ಟಿವಿ ನೈನ್‌ನ ಕ್ರೈಂ ರಿಪೋರ್ಟರ್. ನೋಡಲು ಪಕ್ಕಾ ರೋಡ್ ರೋಮಿಯೋನಂತಿದ್ದಾನೆ. ಟೀವಿ ನೈನ್‌ನ ಆ್ಯಂಕರ್ಸ್ ಆಗಲು ಸಂದರ್ಶನಕ್ಕೆಂದು ಬರುವ ಮರ್ಯಾದಸ್ಥ ಹೆಣ್ಣುಮಕ್ಕಳ ಮೊಬೈಲ್ ನಂಬರುಗಳನ್ನು ಪಟಾಯಿಸಿ flirt ಮಾಡುವ, ಸೆಕ್ಸಿ ಎಸ್ಸೆಮ್ಮೆಸ್ ಕಳಿಸಿ ಪೀಡಿಸುವ ಈತ ಸಾಕ್ಷಾತ್ ಕೀಚಕ ರೂಪಿ. ಅಷ್ಟಕ್ಕೂ ಈತನ ತಂದೆ ಸಿ. ಯತಿರಾಜು ತುಮಕೂರಿನ ಕಾಳಿದಾಸ ಪದವಿಪೂರ್ವ ಕಾಲೇಜಿನ ಪ್ರಿನ್ಸಿಪಾಲ್. ಈ ಹಿಂದೆ ಭಾರತಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಕಾರ್ಯದರ್ಶಿಯಾಗಿ ಸಹಸ್ರಾರು ಗ್ರಾಮೀಣ ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸಿದ್ದವರು.

ಈತನ ತಾಯಿ ಸಿ. ಉಮಾ ಕೂಡ ಕಮ್ಯುನಿಸ್ಟ್ ಪಕ್ಷ ಸಿಪಿಎಂನ ಸಕ್ರಿಯ ಕಾರ್ಯಕರ್ತೆಯಾಗಿದ್ದಾಕೆ.

ಮುದ್ದೋ, ಮೈಮುರಿವೋ ಗೊತ್ತಿಲ್ಲ ... ತತ್ವನಿಷ್ಠ ದಂಪತಿಗಳ ಏಕಮಾತ್ರ ... ನಾದ ವೈ. ನವೀನ್ ಮಾತ್ರ ... ಸಾಗಲೇ ಇಲ್ಲ, ತಾನು ಕ... ವಿದ್ಯಾರ್ಥಿ ಸಂಘಟನೆಯಾದ ಎಸ್‌ಎ... ಯಾವುದೋ ಕಾಲಕ್ಕೆ ಲೀಡರ್ ... ಅಂತಲೇ ಇವತ್ತಿಗೂ ಭೋಂಗು ... ಈತ ಪ್ರಾರಂಭದಲ್ಲಿ ತುಮಕ... ಪ್ರಜಾಪ್ರಗತಿ ವರದಿಗಾರನಾಗಿದ್ದ, ... ಉದಯ ಟೀವಿ ಸೇರಿಕೊಂಡ. 20... ಏಪ್ರಿಲ್‌ನಲ್ಲಿ ಆಗಿನ್ನೂ ಶುರುವಾಗದ... ನೈನ್‌ಗೆ ಶಿವಮೊಗ್ಗದ ರಿಪೋರ್ಟ... ಸೇರಿಕೊಂಡವನು 2006 ಮೇ 13... ತುಮಕೂರಿನ 'ಚಲುಮೆ' ಸಮು... ಭವನದಲ್ಲಿ ಎಂ.ಜೆ. ದೀಪಿಕಾಳ ... ಆದರ್ಶಯುತವಾಗೇ ಮದುವೆಯ...

ಅದೂ ಲವ್ ಮ್ಯಾರೇಜಾ... ದೀಪಿಕಾಳನ್ನು ತನಗೇ ಕೊಟ್ಟು ಮ... ಮಾಡದೇ ಹೋದರೆ ವಿಷ ಕುಡಿ... ಎಂದೇ ರಂಪ ಮಾಡಿದ್ದ. ಹಾಗೆ... ವಿದ್ಯಾರ್ಥಿ ಬದುಕನ್ನೇ ಕೊನೆಗ... ಕೊಂಡು ಕ್ರೈಂ ರಿಪೋರ್ಟರ್ ನ... ಮಡದಿಯಾದ ಎಂ.ಜೆ. ದೀಪಿಕಾ ... ಯಾರೂ ಅಲ್ಲ; ಪತ್ರಕರ್ತೆ ಮತ್ತು ಮಹಿಳಾ ಹಕ್ಕು ಹೋರಾಟಗಾತಿ... ಲೀಲಾ ಸಂಪಿಗೆಯವರ ಏಕಮಾತ್ರ ಪುತ್ರಿ ಮತ್ತು ತಂದೆ ಜಯಕು... ವಿ.ಕ.ದಲ್ಲಿ ಉಪಸಂಪಾದಕರಾಗಿದ್ದವರು. ಕುವೆಂಪು ಮಂತ್ರ ಮಾಂ... ಮೂಲಕ ಆದರ್ಶದ ಮದುವೆಯಾಗಿದ್ದ ಸೋಕಾಲ್ಡ್ ಕಮ್ಯುನಿಸ್ಟ್ ರಿಪೋ... ನವೀನ ಶಿವಮೊಗ್ಗದಲ್ಲಿ ಯಾರೋ ಕ್ರೈಸ್ತ ಪಾದ್ರಿಯೊಬ್ಬರ ಜೊತೆ ಭಾ... ಮಾಡಿಕೊಂಡ. ಶಿಕ್ಷಾರ್ಥವಾಗಿ ಬೆಂಗಳೂರಿಗೆ ಎತ್ತಂಗಡಿಯಾದ. ಬ...



ಆದೇ ಕ್ರೈಂ ರಿಪೋರ್ಟರ್ ನವೀನನ ... ಜಾರಿ ತುಪ್ಪಕ್ಕೆ ಬಿದ್ದಂತಾಗಿತ್ತು.

ಯಾವತ್ತು ಟೀವಿ ನೈನ್‌ನ ಕ್ರೈಂ ಸ್ಟೋ... ಅಷ್ಟೇ ಗಮನ ಸೆಳೆಯಲಾರಂಭಿಸಿತೋ ... ಸಮಯಸಾಧಕ ಲ್ಯಾಂಡ್ ಬ್ರೋಕರುಗಳು, ... ರೌಡಿಗಳು ನವೀನನ ಮೂಲಕ ಟೀವಿ ನ... ಬಾತ್ಮಿದಾರರಾದದ್ದು ಒಂದೆಡೆಯಾದರೆ ... ಹೊತ್ತಿಗೆ ಆ್ಯಂಕರ್ಸ್ ಆಗಲು ಯುವತಿ... ಹಿಂಡೊಂದು ಟೀವಿ ನೈನ್ ಕಚೇರಿ ... ಜಮೆಯಾಗುತ್ತಿದ್ದದ್ದು ಮತ್ತೊಂದೆಡೆಯಾ... ಸಾಲದ್ದಕ್ಕೆ ರಿಪೋರ್ಟರ್‌ಗಳಾಗುವ ಕನಸು ... ಒಂದಷ್ಟು ಯುವತಿಯರು ಟೀವಿ ನೈ... ಕೆಲಸಕ್ಕೆ ಸೇರಿದ್ದರು. ಈ ಪೈಕಿ ಶಿವಮ... ಶ್ರೀವಿಜಯ (ಹೆಸರು ಬದಲಿಸಿದೆ) ಎ... ನವೀನನ ಕಾಟ ತಾಳದೇ ಕೆಲಸಕ್ಕೇ ಗು... ಹೇಳಿಬಿಟ್ಟಳು. ಆ್ಯಂಕರ್ಸ್ ಆಗಲು ... ಸಂಗೀತಾ, ಶಶಿ, ರೇಖಾ ಮುಂತಾದ ಹು... ಯರ ಮೊಬೈಲ್ ನಂಬರನ್ನು ಹೇಗೋ ಗಿ... ನವೀನ ಅವರಿಗೂ ಕಾಟ ಕೊಟ್ಟುಕೊ... ಇದ್ದ.

ಹತ್ತು ಕೋಟಿ ಟೋಪಿ

ಹುಬ್ಬಳ್ಳಿಯ ಸಿಬಿಟಿ ಹತ್ತಿರದ ಶಾಬಜಾರ್ ಎದುರಿಗಿರುವ ಗುಡಿ ಕಾಂಪ್ಲೆಕ್ಸ್‌ನಲ್ಲಿ ಕೊಹಿನೂರ್ ಜುವೆಲ್ಲರ್ಸ್ ಅಂತ ಒಂದಿದೆ. ಅಲ್ಲಿ ಕೇವಲ ಆಭರಣಗಳನ್ನು ಮಾತ್ರ ಹಾಕಿಕಳಿಸುತ್ತಾರೆ ಎಂದುಕೊಂಡರೆ ಗುಂಡಿಗೆ ಬಿದ್ದೀರಿ. ಏಕೆಂದರೆ, ಅದರ ಮಾಲಿಕ ಬಷೀರ್ ಅಹಮದ್ ಸಂಗ್ರೆಶ್‌ಕೊಪ್ಪ ಅಲಿಯಾಸ್ ಶಬ್ಬೀರ್ ಅಹಮ್ಮದ್ ಎಂಬುವವನು ಜನರಿಗೆ ಮಕ್ಮಲ್ ಟೋಪಿ ಹಾಕುವುದನ್ನೂ ಶುರುಮಾಡಿಕೊಂಡಿದ್ದಾನೆ. ಈತ ಕೇವಲ ಜನರಿಗೆ ಮಾತ್ರವಲ್ಲ, ಬ್ಯಾಂಕುಗಳಿಗೆ, ವ್ಯಾಪಾರಿಗಳಿಗೆ ಎಲ್ಲರಿಗೂ ವಿವಿಧ ಸೈಜಿನ ಮಕ್ಮಲ್ ಟೋಪಿ ಹೊಲಿಸಿ ಹಾಕಿ ಕಳಿಸಿದ್ದಾನೆ.

ಸವದತ್ತಿಯ ಹತ್ತಿರದ ಗ್ರಾಮದವನಾದ ಈತ ಹುಬ್ಬಳ್ಳಿಗೆ ಬಂದು ಕೊಹಿನೂರ್ ಜುವೆಲ್ಲರ್ಸ್ ಮತ್ತು ತಾಜ್ ಜುವೆಲ್ಲರ್ಸ್ ಎಂಬ ಅಂಗಡಿಗಳನ್ನು ತೆರೆದಿದ್ದ. ತಾನು ಹಜ್ ಯಾತ್ರೆ ಕೂಡ ಮಾಡಿ ಬಂದಿದ್ದೇನೆಂದು ಹೇಳುತ್ತಾ ಮುಸ್ಲಿಮ್ ಸಮುದಾಯದ ಜನರ ನಡುವೆ ಒಂದಿಷ್ಟು ಪೋಜು ಕೂಡ ಕೊಟ್ಟುಕೊಂಡು ತಿರುಗಾಡುತ್ತಿದ್ದ. ಹಜ್ ಯಾತ್ರೆ ಮಾಡುವಷ್ಟು ಧಾರ್ಮಿಕ ಶ್ರದ್ಧೆಯಿರುವ ಈತ ಮೋಸ ಹೇಗೆ ಮಾಡಿಯಾನು ಎಂದುಕೊಂಡು ಮುಸ್ಲಿಮ್ ಸಮುದಾಯದ ಮುಗ್ಧರು ಇವನನ್ನು ಸಂಪೂರ್ಣವಾಗಿ ನಂಬಿಬಿಟ್ಟಿದ್ದರು. ಯಾವಾಗ ಜನ ತನ್ನನ್ನು ನಂಬಿದರೋ, ಅವರಿಗೆ ಬಂಗಾರ ಮಾಡಿಸಿಕೊಡುತ್ತೇನೆ ಎಂದೂ, ಇನ್ನು ಕೆಲವರಿಗೆ ದಂಧೆಯಲ್ಲಿ ಹಣ ಹೂಡಿದರೆ ಸಾಕಷ್ಟು ಬಡ್ಡಿ ಲಾಭ ದೊರೆಯುತ್ತದೆ ಎಂದೂ ಸುಮಾರು ಐದು ಕೋಟಿಯಷ್ಟು ಹಣ ಎತ್ತಿದ. ಅಷ್ಟೇಏಕೆ, ಬಂಗಾರ ಖರೀದಿಯ ನಕಲಿ ದಾಖಲೆಗಳನ್ನು ಸೃಷ್ಟಿಸಿ, ನಕಲಿ ಸೇಲ್ ಡೀಡ್ ಸೃಷ್ಟಿಸಿ ನಗರದ ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಮತ್ತು ಐಎನ್‌ಜಿ ವೈಶ್ಯ ಬ್ಯಾಂಕ್‌ಗಳಲ್ಲಿ ಸುಮಾರು ಐದು ಕೋಟಿ ಸಾಲ ಎತ್ತಿದ.

ಯಾವಾಗ ಹತ್ತು ಕೋಟಿ ಹಡಬೆ ದುಡ್ಡು ಕೈಗೆ ಬಂತೋ, ತನ್ನ ಅಂಗಡಿಗಳನ್ನು, ಮನೆಯನ್ನು ಮಾರಿ ಹೆಂಡತಿ ಮಕ್ಕಳ ಸಮೇತವಾಗಿ ಹನಿಮೂನ್‌ಗೆ ಹೊರಟುಹೋಗಿದ್ದಾನೆ. ಕೊಟ್ಟೋನು ಕೋಡಂಗಿ ಇಸ್ಕೊಂಡೋನು ಈರಭದ್ರ ಅನ್ನೊ ಸ್ಥಿತಿ ಹುಬ್ಬಳ್ಳಿಯ ಜನರದ್ದು ಬ್ಯಾಂಕ್‌ಗಳದ್ದು!

■ ಹುಬ್ಬಳ್ಳಿಯಾವ


[illegible] ■


ದಾವಣಗೆರೆ ಎಸ್ಪಿಯ ಮಗನೇ ದರೋಡೆಗಿಳಿದ!

ನಂಬಿದ್ರೆ ನಂಬಿ, ಬಿಟ್ರೆ ಬಿಡಿ. ದಾವಣಗೆರೆಯ ಪೊಲೀಸ್ ವರಿಷ್ಠಾಧಿಕಾರಿಯ (ಎಸ್ಪಿ) ಮಗ... ಈಗ ದರೋಡೆಗಿಳಿದಿದ್ದಾನೆ. ಆತನ ಹೆಸರು ಶಿವರಾಜ್ ಜಹಗೀರ್‌ದಾರ್. ಈತನ ದರೋ... ಗ್ಯಾಂಗಿನಲ್ಲಿ ಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದ ಹಳೇಹುಬ್ಬಳ್ಳಿಯ ಮದನ ಕುಲಕರ್ಣಿ, ನಿ... ದಾಂಡೇಲಿ, ಹರೀಶ್ ಜಾಧವ್ ಅಲ್ಲದೆ ಮತ್ತಿನ್ನಿಬ್ಬರು ಇದ್ದಾರೆ.

ನಗರದಲ್ಲಿರುವ ಮಾಜಿ ಸಚಿವ ಹಿಂಡಸಗೇರಿಯವರ ಸಹೋದರ ಸಂಬಂಧಿಯಾದ ಮೊಹಸೀನ್‌ರ... ಕೋಳಿ ಪಶು ಆಹಾರದ ವ್ಯಾಪಾರ ಮಾಡುತ್ತಾರೆ. ಅವರು ಮೊನ್ನೆ ಜನವರಿ 14ರಂದು ರಾತ್ರಿ 1... ಸುಮಾರಿಗೆ ತಮ್ಮ ವ್ಯಾಪಾರಕ್ಕೆ ಸಂಬಂಧಿಸಿದ ಸುಮಾರು 20 ಲಕ್ಷ ರೂ.ಗಳನ್ನು ತೆಗೆದುಕೊಂಡು ಕುಸುಗ... ರೋಡಿನಲ್ಲಿ ಬೈಕ್‌ನಲ್ಲಿ ಬರುತ್ತಿದ್ದರು. ಇದನ್ನೆಲ್ಲಾ ಮೊದಲಿನಿಂದಲೇ ಸೂಕ್ಷ್ಮವಾಗಿ ಗಮನಿಸುತ್ತಾ ಬಂ... ಎಸ್ಪಿಯ ಮಗ ಶಿವರಾಜ್ ಜಹಾಗೀರ್‌ದಾರ್ ಮತ್ತು ಮದನ್ ಕುಲಕರ್ಣಿ ಆವತ್ತು ತಮ್ಮ ದರೋ... ಗ್ಯಾಂಗ್‌ಗೆ ಪೊಲೀಸ್ ಸಮವಸ್ತ್ರ ತೊಡಿಸಿಕೊಂಡು ಕರೆದುಕೊಂಡು ಬಂದಿದ್ದಾರೆ. ಮೊಹಸೀನ್ ಅ... ಬೈಕನ್ನು ತಡೆದು ಹಣ ಕಿತ್ತುಕೊಂಡ ಈ ಗ್ಯಾಂಗು ಇನ್ನೇನು ಪರಾರಿಯಾಗಬೇಕು, ಅಷ್ಟರಲ್ಲಿಯೇ ಒಂ... ದುರಂತ ಸಂಭವಿಸಿಬಿಟ್ಟಿದೆ. ಎರಡು ಬೈಕ್‌ನಲ್ಲಿ ಬಂದಿದ್ದ ಈ ಖದೀಮರು ಅವಸರವಸರವಾಗಿ ... ಕಿತ್ತುಕೊಂಡು ಓಡಿಹೋಗುವಾಗ ಅವರ ಒಂದು ಬೈಕ್ ರೋಡ್ ಡಿವೈಡರ್‌ಗೆ ಢಿಕ್ಕಿ ಹೊಡೆದು ನೆಲಕ್ಕುರು... ಇನ್ನೊಂದು ಬೈಕಿನಲ್ಲಿದ್ದವರೂ ವಾಪಸ್ಸು ಬಂದು ಗಾಯಾಳುಗಳನ್ನು ಮತ್ತೊಂದು ವಾಹನದಲ್ಲಿ (ಸಂ... ಕೆಎ-22/ಎಮ್-8500) ಎತ್ತಿಹಾಕಿಕೊಂಡು ಖಾಸಗಿ ನರ್ಸಿಂಗ್ ಹೋಂನಲ್ಲಿ ಪ್ರಥಮ ಚಿಕಿತ್ಸೆ ಮುಗಿಸಿಕೊಂ... ಊರು ಖಾಲಿ ಮಾಡಿದ್ದಾರೆ.

ಸದ್ಯಕ್ಕಿವರು ಎಲ್ಲಿದ್ದಾರೆಂದು ಪತ್ತೆಯಿಲ್ಲ. ಹೇಗೋ ದುಡ್ಡು ಕಳ್ಳರ ಪಾಲಾಗದೇ ಬಚಾವಾಗಿದ್ದರಿ... ಮೊಹಸೀನರಿಗೂ ಅವರ ಗೊಡವೆ ಬೇಕಿಲ್ಲ, ಅವರನ್ನು ಹುಡುಕುವ ತಾಪತ್ರಯವನ್ನು ಪೊಲೀಸ... ತೆಗೆದುಕೊಂಡಿಲ್ಲ, ಏಕೆಂದರೆ, ಆ ದರೋಡೆ ಗ್ಯಾಂಗಿನ ನಾಯಕ ಒಬ್ಬ ಎಸ್ಪಿಯ ಮಗ!





ನವೀನ್-ದೀಪಿಕಾ ಮದುವೆಯ ಕರೆಯೋಲೆ

ನವೀನ್ ಮದುವೆಯ ನೋಂದಣಿ ಪತ್ರ

ಈ ಪೈಕಿ ಚಿಕ್ಕಮಗಳೂರು ಮೂಲದ ವಿನುತಾ (ಹೆಸರು ...ದಲಿಸಿದೆ) ಕೂಡ ಒಬ್ಬಳು. ಇನ್ನೂ 21 ರ ಹರೆಯ. ತಂದೆಗೆ ...ಮಗಳೂರಿನಲ್ಲಿ ಕಾಫಿ ತೋಟವಿತ್ತು. ಇಲ್ಲಿಗೆ 8 ತಿಂಗಳ ಹಿಂದೆ ...ಕರ್ ಆಗಲೆಂದು ಟೀವಿ ನೈನ್‌ನ ಹೊಸ್ತಿಲು ತುಳಿದಿದ್ದಳು ...ತಾ. ಅಂದು ಅವಳ ಸ್ಕ್ರೀನ್ ಟೆಸ್ಟ್ ಮಾಡಲಾಗಿತ್ತಾದರೂ ...ಗೆ ಕೆಲಸ ಸಿಕ್ಕಿರಲಿಲ್ಲ.

ಆ್ಯಂಕರ್ ಕೆಲಸ ಸಿಗದಿದ್ದರೇನಂತೆ; ಕೊಟ್ಟ ಅರ್ಜಿಯಲ್ಲಿ ತನ್ನ ...ಬೈಲ್ ನಂಬರ್ ಬರೆದಿದ್ದಳಲ್ಲ; ಮೊದಮೊದಲು ಅದಕ್ಕೆ blank ...lls ಬರುತ್ತಿತ್ತು. ಕ್ರಮೇಣ ಅದು ಕ್ರೈಂ ರಿಪೋರ್ಟರ್ ನವೀನನ ...ಬರ್ ಎಂದು ಗೊತ್ತಾಯಿತು. ಎಂಥಾ ವಿಕಾರವೆಂದರೆ ನೂರಾರು ...ರೆದುರು ಮಂತ್ರ ಮಾಂಗಲ್ಯದ ಮದುವೆಯಾಗಿದ್ದ ನವೀನ್ ...ದುವೆಯಾಗಿ ಆರೇ ತಿಂಗಳಲ್ಲಿ ಆ್ಯಂಕರ್ ಸಂದರ್ಶನಕ್ಕೆ ಬಂದಿದ್ದ ...ತಾ ಗೌಡಳಿಗೆ ಸೆಕ್ಸಿ ಎಸ್ಸೆಮ್ಮೆಸ್ ಕಳಿಸಲಾರಂಭಿಸಿದ್ದ. ತಾನಿನ್ನೂ ...ವಾಹಿತನೆಂದೂ, ಬದುಕಿರುವ ತನ್ನ ತಂದೆ ಯಾವತ್ತೋ ಸತ್ತು ...ೀಗಿದ್ದಾರೆಂದೂ, ತನ್ನ ವಿಧವಾ ತಾಯಿಗೆ ತಾನೊಬ್ಬನೇ ಪಾಪದ ...ಗನೆಂದೂ ವಿನುತಾಳನ್ನು ನಂಬಿಸಿಬಿಟ್ಟ. ಹೊತ್ತಲ್ಲದ ಹೊತ್ತಲ್ಲಿ ...ಯನ್ನು ಟ್ರಾನ್ಸ್‌ಫರ್ ಬ್ರೋಕರ್ ಸೋಮೇಶನ ಅಡ್ಡೆಗೆ ...ದೊಯ್ಯುತ್ತಿದ್ದ.

ಈ ಸೋಮೇಶ್ ಕಾಂಗ್ರೆಸ್ ನಾಯಕಿ ಗುಂಡ್ಲುಪೇಟೆಯ ದಿವಂಗತ ...ರತ್ನಮ್ಮನ ದತ್ತು ಮಗನಂತೆ. ಟೀವಿ ನೈನ್‌ನ ಕೆಲ ಸಿಬ್ಬಂದಿಗೆ ... ಪದೇಪದೇ ಏಟ್ರಿಯಾ ಹೋಟೆಲಿನಲ್ಲಿ ಪಾರ್ಟಿ ಕೊಡುತ್ತಾನೆ. ...ೀಣ ಅವರನ್ನು ಅಡ್ಡಕಸುಬಿಗೆ ಎಳೆದು ಲಾಭ ಮಾಡಿಕೊಳ್ಳುತ್ತಾನೆ. ...ಥಾ ಪ್ರಳಯಾಂತಕ ಸೋಮೇಶ ಮತ್ತು ನವೀನ್ ವಿನುತಾಳನ್ನು ...ವ ಪರಿ ನಂಬಿಸಿದರೆಂದರೆ; ಇನ್ನೆರಡು ತಿಂಗಳೊಳಗೆ ಇಬ್ಬರೂ ...ದುವೆಯಾಗಲು ನಿರ್ಧರಿಸಿಬಿಟ್ಟಿದ್ದಾರೆ. ವಿನುತಾ ತನ್ನ ಮನೆಯವ ...ಲ್ಲ ನವೀನ್‌ನನ್ನೇ ಮದುವೆಯಾಗುತ್ತೇನೆಂದು ಒಪ್ಪಿಸಿದ್ದಾಳೆ.

ಆದರೆ ವಿನುತಾಳ ಸಂಬಂಧಿಯೊಬ್ಬರಿಗೆ ನವೀನ್‌ನ ಅಸಲೀ ...ಣ್ಣ ಗೊತ್ತಾಗಿಬಿಟ್ಟಿದೆ. ತನ್ನ ನಿಜ ಬಣ್ಣ ಗೊತ್ತಾಗಿದ್ದೇ ನವೀನ್ ...ಥಾ ದಾರ್ಷ್ಟ್ಯಕ್ಕಿಳಿದನೆಂದರೆ ಆಗಷ್ಟೇ ತನ್ನ ತಂದೆ ತಾಯಂದಿರೇ ...ು ಮಾಡಿದ್ದ ಮದುವೆಯನ್ನೇ ಮುರಿಯಲು ಅಣಿಯಾಗಿದ್ದಾನೆ. ... ದೀಪಿಕಾಳಿಗೆ ಪ್ರತಿನಿತ್ಯ ಚಿತ್ರಹಿಂಸೆ ಕೊಡಲಾರಂಭಿಸಿದ್ದಾನೆ. ಇತ್ತ ವಿನುತಾಳಿಗೆ ನವೀನನ ನಿಜಬಣ್ಣ ಗೊತ್ತಾಗುತ್ತಿದ್ದಂತೆ ಆಕೆ ನವೀನನ ಮುಖಕ್ಕೆ ಕ್ಯಾಕರಿಸಿ ಉಗಿದಿದ್ದಾಳೆ. ಟೀವಿ ನೈನ್ ಕಚೇರಿಗೇ ಬಂದು ಚಪ್ಪಲಿ ಕಳಚಿಕೊಂಡು ಹೊಡೆದಿದ್ದಾಳೆ.

ಹೋಗಲಿ ಇಷ್ಟಾದ ನಂತರವಾದರೂ ನವೀನ್‌ಗೆ ತನ್ನ ತಪ್ಪಿನ ಅರಿವಾಗಬೇಕಿತ್ತಲ್ಲವೆ? ಬದಲಿಗೆ ಡೈವೋರ್ಸ್ ಕೊಡುವಂತೆ ಪ್ರತಿನಿತ್ಯ ಪತ್ನಿ ದೀಪಿಕಾಳನ್ನು ಹಿಡಿದು ಬಡಿಯತೊಡಗಿದ್ದಾನೆ. ಮತ್ತೊಂದೆಡೆ ತನ್ನನ್ನೇ ಮದುವೆಯಾಗುವಂತೆ ವಿನುತಾಳಿಗೆ ಸೋಮೇಶನ ಮೂಲಕ ಬೆದರಿಕೆ ಹಾಕಿಸಿದ್ದಾನೆ. ಮದುವೆಯಾಗದೇ ಹೋದರೆ ಆಸಿಡ್ ಹಾಕಿಸುತ್ತೇನೆಂದು ಧಮಕಿ ಹಾಕಿದ್ದಾನೆ. ಪ್ರತಿ ರಾತ್ರಿ ಕಂಠಮಟ್ಟ ಕುಡಿದು ಹಾವಳಿಗಿಳಿದಿದ್ದಾನೆ. ಟೀವಿ ನೈನ್ ವತಿಯಿಂದ ಉಡುಪಿ ಸಾಹಿತ್ಯ ಸಮ್ಮೇಳನದ ವರದಿಗೆಂದು ಕಳಿಸಿಕೊಟ್ಟರೆ ಅಲ್ಲಿ ಹಾಸನದ ಇನ್ನಾರೋ ಹುಡುಗಿಯನ್ನು ಕರೆಸಿಕೊಂಡು ಜಾಗರಣೆ ಮಾಡಿದ್ದಾನೆ. ನವೀನ್ ಓರ್ವ ಕ್ರೈಂ ರಿಪೋರ್ಟರ್. ಪ್ರತಿನಿತ್ಯ ನಡೆಯುವ ಕೊಲೆ, ಡಕಾಯಿತಿ, ರಾಬರಿಗಳಂಥ ಕ್ರೈಮ್‌ಗಳ ಹಿಂದೆ ಒಂದಲ್ಲಾ ಒಂದು ಕಾರಣವಿರುತ್ತದೆ ಅಥವಾ ಅಸಹಾಯಕತೆಯಿರುತ್ತದೆ ನಿಜ. ಆದರೆ ಕ್ರೈಂ ರಿಪೋರ್ಟರ್ ಒಬ್ಬ ಅದರಲ್ಲೂ ಮಾನವತೆಯನ್ನು ಪ್ರತಿಪಾದಿಸುವ ಕಮ್ಯುನಿಸ್ಟ್ ನಾಯಕನ ಮಗನೊಬ್ಬ ತಾನೇ ಹಠಕ್ಕೆ ಬಿದ್ದು ಮದುವೆಯಾಗುವುದು, ಹಾಗೇ ಮದುವೆಯಾದ ಆರೇ ತಿಂಗಳಿಗೆ ಇನ್ನಾರೋ ಯುವತಿಯ ಜೊತೆ ಚಕ್ಕಂದಕ್ಕಿಳಿಯುವುದು, ಆಕೆಗೆ ಸತ್ಯ ಗೊತ್ತಾದ ಮೇಲೂ ತನ್ನನ್ನೇ ಮದುವೆಯಾಗುವಂತೆ ಪೀಡಿಸುವುದು, ಅದಕ್ಕೆಂದು ಕಟ್ಟಿಕೊಂಡ ಮಡದಿಯನ್ನೇ ಮುಗಿಸಲೆತ್ನಿಸುವುದು ಎಲ್ಲಾದರೂ ಉಂಟಾ?


ಯಾವ ರೌಡಿ, ಯಾವ ಡಕಾಯಿತ ತಾನೇ ಕಟ್ಟಿಕೊಂಡ ಮಡದಿಯನ್ನು ಈ ರೀತಿ ವಂಚಿಸಿದ್ದಾನೆ?

ಪಾಪಿ, ಪಾತಕಿಗಳ ಕ್ರೈಮಿಗಾದರೂ ಒಂದು ಕಾರಣವಿರುತ್ತದೆ. ಆದರೆ ನವೀನನ ಪಾಪಕ್ಕೆ ಯಾವ ಸಮರ್ಥನೆಯಿದೆ?

ಟೀವಿ ನೈನ್‌ನ ಮ್ಯಾನೇಜ್‌ಮೆಂಟ್ ಈ ನವೀನನಿಂದ ತಮ್ಮ ಸಂಸ್ಥೆಗೆ ಕೆಟ್ಟ ಹೆಸರು ಬರುತ್ತಿದೆ ಎಂಬುದನ್ನು ಗಮನಿಸಲಿ.


■ ವರದಿಗಾರ

ಭಾಲ್ಕಿ ಪುರಸಭೆಗೆ ಅಮರಿಕೊಂಡಿರುವ ಭರತ ನಾಗೂರೆ ಎಂಬ ಹೆಗ್ಗಣ



ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಹಣೆಬರಹವೆ ಚೆನ್ನಾಗಿರುವಂತೆ ಕಾಣುತ್ತಿಲ್ಲ. ಈಶ್ವರ ಖಂಡ್ರೆ ಹಾಗೂ ಪ್ರಕಾಶ ಖಂಡ್ರೆಯವರ ಜಿದ್ದಾಜಿದ್ದಿಯ ರಾಜಕೀಯದಿಂದ ಇಲ್ಲಿನ ಅಧಿಕಾರಶಾಹಿಗಳು ಕೊಬ್ಬಿಕೊಳಿತಿರುವುದನ್ನು ಯಾರಾದರೂ ಪರಾಂಭರಿಸಬಹುದು. ಯಾವುದೇ ರಾಜಕೀಯ ಪಕ್ಷಗಳಿಗೆ ಸೇರದ ಜನಸಾಮಾನ್ಯ ಮಾತ್ರ ತನ್ನ ಕೆಲಸಗಳಿಗೆ ಅಂಡಲೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನೆಲ್ಲ ನೀವು ನೋಡಬೇಕಾಗಿದ್ದರೆ ಭಾಲ್ಕಿಯ ಪುರಸಭೆಯ ಕಚೇರಿಗೆ ಹೋಗಬೇಕು. ಇಲ್ಲಿನ ಮುಖ್ಯಾಧಿಕಾರಿಯಾಗಿ ಬಹಳ ವರ್ಷಗಳಿಂದ ತನ್ನ ಕುರ್ಚಿಗೆ ಅಮರಿಕೊಂಡಿರುವ ಭರತ ನಾಗೂರೆ ಹೇಳಿಕೇಳಿ ಲೋಕಲ್‌ನವನು. ಹಾಗಾಗಿ ಈಶ್ವರ ಹಾಗೂ ಪ್ರಕಾಶ - ಇವರಿಬ್ಬರಲ್ಲಿ ಯಾರಿಗೆ, ಯಾವಾಗ ಮತ್ತು ಯಾವರೀತಿ ಯಾಮಾರಿಸಬೇಕು ಎಂಬ ತತ್ವವನ್ನು ನೀರು ಕುಡಿದಷ್ಟು ಸಲೀಸಾಗಿ ಅರ್ಥಮಾಡಿಕೊಂಡಿದ್ದಾನೆ. ಇವರಿಬ್ಬರ ತಂಟೆತನದಲ್ಲಿ ತಾನು ಮಾತ್ರ ಹಾಯಾಗಿ ಮೇಯ್ದು ಕೊಬ್ಬಿದ ಗೂಳಿಯಾಗಿದ್ದಾನೆ.

ಮೇಲುನೋಟಕ್ಕೆ ಜಿಲ್ಲಾಧಿಕಾರಿ ಹರ್ಷಗುಪ್ತ ಹೇಳಿದಂತೆ ಕೇಳುವ ಕರ್ತವ್ಯನಿಷ್ಠನಂತೆ ಕಂಡರೂ ಒಳನೋಟದಲ್ಲಿ ತೀರಾಭ್ರಷ್ಟನೂ, ಪಕ್ಷಪಾತಿಯೂ ಆಗಿದ್ದಾನೆ. ಭಾಲ್ಕಿ ಡೆಮಾಲಿಷ್ ಕಾರ್ಯಾಚರಣೆ ಕೈಗೆತ್ತಿಕೊಳ್ಳುವ ನೆಪದಲ್ಲಿ ತನ್ನ ಮನಸ್ಸಿಗೆ ಹೇಗೆ ಬರುತ್ತದೋ ಹಾಗೇ ಇಡೀ ನಗರವನ್ನೆ ಕತ್ತರಿಸಿ ಹಾಕಿದ್ದಾನೆ. ದುಡ್ಡು ಕೊಟ್ಟವರಿಗೆ ಒಂದು ನೀತಿಯಾದರೆ, ದುಡ್ಡು ಕೊಡದವರಿಗೆ ಮತ್ತೊಂದು ನೀತಿ ಅನುಸರಿಸಿದ್ದಾನೆ. ಹರ್ಷಗುಪ್ತ ಎಂಬ ನಿಷ್ಠಾವಂತ ಜಿಲ್ಲಾಧಿಕಾರಿಯ ಮಾತುಗಳನ್ನು ಕೇಳಿ ಇಲ್ಲಿಯ ಜನಗಳು ತಮ್ಮ ಖರ್ಚಿನಲ್ಲಿ ತಮ್ಮ ಅಂಗಡಿ ಮುಂಗಟ್ಟುಗಳನ್ನು ರಸ್ತೆಯಿಂದ ಹಿಂದಕ್ಕೆ ತೆಗೆದು ಹಾಕಿಕೊಂಡಿದ್ದಾರೆ. ಆದರೆ ಈ ನಾಗೂರೆ ಮಾತ್ರ ಅತಿಕ್ರಮಣಗೊಂಡಿದ್ದ ಜಾಗಗಳನ್ನು ತಾನೇ ತೆರವುಗೊಳಿಸಿದ್ದಾಗಿ ಹೇಳುತ್ತ, ಅವಕಾಶ ಸಿಕ್ಕಕಡೆಯಲ್ಲಿ ತಿಂದು ತೇಗುತ್ತಿದ್ದಾನೆ. ರಾಜಕುಮಾರ ಕಾರಾಮುಂಗೆಯ ಮೂಲಕ ತಿಂದ ಸೆಗಣಿಯ ವಾಸನೆ ಕೂಡ ಇಡೀ ಕಚೇರಿಯನ್ನು ವ್ಯಾಪಿಸಿದೆ. ಹನ್ನೊಂದನೆಯ ಹಣಕಾಸು ಯೋಜನೆಯ ಅಡಿ ಬಂದ ದುಡ್ಡು ಈ ಪುರಸಭೆಯಲ್ಲಿ ಯಾರದೋ ರೊಕ್ಕ ಎಲ್ಲಮ್ಮನ ಜಾತ್ರೆ ಆಗಿರುವುದು ಸುಳ್ಳಲ್ಲ. ಎಸ್‌ಎಫ್‌ಸಿ ಯೋಜನೆಯ ಅಡಿ ಬಂದ 1.37 ಕೋಟಿ ರೂಪಾಯಿಗಳ ರಸ್ತೆ ಹಾಗೂ ಚರಂಡಿ ವ್ಯವಸ್ಥೆಯ ದುಡ್ಡು ಅಧಿಕಾರಿಗಳ ಜೇಬನ್ನು ಸೇರಿಕೊಂಡಿದೆ. ಈ ಕಳಪೆ ಕಾಮಗಾರಿಗಳನ್ನು ನೋಡಿ ಆಕ್ಷೇಪಿಸಬೇಕಾಗಿದ್ದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರ ಸಿ.ಎಸ್. ಪಾಟೀಲ, ಇಂಜಿನಿಯರುಗಳಾದ ಅಮೀನ ಮುಖ್ತಾರ, ಶಿವಕುಮಾರ ತಳವಾಡೆ ಹಾಗೂ ಮಾಣಿರಾವ ಕೆರೂರೆ ಕಣ್ಣ ಮೇಲೆ ಕೌದಿಯ ಮುಸುಕು ಹಾಕಿಕೊಂಡು ಕುಳಿತುಕೊಂಡಿದ್ದಾರೆ.



ನಗರದ ತುಂಬೆಲ್ಲ ಹರಡಿರುವ ಕಸ, ಗಬ್ಬು ನಾರುತ್ತಿರುವ ಗಟಾರ, ಲೈಟುಗಳೇ ಇಲ್ಲದ ಮುಖ್ಯ ರಸ್ತೆಗಳು ಅನಾಥವಾಗಿ ಬಿದ್ದುಕೊಂಡಿವೆ. ಇವನ್ನೆಲ್ಲ ಪರಾಂಭರಿಸಬೇಕಾಗಿರುವ ಪುರಸಭೆಯ ಸದಸ್ಯರು ಹಿಂದೆ ಮತ್ತು ಈಗ ಅಧಿಕಾರದ ಮುಗದಾಣಿ ಸಿಗದೆ ಹತಾಶರಾಗಿದ್ದಾರೆ. ಕೆಲವರಂತೂ ಸಿಕ್ಕಷ್ಟು ಸೀರುಂಡೆ ಎಂದು ಭರತ ನಾಗೂರೆಯಿಂದ ಪಾಲು ಪಡೆದಿದ್ದಾರೆ. ಸ್ಯಾನಿಟರಿ ಇನ್ಸ್‌ಪೆಕ್ಟರ್ ಹುದ್ದೆಯಿಂದ ಚೀಫ್ ಆಫೀಸರ್ ಹುದ್ದೆಯವರೆಗೆ ಇದೇ ಕಚೇರಿಯಲ್ಲಿ ಬಡ್ತಿ ಪಡೆದಿರುವ ನಾಗೂರೆ ಯಾರಿಗೂ ಬಗ್ಗದ ಭ್ರಷ್ಟ. ಯಾರ ನೀರು ಎಷ್ಟು, ಅವರ ಆಳ ಎಂಥದ್ದು ಎಂಬುದನ್ನೆಲ್ಲ ಚೆನ್ನಾಗಿ ಅರಿತುಕೊಂಡವ. ಹಾಗಾಗಿ ಯಾರಿಗೂ ಕೇರ್ ಮಾಡುವುದಿಲ್ಲ. ಈತನ ಬೆನ್ನೆಲುಬು ಮುರಿಯಬೇಕಾದ ರಾಜಕಾರಣಿಗಳು ತಮ್ಮ ರಾಜಕೀಯ ದಾಳ ಬೀಸುವುದರಲ್ಲಿ ನಿರತರಾಗಿದ್ದಾರೆ.

ಹಾಗಾಗಿ ಭರತ ನಾಗೂರೆ ಭಾಲ್ಕಿ ಪುರಸಭೆಯ ಲೂಟಿಗೆ ಇಳಿದಿದ್ದಾನೆ. ಅಷ್ಟೊಂದು ಸ್ಥಿತಿವಂತನಲ್ಲದ ಭರತ ನಾಗೂರೆ ದಿನದಿನಕ್ಕೆ ಆರ್ಥಿಕ ಪ್ರವರ್ಧಮಾನಕ್ಕೆ ಬರುತ್ತಿದ್ದಾನೆ. ತೀರಾ ಇತ್ತೀಚೆಗೆ ಹತ್ತರಿಂದ ಹದಿನೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ತನ್ನ ಮಗಳ ಲಗ್ನ ಮಾಡಿದ್ದಾನೆ. ಇದಲ್ಲ ಸಾಲದೆಂಬಂತೆ ಒಂದಲ್ಲ, ಎರಡೆರಡು ವೆಹಿಕಲ್ (ಟಾಟಾ ಸುಮೊ ಮತ್ತು ಇಂಡಿಕಾ)ಗಳನ್ನು ಹೊಂದಿದ್ದಾನೆ. ಸಾಕಷ್ಟು ಪ್ರಮಾಣದ ಇಂದಿರಾ ವಿಕಾಸ ಪತ್ರಗಳು, ಬ್ಯಾಂಕ್ ಬ್ಯಾಲೆನ್ಸ್, ಬಂಗಾರದ ಆಭರಣಗಳ ಸಂಗ್ರಹವೆ ಇದೆ. ಇವನ್ನೆಲ್ಲ ಹೆಚ್ಚುವರಿ ಹಾಗೂ ನಿಷ್ಪಕ್ಷಪಾತ ತನಿಖೆಯ ಮೂಲಕ ಬಹಿರಂಗಗೊಳಿಸಬಹುದಾಗಿದೆ.

ಬೀದರ ಜಿಲ್ಲೆಯ ಜನಸಾಮಾನ್ಯನ ಜಿಲ್ಲಾಧಿಕಾರಿ ಎಂಬ ಹೆಸರನ್ನು ಗಳಿಸಿಕೊಂಡಿರುವ ಹರ್ಷಗುಪ್ತ ಇನ್ನಾದರೂ ಈ ಅಧಿಕಾರಿಯ ಇತಿಹಾಸವನ್ನು ಕೆದಕಿ ಈ ಭ್ರಷ್ಟ ಹೆಗ್ಗಣಕ್ಕೆ ಸರಿಯಾದ ಶಾಸ್ತಿ ಮಾಡಬಲ್ಲರ? ಕಾದು ನೋಡಬೇಕು.

■ ವಿಶ್ವಾರಾಧ್ಯ ಸತ್ಯಂಪೇಟೆ

ಪೊಲೀಸರ ಜಾಗವನ್ನೇ ಕದ್ದು ಮಾರಲು ಹೊರಟ ಭೂಪರು!

...ಎಂತೆಂಥಾ ಜನ ಇರ್ತಾರೆ ನೋಡಿ. ಮೋಸ ವಂಚನೆ ಮಾಡೋಕೆ ...ಷ್ಟಾ ದಾರಿ ಕಂಡ್ಕೊಂಡಿರ್ತಾರೆ ಎಂಬುದಕ್ಕೆ ಹುಬ್ಬಳ್ಳಿಯ ಈ ಘಟನೆಯೇ ... ಈ ಘಟನೆಯಲ್ಲಿ ಮೇಯಲು ಏನೂ ಸಿಗದಿದ್ದಕ್ಕೆ ಕೊನೆಗೆ ...ೀಸರ ಜಾಗವನ್ನೇ ಕದ್ದು ಮಾರಿಕೊಂಡಿದ್ದಾರೆ.

...ಹಳೇ ಹುಬ್ಬಳ್ಳಿಯ ಅಲ್ತಾಫ್ ನಗರದ ಪಕ್ಕದಲ್ಲಿರುವ ಸರ್ವೆ ನಂಬರ್ ...12, 13ರ ನಾಲ್ಕು ಎಕರೆ ಜಾಗ ಮೂಲತಃ ಖಾಜಿ ಎಂಬುವವರಿಗೆ ...ದ್ದು, ಪೊಲೀಸರು ತಮ್ಮದೇ ಒಂದು ಹೌಸಿಂಗ್ ಸೊಸೈಟಿಯನ್ನು ...ಡಿಕೊಂಡು ಅದರ ಮೂಲಕ ಈ ಜಾಗವನ್ನು ಖರೀದಿಸಿದ್ದರು. ಈ ...ದಲ್ಲಿ ಮಾಲೀಕರಾದ ಖಾಜಿ ಮತ್ತು ಪೊಲೀಸರ ನಡುವೆ ಒಂದಿಷ್ಟು ...ದವೇರ್ಪಟ್ಟು ಅದೀಗ ಕೋರ್ಟ್ ಮೆಟ್ಟಿಲೇರಿದೆ.

ಆದರೆ ಗದಗಕರ, ಅಥೀದ ಸೂಂಡಕೆವಾಲೆ, ಮಟಕಾ ನಡೆಸುತ್ತಿರುವ ...ಮು ಕಮದೊಳ್ಳಿ ಎಂಬ ಮಹಾಶಯರು ಸೇರಿಕೊಂಡು ಈ ...ಕ್ಕೆ ಬತ್ತಿ ಇಡುವ ಸ್ಕೀಂ ಹಾಕಿದ್ದರು. ಮನೆ ಕಟ್ಟಿಕೊಳ್ಳಲು ಜಾಗ ...ಸುವುದಾಗಿ ಹೇಳಿ, ಜಾಗ ನೋಡಲು ಬಂದವರಿಗೆ ಇದೇ ಜಾಗವನ್ನು ...ಸಿ, ಒಬ್ಬೊಬ್ಬರಿಂದ 500 ರಿಂದ 2000 ರೂ.ಗಳ ತನಕ ಅಡ್ವಾನ್ಸ್ ...ತ್ತಿಕೊಂಡಿದ್ದಾರೆ. ಜಾಗಕ್ಕೆ ಹೇಗೂ ಅಡ್ವಾನ್ಸ್ ದುಡ್ಡು ಕೊಟ್ಟಿದ್ದೇವಲ್ಲ ... ನೂರಾರು ಜನರು ಶೆಡ್ ಹಾಕಿಕೊಳ್ಳಲು ಪ್ರಾರಂಭಿಸಿಬಿಟ್ಟಿದ್ದಾರೆ. ... ಮಹಾಶಯರ ಹಾಲಿಕೆಯವರಿಗೆ ಗೊತ್ತಾಗಿ ಈಗ ಆ ಶೆಡ್‌ಗಳನ್ನೆಲ್ಲಾ ...ತೆರವುಗೊಳಿಸಿದ್ದಾರೆ.

...ಅಂದಹಾಗೆ, ಹೀಗೆ ಕಂಡವರ ಜಾಗಕ್ಕೆ ಬೇಲಿ ಹಾಕುವ ಕೆಲಸಕ್ಕೆ ...ಕಿದ ಮಹಾಶಯರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿದ್ದಾರೆ!

ಸರ್ಕಾರಿ ರಸ್ತೆಯನ್ನೇ ನುಂಗಿ ನೀರು ಕುಡಿದವರು!

ಧಾರವಾಡದ ಲಕಮನಹಳ್ಳಿಯ ಸರ್ವೆ ನಂಬರ್ 66ರಲ್ಲಿ ಗೋವಿಂದಗೌಡ ಪಾಟೀಲರಿಗೆ ಸೇರಿದ 1.38 ಎಕರೆ ಜಮೀನಿದೆ. ಅದಕ್ಕೆ ಹೊಂದಿಕೊಂಡಂತೆ ಸರ್ವೆ ನಂಬರ್ 68ರಲ್ಲಿ ಕಲಾಲ ಸಮಾಜದ ಸ್ಮಶಾನ ಭೂಮಿಯಿದೆ. ಈ ಎರಡೂ ಜಾಗೆಗಳ ನಡುವೆ ಸವದತ್ತಿ ರಸ್ತೆಗೆ ಸಂಪರ್ಕ ಕಲ್ಪಿಸುವ 66 ಅಡಿ ರಸ್ತೆ ಇತ್ತು. ಆಗ, ಗೋವಿಂದೇಗೌಡ ಪಾಟೀಲರು ತಮ್ಮ ಜಮೀನಿನಲ್ಲಿ 32 ಗುಂಟೆ ಜಾಗ ಕಡಿಮೆಯಾಗಿದೆ ಎಂದು ವಾದಿಸುತ್ತಾ ಸರ್ಕಾರದೊಂದಿಗೆ ಜಗಳಕ್ಕಿಳಿದರು; ರಾಜಕೀಯ ಪ್ರಭಾವ ಬೀರಿದರು. ಜಿಲ್ಲಾಡಳಿತವೂ ಹಿಂದೆ ಮುಂದೆ ನೋಡದೆ 1992ರಲ್ಲಿ ರಸ್ತೆಯ ಜಾಗದಲ್ಲಿಯೇ 32 ಗುಂಟೆಯನ್ನು ಗೋವಿಂದಗೌಡರಿಗೆ ನಾಲ್ಕು ಸಾವಿರ ರೂ.ಗಳಿಗೆ ಮಾರಿಬಿಟ್ಟಿತು. ಜಾಗ ಕೈಗೆ ಸಿಕ್ಕಿದ್ದೇ ತಡ ಪಾಟೀಲರು ಅದಕ್ಕೆ ಮುಳ್ಳುಬೇಲಿ ಹಾಕಿಸಿ ಭದ್ರಪಡಿಸಿಕೊಂಡುಬಿಟ್ಟರು.

ಇದನ್ನು ನೋಡಿ ಕಲಾಲ ಸಮಾಜದವರು ಸುಮ್ಮನಿರುತ್ತಾರೆಯೇ? ನಮಗೆ ಸ್ಮಶಾನಕ್ಕೆ ಹೋಗಲು ದಾರಿ ಇಲ್ಲ, ರಸ್ತೆ ಕೊಡಿ ಎಂದು ನ್ಯಾಯಾಲಯದ ಮೊರೆ ಹೊಕ್ಕರು. ನ್ಯಾಯಾಲಯವು 1997ರಲ್ಲಿ ಆದೇಶ ನೀಡಿ ಇವರ ಪರವಾಗಿಯೇ ತೀರ್ಪಿತ್ತು ರಸ್ತೆ ಒದಗಿಸಬೇಕೆಂದು ಜಿಲ್ಲಾಡಳಿತಕ್ಕೆ ಸೂಚಿಸಿತು. ಆದರೆ, ರಸ್ತೆ ಕೊಡೋದಕ್ಕೆ ಜಾಗ ಬೇಕಲ್ಲ. ಅದನ್ನಾಗಲೇ ಗೋವಿಂದಗೌಡ ಪಾಟೀಲರಿಗೆ ಮಾರಿಕೊಂಡಾಗಿತ್ತು. ಜಿಲ್ಲಾಡಳಿತದ ವಿರುದ್ಧ ಕಲಾಲ ಸಮಾಜದವರು ಪ್ರಾದೇಶಿಕ ಆಯುಕ್ತರಿಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಬರುವ ಫೆಬ್ರವರಿ 11ಕ್ಕೆ ವಿಚಾರಣೆ ಇದೆ. ನುಂಗಿರೋ ರಸ್ತೆಯನ್ನು ವಾಂತಿಮಾಡಿಸಿ ಹೊರತೆಗೆಯುತ್ತಾರೋ ಏನೋ ನೋಡೋಣ.

ಗೌರಿ ಲಂಕೇಶ್




ಗಿಡುಗಗಳಿಗೆ ಬಲಿಯಾದ ಗಿಳಿ ಬೆನಜೀರ್ 6

ಎಲ್ಲರಿಗೂ ಗೊತ್ತಿರುವಂತೆ ನಿಶ್ಚಿತ ಮದುವೆಗಳ ಅಂತರಾಳದಲ್ಲಿ ಹಲವು ಸರಳ ಸೂತ್ರಗಳು-ಅವುಗಳನ್ನು ಲೆಕ್ಕಾಚಾರಗಳು ಎಂದರೂ ನಡೆಯುತ್ತದೆ-ಅಡಗಿರುತ್ತವೆ. ಅವುಗಳಲ್ಲಿ ಪ್ರಮುಖವಾದವು ವಂಶಪಾರಂಪರ್ಯವಾಗಿ ಪಡೆದಿರುವ ಆಸ್ತಿಯನ್ನು ಕಾಪಾಡಿಕೊಳ್ಳುವುದು; ಸಾಧ್ಯವಾದರೆ ಬೀಗತನವನ್ನು ಬೆಳೆಸುವ ಮೂಲಕ ಆಸ್ತಿಯನ್ನು ಹೆಚ್ಚಿಸಿಕೊಳ್ಳುವುದು; 'ಸೂಕ್ತ'ರಲ್ಲದವರೊಂದಿಗೆ ಹುಡುಗ ಅಥವಾ ಹುಡುಗಿ ಸಂಬಂಧವನ್ನು ಏರ್ಪಡಿಸಿಕೊಳ್ಳುವ ಮುನ್ನವೇ ಮದುವೆ ನಿಶ್ಚಿತ ಕಾರ್ಯಕ್ರಮವನ್ನು ನಡೆಸುವುದು, ಕೊನೆಗೆ ಅಕಸ್ಮಾತ್ ಹುಡುಗ ಅನರ್ಹಳೊಂದಿಗೆ ಅಕ್ರಮ ಸಂಬಂಧ ಹೊಂದಿದ್ದರೆ ಆತನ ಸ್ಥಾನ-ಮಾನಕ್ಕೆ ಸೂಕ್ತವಾದ ಹುಡುಗಿಯೊಂದಿಗೆ ಮದುವೆ ನಡೆಸಿ ಆತನ ಅಕ್ರಮ ಸಂಬಂಧವನ್ನೂ ಮರೆಮಾಡುವುದು.

ವಧು ಮತ್ತು ವರ ಒಬ್ಬರನ್ನೊಬ್ಬರು ಇಷ್ಟಪಡುತ್ತಾರೋ ಇಲ್ಲವೋ, ಅವರ ದಾಂಪತ್ಯ ಜೀವನ ಸುಗಮವಾಗಿರುತ್ತೋ ಇಲ್ಲವೋ ಎಂದೆಲ್ಲ ಚಿಂತಿಸುವ ಗೋಜಿಗೆ ಹೋಗದ ತಂದೆ-ತಾಯಿ ಹಲವೊಮ್ಮೆ ಪರಸ್ಪರ ದ್ವೇಷಿಸುವ, ಎಂತಹದ್ದೇ ಸಂದರ್ಭದಲ್ಲೂ ಜೊತೆಯಾಗಿ ಸಾಗಲಾರದ ಜೋಡಿಯನ್ನು ಬಲವಂತವಾಗಿ ಮದುವೆ ಮಂಟಪದಲ್ಲಿ ಕೂರಿಸುತ್ತಾರೆ.

ರಾಜಕೀಯದಲ್ಲೂ ಇಂತದ್ದು ನಡೆಯುತ್ತದೆ. ಆಧುನಿಕ ಇತಿಹಾಸದುದ್ದಕ್ಕೂ ಇಂತಹದ್ದೇ ಅಕ್ರಮ 'ಮದುವೆ'ಗಳನ್ನು ಏರ್ಪಡಿಸುತ್ತಾ ಬಂದಿರುವ ಅಮೆರಿಕ ಪರ್ವೇಜ್ ಮುಷರಫ್ ಎಂಬ 'ವರ' ಮತ್ತು ಬೆನಜೀರ್ ಭುಟ್ಟೋ ಎಂಬ 'ವಧು' ನಡುವೆ ಒಂದು 'ರಾಜಕೀಯ ಮದುವೆ'ಯನ್ನು ನೆರವೇರಿಸಲು ಮುಂದಾಯಿತು.

ಮೊದಲೇ ಹೇಳಿದಂತೆ ಇಂತಹ ಒಂದು ತಲೆಕೆಟ್ಟ ಕೆಲಸಕ್ಕೆ ಮುಂದಾಗಲು ಅಮೆರಿಕಕ್ಕೆ ಅದರದ್ದೇ ಆದ ಕಾರಣಗಳಿದ್ದವು. ಮೊದಲನೆಯದಾಗಿ ಅಮೆರಿಕದೊಂದಿಗೆ ನಿಕಟ ಬಾಂಧವ್ಯ ಹೊಂದಿರುವ ಪ್ರಮುಖ ಅರಬ್ ದೇಶಗಳಾದ ಸೌದಿ ಅರೇಬಿಯಾ, ಜೋರ್ಡಾನ್, ಕುವೈತ್ ಮತ್ತು ಈಜಿಪ್ಟ್ ಎಂಬ ಮುಸ್ಲಿಮ್ ದೇಶಗಳಲ್ಲಿ ರಾಜಪ್ರಭುತ್ವ ಅಥವಾ ನಿರಂಕುಶ ಪ್ರಭುತ್ವ ಅಸ್ತಿತ್ವದಲ್ಲಿದ್ದಾವೆಯೇ ಹೊರತು ಅಮೆರಿಕ ಟಾಂಟಾಂ ಮಾಡುವ ಪ್ರಜಾಪ್ರಭುತ್ವವಲ್ಲ, ಎರಡನೆಯದಾಗಿ ತಾಲಿಬಾನ್ ಆಡಳಿತದ ಮೇಲೆ ಯುದ್ಧ ಸಾರಿ ಅಫಘಾನಿಸ್ತಾನದಲ್ಲಿ ಈಗ ಅಮೆರಿಕ ಸ್ಥಾಪಿಸಿರುವ ಕರ್ಜೈ ನೇತೃತ್ವದ ಸರ್ಕಾರ ಎಷ್ಟು ಪ್ರಜಾಸತ್ತಾತ್ಮಕವಾಗಿದೆ ಎಂದರೆ ಅದರ ಹುಕುಂ ರಾಜಧಾನಿ ಕಾಬೂಲಿನ ಹೊರಗೆ ನಡೆಯುವುದಿಲ್ಲ, ಮೂರನೆಯದಾಗಿ ಪ್ರಸ್ತುತ ಇರಾಕಿನಲ್ಲೂ ಪರಿಸ್ಥಿತಿ



ಇದಕ್ಕಿಂತ ಭಿನ್ನವಾಗಿಲ್ಲ, ಅಮೆರಿಕದ ರಾಜಧಾನಿ ವಾಷಿಂಗ್‌ಟನ್‌ನಲ್ಲಿ ರಚಿಸಲಾದ ಸಂವಿಧಾನವನ್ನೇ ಇರಾಕಿನ ಮೇಲೆ ಹೇರಲಾಗಿದ್ದು ಅದರ ವಿರುದ್ಧ ಇರಾಕಿ ಜನ ಪ್ರತಿಭಟಿಸುತ್ತಿದ್ದಾರಲ್ಲದೆ ಪ್ರತಿನಿತ್ಯ ಆತ್ಮಾಹುತಿ ದಾಳಿಗಳು ಸಂಭವಿಸುತ್ತಿವೆ.

ಇದೆಲ್ಲದರ ಅರ್ಥ ಇಷ್ಟೆ: ಎಲ್ಲೆಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸುತ್ತೇನೆಂದು ಅಮೆರಿಕ ಹೆಜ್ಜೆ ಇಟ್ಟಿದೆಯೋ ಅಲ್ಲೆಲ್ಲಾ ಅರಾಜಕತೆಯೇ ಚೆಲ್ಲಾಟವಾಡುತ್ತಿದೆ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನದಲ್ಲಿನ ರಾಜಕೀಯ ಅತಂತ್ರ ಸ್ಥಿತಿ ಅಮೆರಿಕಕ್ಕೆ ಒಂದು ಹೊಸ ಪ್ರಯೋಗಾಲಯದಂತೆ ಕಂಡಿತು. ಹೇಗಾದರೂ ಮಾಡಿ ಅಮೆರಿಕದ ಪೌರೋಹಿತ್ಯದಲ್ಲಿ ಪಾಕಿಸ್ತಾನದಲ್ಲೊಂದು ಪ್ರಜಾಪ್ರಭುತ್ವದ ರೂಪವನ್ನು ಹೊಂದಿರುವ ಸರ್ಕಾರ ಅಧಿಕಾರ ಹಿಡಿಯುವಂತಾದರೆ, ಆ ಸರ್ಕಾರ ತನ್ನ 'ಭಯೋತ್ಪಾದನೆ ವಿರುದ್ಧ ಸಮರ'ದೊಂದಿಗೆ ಕೈಜೋಡಿಸುವಂತಾದರೆ, ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆದಂತಾಗುತ್ತದೆ ಎಂದು ಚಿಂತಿಸಿದ ಅಮೆರಿಕ ಬೆನಜೀರ್‌ಳ ಕೈಹಿಡಿಯುವಂತೆ ಮುಷರಫ್ ಮೇಲೆ ಒತ್ತಡ ತರಲಾರಂಭಿಸಿತು.

ಆದರೆ "ಆತ ತನ್ನ ಸೈನಿಕ ಸಮವಸ್ತ್ರವನ್ನು ತ್ಯಜಿಸುವವರೆಗೂ ನಾನು ಆತನ ಪಕ್ಕ ನಿಲ್ಲಲಾರೆ" ಎಂದಳು 'ವಧು' ಬೆನಜೀರ್. 'ವರ' ಮುಷರಫ್ ಕೂಡ "ನಾನೆಂದೂ ಅವಳ ಭ್ರಷ್ಟಾಚಾರಗಳನ್ನು ಮರೆಯಲಾರೆ" ಎಂದ. ಆಗ ಇವರಿಬ್ಬರ ನಡುವೆ ಬ್ರೋಕರ್‌ಗಿರಿಗೆ ಇಳಿದವರೇ ಅಮೆರಿಕದ ಗೃಹ ಕಾರ್ಯದರ್ಶಿ ಜಾನ್ ನೆಗ್ರೊಪಾಂಟೆ, ಬ್ರಿಟಿಷ್ ಪ್ರಧಾನಿ ಗಾರ್ಡನ್ ಬ್ರೌನ್ ಮತ್ತು ಪಾಕಿಸ್ತಾನದ ಜನರಲ್ ಕಿಯಾಣಿ. ISIನ ಮಾಜಿ ಬಾಸ್ ಆದ ಕಿಯಾಣಿ ಹಾಲಿ ಸೈನ್ಯಾಧಿಕಾರಿ ಕೂಡ ಆಗಿದ್ದರಿಂದ ಆತ ಮುಷರಫ್‌ಗೆ ಬೇಕಾದವನು. ಹಾಗೆಯೇ ಬೆನಜೀರ್ ಪ್ರಧಾನಿ ಆಗಿದ್ದಾಗ ಆಕೆಯಡಿ ರಕ್ಷಣಾ ಇಲಾಖೆಯ ಕಾರ್ಯದರ್ಶಿಯೂ ಆಗಿದ್ದ ಕಿಯಾಣಿ ಆಕೆಯ ನಂಬಿಕೆಗೂ ಪಾತ್ರವಾಗಿರುವವನು.

ಈ ಮೂವರು ಬ್ರೋಕರ್‌ಗಳ ಒತ್ತಡಕ್ಕೆ ಮಣಿಯದಿದ್ದರೆ ಹಿಂದೊಮ್ಮೆ ಜಿಯಾ ಉಲ್ ಹಕ್ ಎಂಬ ಸರ್ವಾಧಿಕಾರಿ ನಿಗೂಢವಾಗಿ ಸತ್ತಂತೆ ತನಗೂ ಆಗಬಹುದೆಂದು ಭಾವಿಸಿದ ಮುಷರಫ್ ವಿಧಿ ಇಲ್ಲದೆ ತನ್ನ ಸಮವಸ್ತ್ರವನ್ನು ತ್ಯಜಿಸಲು ಒಪ್ಪಿಕೊಂಡ. ಆದರೆ ಅದೇನೇ ಆದರೂ ತಾನು ಅಧ್ಯಕ್ಷನಾಗಿಯೇ ಮುಂದುವರಿಯಬೇಕೆಂದು ಪಟ್ಟುಹಿಡಿದ. ಇದಕ್ಕೆ ಅಮೆರಿಕ ಸಮ್ಮತಿಸಿದಾಗ ದೇಶದ ಸಂವಿಧಾನವನ್ನೇ ತಿರುಚಿದ ಮುಷರಫ್ ನಕಲಿ ಚುನಾವಣೆಗಳನ್ನು ನಡೆಸಿ ತನ್ನನ್ನು ತಾನೇ ಅಧ್ಯಕ್ಷ ಎಂದು ಘೋಷಿಸಿಕೊಂಡ. ಅಕಸ್ಮಾತ್ ಈ ಚುನಾವಣೆಗಳು ಅಸಿಂಧು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದರೆ ಗತಿ ಏನೆಂದು ತನ್ನ ವಿರುದ್ಧವಿದ್ದ ಮುಖ್ಯ ನ್ಯಾಯಾಧೀಶ ಇಫ್ತಿಕಾರ್ ಚೌಧುರಿಯನ್ನೇ ಅಮಾನತುಗೊಳಿಸಿದ. ಈ ಕ್ರಮದ ವಿರುದ್ಧ ದೇಶಾದ್ಯಂತ ವಕೀಲರು ಪ್ರತಿಭಟಿಸಲಾರಂಭಿಸಿದಾಗ ಅವರ ಮೇಲೆ ಸೈನ್ಯವನ್ನು ಛೂಬಿಟ್ಟು, ಸಾವಿರಾರು ವಕೀಲರನ್ನು ಬಂಧಿಸಿದ. ಇದೆಲ್ಲವನ್ನು ಪಾಕಿಸ್ತಾನದ ಜನ ಮತ್ತು ಮಾಧ್ಯಮಗಳು ಖಂಡಿಸುತ್ತಿದ್ದರೆ, ಪಾಕಿಸ್ತಾನದಲ್ಲಿನ ಈ ಘಟನೆಗಳಿಗೂ, ತನಗೂ ಸಂಬಂಧವಿಲ್ಲವೆಂಬಂತೆ ಬೆನಜೀರ್ ವರ್ತಿಸಿದಳು. ಮಾತ್ರವಲ್ಲ ಅಮೆರಿಕವು ಇರಾಕ್ ಮತ್ತು ಅಫಘಾನಿಸ್ತಾನದ ಮೇಲೆ ನಡೆಸಿದ್ದ ದಾಳಿಗಳನ್ನು ಸಮರ್ಥಿಸಿದಳು.

ಬೆನಜೀರ್‌ಳ ಈ 'ಮೌನಂ ಸಮ್ಮತಿ ಲಕ್ಷಣಂ' ಧೋರಣೆಯನ್ನು ಮೆಚ್ಚಿದ ಮುಷರಫ್ 'ರಾಷ್ಟ್ರೀಯ ಸಾಮರಸ್ಯ ಶಾಸನ'ವನ್ನು ಜಾರಿಗೆ ತಂದು ಆಕೆಯ ವಿರುದ್ಧವಿದ್ದ ಭ್ರಷ್ಟಾಚಾರದ ಆರೋಪಗಳನ್ನೆಲ್ಲ ರದ್ದುಗೊಳಿಸಿದ. ಬೆನಜೀರ್ ಮುಷರಫ್‌ನೊಂದಿಗೆ ಮಾಡಿಕೊಂಡಿದ್ದ ಈ ಅಕ್ರಮ ಒಪ್ಪಂದವನ್ನು ನೋಡಿ ಪಾಕಿಸ್ತಾನದ ಜನ ದಂಗಾದರು. ಇತ್ತ ಪಾಕಿಸ್ತಾನದಲ್ಲಿ ಬೆನಜೀರ್‌ಳ ಅವಕಾಶವಾದಿತನವನ್ನು ಮತ್ತು ಮುಷರಫ್‌ನ ಭಂಡತನವನ್ನು ಎಲ್ಲರೂ ತರಾಟೆಗೆ ತೆಗೆದುಕೊಳ್ಳುತ್ತಿರುವಾಗಲೇ, ಅತ್ತ ಅಮೆರಿಕ ಮತ್ತು ಬ್ರಿಟಿಷ್ ಮಾಧ್ಯಮಗಳು ಹೀಗೆ ಅನೈತಿಕವಾಗಿ 'ಶುಚಿ'ಗೊಳಿಸಲಾಗಿದ್ದ ಬೆನಜೀರ್‌ಳನ್ನು 'ಪ್ರಜಾಪ್ರಭುತ್ವದ ನಾಯಕಿ' ಎಂಬಂತೆ ಬಿಂಬಿಸಲಾರಂಭಿಸಿದವು. ವ್ಯಂಗ್ಯದ ಸಂಗತಿ ಯಾವುದೆಂದರೆ ಹಾರ್ಪರ್ ಕೊಲಿನ್ಸ್ ಎಂಬ ಪ್ರಕಾಶನ ಸಂಸ್ಥೆ ಹೊಸ ಪುಸ್ತಕವೊಂದನ್ನು ಬರೆಯಲು ಬೆನಜೀರ್‌ಳಿಗೆ ಅರ್ಧ ಮಿಲಿಯನ್ ಡಾಲರ್‌ಗಳನ್ನು ಮುಂಗಡ ಹಣವಾಗಿ ನೀಡಿತ್ತು, ಆ ಪುಸ್ತಕಕ್ಕೆ ಆಕೆ ಆಯ್ಕೆ ಮಾಡಿಕೊಂಡಿದ್ದ ಶೀರ್ಷಿಕೆ 'ಸಾಮರಸ್ಯ' ಎಂಬುದಾಗಿತ್ತು!

ಹೀಗೆ ತನ್ನ ವಿರುದ್ಧ ನ್ಯಾಯಾಲಯಗಳಲ್ಲಿ ಯಾವುದೇ ಆರೋಪಗಳಿಲ್ಲವೆಂದೂ, ತಾನು ಜೈಲು ಪಾಲಾಗುವುದಿಲ್ಲವೆಂದೂ ಖಾತ್ರಿ ಪಡಿಸಿಕೊಂಡ ಬೆನಜೀರ್ ಸುಮಾರು ಒಂಭತ್ತು ವರ್ಷಗಳ ಸ್ವಯಂಘೋಷಿತ ಗಡಿಪಾರನ್ನು ಅಂತ್ಯಗೊಳಿಸಿ 2007 ರ ಅಕ್ಟೋಬರ್ 17 ರಂದು ಪಾಕಿಸ್ತಾನಕ್ಕೆ ಹಿಂದಿರುಗಿದಳು.



ಒಂದು ರಾಜಕೀಯ 'ಮದುವೆ'

ರಾಜಕೀಯದಲ್ಲೂ ಇಂತದ್ದು ನಡೆಯುತ್ತದೆ. ಆಧುನಿಕ ಇತಿಹಾಸದುದ್ದಕ್ಕೂ ಇಂತಹದ್ದೇ ಅಕ್ರಮ 'ಮದುವೆ'ಗಳನ್ನು ಏರ್ಪಡಿಸುತ್ತಾ ಬಂದಿರುವ ಅಮೆರಿಕ ಪರ್ವೇಜ್ ಮುಷರಫ್ ಎಂಬ 'ವರ' ಮತ್ತು ಬೆನಜೀರ್ ಭುಟ್ಟೋ ಎಂಬ 'ವಧು' ನಡುವೆ ಒಂದು 'ರಾಜಕೀಯ ಮದುವೆ'ಯನ್ನು ನೆರವೇರಿಸಲು ಮುಂದಾಯಿತು. ಆದರೆ "ಆತ ತನ್ನ ಸೈನಿಕ ಸಮವಸ್ತ್ರವನ್ನು ತ್ಯಜಿಸುವವರೆಗೂ ನಾನು ಆತನ ಪಕ್ಕ ನಿಲ್ಲಲಾರೆ" ಎಂದಳು 'ವಧು' ಬೆನಜೀರ್. 'ವರ' ಮುಷರಫ್ ಕೂಡ "ನಾನೆಂದೂ ಅವಳ ಭ್ರಷ್ಟಾಚಾರಗಳನ್ನು ಮರೆಯಲಾರೆ" ಎಂದ. ಆಗ ಇವರಿಬ್ಬರ ನಡುವೆ ಬ್ರೋಕರ್‌ಗಿರಿಗೆ ಇಳಿದವರೇ ಅಮೆರಿಕದ ಗೃಹ ಕಾರ್ಯದರ್ಶಿ ಜಾನ್ ನೆಗ್ರೊಪಾಂಟೆ.

ಬೆನಜೀರ್ ಪಾಕಿಸ್ತಾನಕ್ಕೆ ಹಿಂದಿರುಗುವ
ಯನ್ನು ಮೊದಲೇ ಪಡೆದಿದ್ದ ಪಿಪಿಪಿ ಆ
ಸ್ವಾಗತಿಸಲು ಜನರನ್ನು ಸಜ್ಜುಗೊಳಿಸುತ್ತಿರು
ಆಕೆಯನ್ನು ಕೊಲ್ಲಲು ಹಲವರು ತಯಾರಿ
ತ್ತಿದ್ದರು. ತನ್ನ ಜೀವಕ್ಕೆ ಅಪಾಯವಿದೆ
ಬೆನಜೀರ್‌ಳಿಗೆ ಗೊತ್ತಿತ್ತಾದರೂ ತನ್ನ ಜನಪ್ರಿಯ
ಸಾಬೀತುಪಡಿಸಬೇಕೆಂಬ ಹಠಕ್ಕೆ ಬಿದ್ದ ಆಕೆ
ಬೃಹತ್ ಸ್ವಾಗತ ಮೆರವಣಿಗೆ ನಡೆಸಲೇಬೆ
ಪಟ್ಟು ಹಿಡಿದಳು. ದುಬೈನಿಂದ ಕರಾಚಿಗೆ ಹಾ
ನಂತರ ವಿಮಾನ ನಿಲ್ದಾಣದಿಂದ ಪಾಕಿಸ್ತಾನದ
ಮೊಹಮದ್ ಆಲಿ ಜಿನ್ನಾರ ಸಮಾಧಿಯ
ಮೆರವಣಿಗೆಯಲ್ಲಿ ಸಾಗಿ ಅಲ್ಲಿ ಆಕೆ ಭಾಷಣ
ವುದೆಂದು ಮುಂಚಿತವಾಗಿ ನಿಗದಿಪಡಿಸಲಾಗಿತ್ತು
ಆಕೆ ಪ್ರಯಾಣಿಸುತ್ತಿದ್ದ ವಾಹನ ವಿಮಾನ ನಿಲ್ದಾ
ಹೊರಬರುತ್ತಿದ್ದಂತೆ ಬಾಂಬ್‌ಗಳು ಸ್ಫೋಟಗೊ
ಆ ಘಟನೆಯಲ್ಲಿ ಆಕೆಗೆ ಏನೂ ಆಗದಿದ್ದರೂ ಆ
ಸ್ವಾಗತಿಸಲು ಬಂದಿದ್ದ ಬೆಂಬಲಿಗರು,
ರಕ್ಷಣೆಗೆಂದು ನಿಂತಿದ್ದ ಪೊಲೀಸರು ಮತ್ತು ಆ
ಕೊಲ್ಲಲೆಂದೇ ಆಗಮಿಸಿದ್ದ
ಹುತಿ ದಾಳಿಕೋರರು ಸೇ
ಒಟ್ಟು 139 ಜನ ಸಾವಿಗೀಡ

ಬೆನಜೀರ್ ಮತ್ತು ಮು
ನಡುವಿನ 'ರಾಜಕೀಯ ಮ
ನಡೆಯುವ ಮುನ್ನವೇ ಕರ
ಬೀದಿಯಲ್ಲಿ ರಕ್ತದ ಹೊಳೆ ಹ

ಈ ಹತ್ಯಾಕಾಂಡಕ್ಕೆ ಮುಷ
ಕಾರಣ ಎಂದು ಬೆನಜೀರ್ ನ
ದೂರಲಿಲ್ಲವಾದರೂ ಅದರ
ಆತನ ಕೈವಾಡ ಇತ್ತೆಂದೇ
ಭಾವಿಸಿದರು. ಅಷ್ಟಲ್ಲದೆ
ಜೀವಕ್ಕೂ ಅಪಾಯವಿದೆ
ಗೊತ್ತಿದ್ದರೂ ಅಷ್ಟೊಂದ
ಆಕೆಯನ್ನು ಸ್ವಾಗತಿಸಲು ನ
ಆ ರಕ್ತದೋಕುಳಿಯಿಂದ
'ಜನಪ್ರಿಯತೆ'ಗೆ ಕುಂದಾಗ
ಅಲ್ಲಿಯತನಕ ಎಲ್ಲಾ ಡೀಲ
ಕುದುರಿಸುತ್ತಿದ್ದ ಸಹಚರರು
ಮುಂದೆ ತಮ್ಮ ಲಾ
ಬೆನಜೀರ್‌ಳೊಂದಿಗೆ ಹಂಚಿಕೊಳ್ಳಬೇಕಲ್ಲಾ
ಗೊಣಗಲಾರಂಭಿಸಿದ್ದು, ತನ್ನ ವಿರುದ್ಧ ಮಾಧ್ಯ
ನಿರಂತರ ಟೀಕಾಪ್ರಹಾರದಲ್ಲಿ ತೊಡಗಿದ್ದು....
ಮುಷರಫ್‌ನನ್ನು ಕಂಗೆಡಿಸಿದ್ದವು. ಇದೆಲ್ಲದರ
ಅಕಸ್ಮಾತ್ ನ್ಯಾಯಾಲಯ ಮುಷರಫ್ ಅಧ್ಯ
ವಿರಿದ್ದನ್ನೇ ಅಕ್ರಮ ಎಂದು ತೀರ್ಪಿತ್ತರೆ
ಆತಂಕವೂ ಆತನನ್ನು ಕಾಡಲಾರಂಭಿಸಿತು.
ಸಂದರ್ಭದಲ್ಲಿ ತನ್ನ ಚರ್ಮವನ್ನು ಉಳಿಸಿಕೆ
ಆತನಿಗೆ ತೋಚಿದ ಮಾರ್ಗ ಒಂದೇ
ತುರ್ತುಪರಿಸ್ಥಿತಿಯನ್ನು ಹೇರುವುದು. ಆದರೆ
ಹೇರುವ ಮುನ್ನ ಆತ ತನ್ನ ನಿರ್ಧಾರದ ಬಗ್ಗೆ ಅ
ಸರ್ಕಾರಕ್ಕೂ, ಬ್ರಿಟನ್ನಿನ ಪ್ರಧಾನಿಗೂ ತಿಳಿಸಿದ.
ಒಪ್ಪಿಗೆ ಸೂಚಿಸಿದ ಆ ಸರ್ಕಾರಗಳು ಸ
ಪಾಕಿಸ್ತಾನದಲ್ಲಿ ತುರ್ತುಪರಿಸ್ಥಿತಿ ಘೋಷಣೆಗೊ
ವುದರ ಬಗ್ಗೆ ಬೆನಜೀರ್‌ಳಿಗೆ ತಿಳಿಸಿದರು.
ವರ್ಷಗಳ ನಂತರ ದೇಶಕ್ಕೆ ಹಿಂದಿರುಗಿದ್ದ ಬೆ
ಪಾಕಿಸ್ತಾನದಲ್ಲೇ ಉಳಿದು ಅದನ್ನು ವಿರೋ
ಬದಲಾಗಿ ರಾತ್ರೋರಾತ್ರಿ ಮತ್ತೆ ದು
ಹಾರಿಹೋದಳು!

ನವೆಂಬರ್ ಮೂರರಂದು ತುರ್ತು
ಘೋಷಿಸಿದ ಮುಷರಫ್ ಎಲ್ಲಾ ಟೀವಿ ಚಾನೆಲ
ಬಂದ್ ಮಾಡಿದ. ಎಲ್ಲಾ ಮೊಬೈಲ್ ನೆಟ್‌ವರ್ಕ
ಸ್ಥಗಿತಗೊಳಿಸಿದ. ಸುಪ್ರೀಂಕೋರ್ಟ್ ಸುತ್ತ ಸ
ಜಮೆ ಮಾಡಿದ. ಆದರೂ ತುರ್ತುಸಭೆ
ಸುಪ್ರೀಂಕೋರ್ಟಿನ ನ್ಯಾಯಾಧೀಶರು ತುರ್ತು
ಯನ್ನು 'ಕಾನೂನು ಮತ್ತು ಸಂವಿಧಾನ ಬಾಹಿರ
ಘೋಷಿಸಿದರು. ಇಂತಹ 'ಅಧಿಕ ಪ್ರಸಂ
ನ್ಯಾಯಾಧೀಶರನ್ನೆಲ್ಲ ಗೃಹಬಂಧನದಲ್ಲಿಟ್ಟ ಮು
ಅಷ್ಟೇ ಅಲ್ಲ, ಹಲವಾರು ಪಿಪಿಪಿ ನಾ
ಸೇರಿದಂತೆ, ಪ್ರಜಾಹಕ್ಕುಗಳ ಹೋರಾಟಗಾ
ವಕೀಲರನ್ನು ಸಾವಿರಾರು ಸಂಖ್ಯೆಯಲ್ಲಿ ಜೈ
ಕಾನೂನುಗಳನ್ನು ಮಾತ್ರವಲ್ಲ ಇಡೀ
ವ್ಯವಸ್ಥೆಯನ್ನೇ ತನ್ನ ಪರವಾಗಿ ತಿರುಚಲು ಮ
ಇಷ್ಟೆಲ್ಲ ಮಾಡುತ್ತಿದ್ದರೂ ಅಮೆರಿಕ ಸುಮ್ಮ
ಮುಷರಫ್‌ನ ವಿರುದ್ಧ ಏಕೈಕ ದನಿಯಾಗಿದ
ದುಬೈನಿಂದ ಪ್ರಸಾರಗೊಳ್ಳುತ್ತಿದ್ದ ಜಿಯೋ ಟೀವ

ಅನ್ನೂ ಅಮೆರಿಕ ಬಂದ್ ಮಾಡಿಸಿತು!

"ಇವಕ್ಕೆಲ್ಲ ದುಬೈನಿಂದ ಬೆನಜೀರ್ ಪ್ರತಿಕ್ರಿಯಿಸಿದ ರೀತಿಯಂತೂ ವಿಚಿತ್ರವಾಗಿತ್ತು. ತುರ್ತುಪರಿಸ್ಥಿತಿಯನ್ನು ಹೇರಿದ್ದನ್ನು ಖಂಡಿಸದೇ, ತನಗೆ 'ಶಾಕ್' ಆಗಿದೆ ಎಂದಷ್ಟೇ ಹೇಳಿದ ಬೆನಜೀರ್ "ಇದಕ್ಕೆ ಮುಖ್ಯ ನ್ಯಾಯಾಧೀಶರೂ ಸಾಕಷ್ಟು ಪ್ರಚೋದನೆ ನೀಡಿದರು" ಎಂದು ಅವರನ್ನೇ ಟೀಕಿಸಿದಳು!

ಆದರೆ ಪಾಕಿಸ್ತಾನದ ಜನ ಮುಷರಫ್ ವಿರುದ್ಧ ಆಕ್ರೋಶಗೊಂಡಿದ್ದರು. ಅದರಲ್ಲೂ ಪಾಕಿಸ್ತಾನ ಪೀಪಲ್ಸ್ ಪಕ್ಷದ ನಾಯಕರು 2008 ರ ಜನವರಿ 8 ರಂದು ನಡೆಯಲಿರುವ ಚುನಾವಣೆಗಳಲ್ಲಿ ಗೆಲ್ಲಲು ಇದೇ ಸೂಕ್ತ ಅವಕಾಶ ಎಂದು ಬಗೆದು ಬೆನಜೀರ್ ಪಾಕಿಸ್ತಾನಕ್ಕೆ ಹಿಂದಿರುಗುವಂತೆ ಆಕೆಯ ಮೇಲೆ ಒತ್ತಡ ತಂದರು. ಆಕೆ ಹಿಂದಿರುಗಿದ ಕ್ಷಣ ವಿಮಾನ ನಿಲ್ದಾಣದಿಂದಲೇ ಆಕೆ ತುರ್ತುಪರಿಸ್ಥಿತಿಯನ್ನು ಖಂಡತುಂಡವಾಗಿ ಖಂಡಿಸಬೇಕೆಂದೂ, ಇಲ್ಲವೆಂದರೆ ತಮ್ಮ ಪಕ್ಷ ಹೋಳಾಗುತ್ತದೆಂದೂ ಮನದಟ್ಟು ಮಾಡಿದರು.

ಆಗ ಬೆನಜೀರ್‌ಳಿಗೆ ಬೇರೆ ದಾರಿ ಇರಲಿಲ್ಲ. ತುರ್ತುಪರಿಸ್ಥಿತಿಯನ್ನು ಖಂಡಿಸಿದ ಆಕೆ ವಿರೋಧ ಪಕ್ಷಗಳೊಂದಿಗೆ ಕೈಜೋಡಿಸಿ ಸರ್ವಾಧಿಕಾರಿ ಮುಷರಫ್‌ನನ್ನು ಒದ್ದೋಡಿಸುವುದಾಗಿ ಘೋಷಿಸಿದಳು ಮತ್ತು ಪ್ರಾಯಶ್ಚಿತ್ತ ಎಂಬಂತೆ ಮುಖ್ಯ ನ್ಯಾಯಾಧೀಶರನ್ನು ಭೇಟಿ ಆಗಿ ಅವರೊಂದಿಗೆ ಮಾತುಕತೆ ನಡೆಸಲು ಮುಂದಾದಳು. ಆದರೆ ಆತ ಆಕೆಯನ್ನು ತನ್ನ ಮನೆಯ ಬಾಗಿಲನ್ನೂ ತೆರೆಯದೆ ಹಿಂದಕ್ಕೆ ಕಳುಹಿಸಿದರು. ಅಷ್ಟೊತ್ತಿಗಾಗಲೇ ಮೌಲ್ಯಾಧಾರಿತ ರಾಜಕಾರಣ ಪ್ರಜ್ಞೆಯನ್ನೂ, ಸಿದ್ಧಾಂತಗಳನ್ನೂ ಮರೆತಿದ್ದ ಬೆನಜೀರ್ ಮತ್ತೆ ಅಧಿಕಾರ ಪಡೆಯಲು ಏನು ಬೇಕಾದರೂ ಮಾಡಲು ಸಿದ್ಧಳಾಗಿದ್ದಳು.

ಇದೇ ಹೊತ್ತಿಗೆ ಯಾಕೋ ತಾವು ನಡೆಸಲಿದ್ದ 'ಮದುವೆ' ಸುಸೂತ್ರವಾಗಿ ನಡೆಯುವುದಿಲ್ಲ ಎಂದು ಅಮೆರಿಕಕ್ಕೆ ಅನಿಸಲಾರಂಭಿಸಿತು. ಆಗ ಪಾಕಿಸ್ತಾನಕ್ಕೆ ಬಂದಿಳಿದ ಜಾನ್ ನೆಗ್ರೋಪಾಂಟೆ ಪ್ರತ್ಯೇಕವಾಗಿ ಮುಷರಫ್ ಮತ್ತು ಬೆನಜೀರ್‌ಳೊಂದಿಗೆ ಮಾತುಕತೆ ನಡೆಸಿ, ಒಬ್ಬರನ್ನೊಬ್ಬರು ಟೀಕಿಸುವುದನ್ನು ನಿಲ್ಲಿಸಿ, ಹಸೆಮಣೆ ಏರುವಂತೆ ಒಪ್ಪಿಸಿದನು.

ಆದರೆ ಬೆನಜೀರ್‌ಳ ದಿನಕ್ಕೊಂದು ರೀತಿಯ ಹೇಳಿಕೆಗಳಿಂದ ಆಕೆಯ ಬಗ್ಗೆ ಮತದಾರರಲ್ಲಿ ಜಿಗುಪ್ಸೆ ಪ್ರಾರಂಭವಾಗಿತ್ತು. ಅದಕ್ಕೆ ತಕ್ಕಂತೆ ಹಲವು ಸಮೀಕ್ಷೆಗಳು ಕೂಡ ಚುನಾವಣೆಗಳಲ್ಲಿ ಬೆನಜೀರ್‌ಳ ಪಿಪಿಪಿಗಿಂತ ನವಾಜ್ ಷರೀಫ್‌ನ ಪಾಕಿಸ್ತಾನ್ ಮುಸ್ಲಿಂ ಲೀಗ್ ಹೆಚ್ಚು ಸ್ಥಾನಗಳನ್ನು ಪಡೆಯಬಹುದು ಎಂದು ಸೂಚಿಸಿದವು.

ಇದನ್ನು ಕಂಡು ಮುಷರಫ್ ಆತಂಕಗೊಂಡ. ತಾನು ಬೆನಜೀರ್‌ಳೊಂದಿಗೆ ಅಧಿಕಾರ ಹಂಚಿಕೊಳ್ಳಲು ಸಿದ್ಧತೆ ನಡೆಸುತ್ತಿರುವಾಗ ಆ ಜಾಗಕ್ಕೆ ನವಾಜ್ ಷರೀಫ್ ಬಂದು ಕೂತರೆ ತನ್ನ ಗತಿ ಏನೆಂದು ಆತ ಲೆಕ್ಕ ಹಾಕಿದ. ಕೂಡಲೇ ತೀರ್ಥಯಾತ್ರೆಗೆಂದು ಮೆಕ್ಕಾಗೆ ಹೋದ ಮುಷರಫ್ ಹಿಂದಿರುಗುವ ಮುನ್ನ ಸೌದಿ ಅರೇಬಿಯಾದ ಶೇಕ್‌ಗಳೊಂದಿಗೆ ಮಾತುಕತೆ ನಡೆಸಿದ. ಯಾಕೆಂದರೆ ನವಾಜ್ ಷರೀಫ್ ಕೂಡ ಗಡಿಪಾರಾಗಿದ್ದಾಗ ಆತನಿಗೆ ಆಶ್ರಯ ನೀಡಿದ್ದವರು ಮತ್ತು ಆತ ಪಾಕಿಸ್ತಾನಕ್ಕೆ ಹಿಂದಿರುಗಿದಾಗ ತಮ್ಮ ಆಶೀರ್ವಾದಗಳೊಂದಿಗೆ ಒಂದು ದುಬಾರಿ ಕ್ಯಾಡಿಲಾಕ್ ಕಾರನ್ನೂ ನೀಡಿ ಕಳುಹಿಸಿದ್ದವರು ಇದೇ ಶೇಕ್‌ಗಳು. ಸಂಪ್ರದಾಯಸ್ಥರಾದ ಶೇಕ್‌ಗಳಿಗೆ ಎಂದಿದ್ದರೂ ಮಹಿಳೆ ಬೆನಜೀರ್‌ಗಿಂತ ಪುರುಷ ನವಾಜ್ ಷರೀಫ್‌ನೇ ಆಪ್ತನಾಗಿದ್ದ.

'ವರ' ಮುಷರಫ್ ತನ್ನ ಅಕ್ಕಪಕ್ಕದಲ್ಲಿ ಎರಡು ಹಸೆಮಣೆಗಳನ್ನಿಟ್ಟುಕೊಂಡು ಸಜ್ಜಾಗಿದ್ದ. ಅಮೆರಿಕದ ಆಶೀರ್ವಾದದೊಂದಿಗೆ ಬೆನಜೀರ್ ಬಂದರೂ ಸೈ, ಸೌದಿ ಅರೇಬಿಯಾದ ನೆರವಿನೊಂದಿಗೆ ನವಾಜ್ ಷರೀಫ್ ಬಂದರೂ ಸೈ ತಾನು ಮಾತ್ರ ಅಧಿಕಾರದಲ್ಲಿ ಉಳಿಯುವಂತೆ ನೋಡಿಕೊಂಡಿದ್ದ.

ಆದರೆ 'ವಧು' ಬೆನಜೀರ್‌ಳನ್ನು ತಡೆದಿದ್ದು ಚುನಾವಣೆಗಳಲ್ಲ, ಮತದಾರರಲ್ಲ, ಬದಲಾಗಿ ಭಯೋತ್ಪಾದಕರ ಗುಂಪಿನಿಂದ ಹಾರಿ ಬಂದ ಸ್ಫೋಟಕ ಬಂದೂಕಿನ ಗುಂಡು....

(ಮುಂದುವರೆಯುವುದು)

'ವಿಶ್ವನಾಥನಿಗೆ ಈಗ ಕೆಲಸಯಿಲ್ಲ ಅದ್ಕೆ ಬರದಿದಾನೆ'

"ಉಡುಪಿ ಮಠದ ಊಟದ ವಿಷಯದಲ್ಲಿ ಇನ್ನೆಂದೂ ತಲೆ ಹಾಕುವುದಿಲ್ಲ. ಇನ್ನೇನಿದ್ದರೂ ನಾನಾಯಿತು, ನನ್ನ ಸಂದರ್ಭೋಚಿತ ಉಪವಾಸವಾಯ್ತು, ಆದ್ದರಿಂದ ಮಠದ ವಿಷಯವನ್ನೆತ್ತಿ ಯಾರೂ ನನ್ನನ್ನು ಮಾತನಾಡಿಸಬೇಡಿ" ಎಂದು ವಿಶ್ವೇಶ ತೀರ್ಥ ಶ್ರೀಪಾದಂಗಳವರು ಹೇಳಿದ್ದಾರಂತಲ್ಲಾ. ಈ ವಿಷಯವನ್ನು ಕೇಳಿದ ಮಾಜಿ ಪ್ರಧಾನಿಗಳಾದ ದೇವೇಗೌಡರು "ಪೇಜಾವರ ಸ್ವಾಮಿಗಳು ರಾಜಕೀಯ ಸೇರಲು ಇದು ಉತ್ತಮವಾದ ಸಂದರ್ಭ. ಹೇಗಿದ್ದರೂ ಅವರ ಆಪ್ತ ಬಳಗವಾದ ವಾಜಪೇಯಿ ಮತ್ತು ಅಡ್ವಾಣಿ ಸ್ವಾಮಿಗಳ ಬರುವಿಕೆಯಿಂದ ಬಿಜೆಪಿಗೆ ಆನೆಬಲ ಬಂದಂತಾಗುತ್ತದೆಂದು ಭಾವಿಸಬಹುದು" ಎಂದರಂತಲ್ಲಾ. ಆಗ ಗೌಡರ ಹಿಂಭಾಗದಲ್ಲಿದ್ದ ಸೋಷಲಿಸ್ಟ್ ಶಿವಣ್ಣ "ಆನೆಬಲವಲ್ಲ ಸಾರ್, ನರಿಬಲ ಬಂದಂತಾಗುತ್ತದೆ" ಎಂದು ತಿದ್ದಿದನಂತಲ್ಲಾ.

ಗೌಡರ ವ್ಯಾಖ್ಯಾನ ಕೇಳಿದ ಪೇಜಾವರರು "ಗೌಡರ ಮಾತಿನಿಂದ ನಮ್ಮ ಮನಸ್ಸಿಗೆ ನೋವಾಗುವ ಸಂಭವ ಕಂಡುಬಂದಿದೆ. ನಾವು ಈ ದೇಶದ ಎಲ್ಲ ಪ್ರಧಾನಿಗಳ ಜೊತೆಯಲ್ಲೂ ಸ್ನೇಹದಿಂದ ಇದ್ದೆವು. ಹಾಗೆಯೇ ದೇವೇಗೌಡರ ಜೊತೆಗೂ ಇರಬಯಸುತ್ತೇವೆ. ಕರ್ನಾಟಕದ ಎಲ್ಲಾ ಮುಖ್ಯಮಂತ್ರಿಗಳ ಜೊತೆಗೂ ಸ್ನೇಹದಿಂದ ಇರಲೇಬೇಕಾದ ಪರಿಸ್ಥಿತಿಯುಂಟು. ಹಾಗೆಂದು ನಾವು ರಾಜಕಾರಣ ಮಾಡಲು ಹೋಗುವುದಿಲ್ಲ. ಗೌಡರು ನಡೆಸುತ್ತಿರುವ ಪೂಜಾವಿಧಾನಗಳನ್ನು ನೋಡಿದರೆ ಬಂದು ವಾಮಾಚಾರದ ಮಠ ಸೇರುವುದು ಒಳ್ಳೆಯದು" ಎಂದು ಇನ್ನು ಹೇಳಿಲ್ಲವಂತಲ್ಲಾ, ಥೂತ್ತೇರಿ!

*****

ಗೌಡರು ಪೇಜಾವರ ಶ್ರೀಗಳ ಬಗ್ಗೆ ಹೀಗೆ ನೇರವಾಗಿ ಹೇಳುವುದಕ್ಕೆ ಕಾರಣವೇನೆಂದರೆ, "ಅವರು ಸಿದ್ಧರಾಮಯ್ಯ ಬಂದು ನಡುಬಗ್ಗಿಸಿದಾಗ ಆಶೀರ್ವಾದ ಮಾಡಿದ್ದೇ ಕಾರಣವಾಗಿದೆ" ಎಂದು ವಿಶ್ವನಾಥ್ ಕಡೆ ಹೈದರು ವ್ಯಾಖ್ಯಾನಿಸಿದ್ದಾರಂತಲ್ಲಾ. ಈ ನಡುವೆ ಜೊತೆಗೊಬ್ಬ ಕುರುಬ ಇರಲೇಬೇಕು ಎಂದು ಗ್ರಹಿಸಿರುವ ಡಿ.ಕೆ.ಶಿ. ತನ್ನ ಅಭಿಮಾನಿ ಸಂಘದ ಜೊತೆಗೆ ಸಿದ್ಧರಾಮಯ್ಯನ ಅಭಿಮಾನಿ ಸಂಘವನ್ನು ಸೇರಿಸಿ ಸನ್ಮಾನ ಮಾಡಿಸಿಕೊಂಡು, ವಿಶ್ವನಾಥನನ್ನೇ ಪಾರ್ಟಿಯಿಂದ ಹೊರಹಾಕುವ ಸಂಚು ನಡೆಸಿದ್ದಾನಂತಲ್ಲಾ. ಇದನ್ನು ತಿಳಿದುಕೊಂಡ ದೇವೇಗೌಡ ಅಂಡ್ ಸನ್ಸ್ ರೋಮಾಂಚಿತವಾಗಿ ಮೈಸೂರು ಜಿಲ್ಲೆ ಕಾಂಗ್ರೆಸ್ಸಿನ ಗುಡಿಸಲಿಗೆ ಸೀಮೆಎಣ್ಣೆ ರೆಡಿ ಮಾಡಿಕೊಂಡಿದ್ದಾರಂತಲ್ಲಾ, ಥೂತ್ತೇರಿ!!

*****

"ಹಳೆ ಮೈಸೂರು ಪ್ರಾಂತ್ಯದ ಕಾಂಗ್ರೆಸ್ನಲ್ಲಿ ನಮಗ್ಯಾರು ಲೀಡರೇ ಇಲ್ಲ. ಆದ್ದರಿಂದ ಕೂಡಲೇ ನೀವು ಬೊಂಬಾಯಿ, ರಾಜಭವನ ಬಿಟ್ಟು ಬೆಂಗಳೂರಿನ ಸ್ವಂತ ಭವನಕ್ಕೆ ಬಂದು ವಿರಾಜಮಾನರಾಗಬೇಕು" ಎಂದು ಶಿವರಾಮೇಗೌಡ, ಡಿಕೆಶಿ, ಯೋಗೇಶಿ, ಮತ್ತಿತರ ಪುಟಗೋಸಿಗಳು ಕಣ್ಣೊರೆಸಿಕೊಂಡು ಕೇಳಲಾಗಿ, ಸರ್ವಸಂಘ ಪರಿತ್ಯಾಗಿ ಮತ್ತೆ ಸಂಸಾರಿಯಾಗುವ ತೀರ್ಮಾನ ತೆಗೆದುಕೊಂಡಂತೆ ಎಸ್ಸೆಂ ಕೃಷ್ಣರು ಮುಖ ಮಾಡಿ ಇನ್ನೇನು ಕರ್ನಾಟಕದ ದಾರಿ ಹಿಡಿಯಬೇಕಾದರೆ, ವಿಶ್ವನಾಥ್ ಕೃಷ್ಣನ ದಾರಿಗೆ ಮುಳ್ಳು ಹಾಕಿದರಂತಲ್ಲಾ, ಥೂತ್ತೇರಿ!!

*****

ಈ ನಡುವೆ ನಮ್ಮ ಜೆಂಟ್ಲುಮ್ಯಾನ್ ಎಸ್ಸೆಂ ಕೃಷ್ಣರನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿತು. ಕೂಡಲೇ ಫೋನ್ ಮಾಡಿದರೆ ಸಿಕ್ಕೇಬಿಟ್ಟರು. ರಿಂಗ್ ಟೋನ್; ಜಿಂದಗೀಬರ್ ನಹಿ ಭೂ ಲೇಂಗಿ ಓ ಬರುಸಾತ್ ಕಿ ರಾತ್ ಏಕ್ ಅಂಜಾನ್....

"ಹಲೋ ಸಾರ್, ನಾನು ಯಾಹೂ ಸಾರ್ ಮಾತಾಡ್ತಯಿರೋದು...."

"ಯಾಹೂ ಅವರೆ, ಬಹಳ ದಿನ ಆಯ್ತು ನಿಮ್ಮ ಜೊತೆ ಮಾತನಾಡಿ, ಏನ್ಹೇಳಿ?"

"ಏನಿಲ್ಲ ಸಾರ್, ತುಂಬ ಬೇಜಾರಾಯ್ತು. ಅದ್ಕೆ ಫೋನ್ ಮಾಡಿದೆ."

"ನನಗೂ ತುಂಬ ಬೇಸರ ಇಲ್ಲಿ, ಆದ್ರು ಸಮುದ್ರ ನೋಡಿಕೊಂಡು ಇದ್ದೀನಿ."

"ನಿಮಗಲ್ಲಿ ಸಮುದ್ರನಾದ್ರು ಅದೆ. ನಮಗಿಲ್ಲಿ ಕೆರೆಗಳೂ ಇಲ್ಲ ಸಾರ್. ಅದಕ್ಕೆ ಕೆರೆಗೆ ಬಿದ್ದು ಸಾಯೋರ ಸಂಖ್ಯೆ ಕಡಮೆಯಾಗಿದೆ."

"ರೈತರ ಆತ್ಮಹತ್ಯೆ ಹೇಗೆ ನಡೆದಿದೆ?"



"ನಿಮ್ಮ ಕಾಲದಷ್ಟಿಲ್ಲ. ಆದ್ರು ಅಲ್ಲೊಂದು ಇಲ್ಲೊಂದು ನಡಿತನೇ ಇವೆ. ರೈತರು ಬೆಳೆದಿರೊ ಕಬ್ಬನ್ನ ಕಟಾವು ಮಾಡ್ದೆ ಬೆಂಕಿ ಹಾಕಿ ಸುಡತಾಯಿದಾರೆ. ಆಮೇಲೆ ರಸ್ತೆಗೆ ತಂದು ಬಿಸಾಕ್ತ ಅವ್ರುರೆ. ಕೆಲವರು ಬೆಳೆದಿರೊ ಕಬ್ಬಿಗೆ ಟ್ರ್ಯಾಕ್ಟ್ರ ಹೂಡಿ ಉಳತ ಅವ್ರುರೆ. ಆದ್ರಿಂದ ನಿಧಾನಕ್ಕೆ ಆತ್ಮಹತ್ಯೆ ಶುರುವಾಗಬಹುದು."

"ರಾಜ್ಯಪಾಲರು ಏನು ಮಾಡ್ತಯಿದಾರೆ?"

"ಅವ್ರುರು ಯಲ್ಲಾನು ಸರಿಮಾಡಕ್ಕೆ ಟ್ರೈಮಾಡ್ತ ಅವ್ರುರೆ ಸಾರ್. ಈ ಬಿಜೆಪಿಗಳು ಅವರನ್ನ ಕಾಂಗ್ರೆಸ್ ಏಜೆಂಟರು ಅಂತರೆ. ಜೆಡಿಎಸ್‌ನೋರು ರಾಜ್ಯಪಾಲರು ಅಧಿಕಾರಿಗಳನ್ನ ವರ್ಗ ಮಾಡದು ನೋಡಿ ಒಂದಿಷ್ಟು ಹೆದ್ರಿಕೊಂಡವ್ರುರೆ."

ಥೂತ್ತೇರಿ
ಯಾಹೂ

"ಪಾಪ ಅಧಿಕಾರಿಗಳು ಏನು ಮಾಡ್ತರೆ? ಯಥಾ ರಾಜ ತಥಾ ಪ್ರಜಾ ಅಂತ ಕೇಳಿಲ್ವ?"

"ಏನೇ ಆಗ್ಲಿ, ಯಾವ ಕಡಿಂದ ನೋಡಿದ್ರು ನಿಮ್ಮ ಕಾಲನೆ ಚೆನ್ನಾಗಿತ್ತು ಸಾರ್."

"ಆ ಕಾಲ ಮತ್ತೆ ಬರುತ್ತೆ ಇರಿ."

"ದೇವೇಗೌಡ್ರು ನಿಮ್ಮ ಬಗ್ಗೆ ಆಗಾಗ್ಗೆ ಪ್ರಸ್ತಾಪ ಮಾಡ್ತರೆ ಸಾರ್."

"ಮಾಡ್ಲಿ, ಬಿಡಿ. ಹಾಗೆ ಮಾಡೋದರಿಂದ ಕರ್ನಾಟಕದ ಮಾಧ್ಯಮದವರು ನಮ್ಮ ಬಗ್ಗೆ ಬರೀತಾರೆ."

"ಏನೇ ಆದ್ರು ನೀವಿಲ್ಲಿ ಇರಬೇಕಾಗಿತ್ತು ಸಾರ್."

"ಇರಬೇಕಾಗಿತ್ತು ಸರಿ. ಅದ್ರೆ ನನ್ನ ನೇತೃತ್ವದ ಸರ್ಕಾರ ಅಧಿಕಾರ ಕಳಕೊಳ್ತು ಅಂತ ಸಮಯದಲ್ಲಿ ಆ ವಿರೋಧ ಪಕ್ಷದಲ್ಲಿ ಕೂರಕ್ಯಾಗಲ್ಲ, ಅದಕ್ಕೆ ಇಲ್ಲಿ ಬಂದೆ."

"ಈಚೆಗೆ ನಿಮ್ಮ ಸುದ್ದಿ ತುಂಬಾ ಚಾಲ್ತಿಯಲಿದೆ ಸಾರ್. ಜನಗಳಂತು ತುಂಬಾ ಮಾತಾಡ್ತಯಿದ್ದಾರೆ."

"ಏನು ಮಾತಾಡ್ತಯಿದಾರೆ ಹೇಳಿ? ನನಗೆ ಕರ್ನಾಟಕದ ಮಾಹಿತಿ ಬೇಕು."

"ವಿಶ್ವನಾಥ್ ಆತ್ಮಕತೆ ಬರದವ್ರುರೆ ಸಾರ್."

"ಈಗ ಆತ ಶಾಸಕನೂ ಅಲ್ಲ ಮಂತ್ರಿನೂ ಅಲ್ಲ, ಬಿಡುವಾಗಿರಬವ್ರುದು. ಕೆಲಸವಿಲ್ಲದ ಬಡಗಿ ಅದೇನೊ ಮಾಡಿದ ಅನ್ನೊ ಹಾಗೆ ಬರದಿರಬವ್ರುದು ಬಿಡಿ."

"ಅದರಲ್ಲಿ ನಿಮ್ಮ ಪ್ರಸ್ತಾಪನೂ ಬಂದಿದೆಯಂತೆ ಸಾರ್."

"ಬರ್ಲೇಬೇಕಲ್ಲವ. ಆತ ನನ್ನ ಸಂಪುಟದಲ್ಲಿ ಶಿಕ್ಷಣ ಮಂತ್ರಿಯಾಗಿದ್ದ. ಆಗ ಏನೇನೊ ಮಾಡೊವಿಕ್ಕೆ ಟ್ರೈ ಮಾಡಿದ. ಆಗ ನಾನು ಆತನ ಖಾತೆ ಕಿತ್ತುಕೊಂಡು ನಮ್ಮ ಬಿ.ಕೆ. ಚಂದ್ರಶೇಖರನಿಗೆ ಕೊಟ್ಟೆ."

"ಬಿ. ಸರೋಜಾದೇವಿಯವರ ಬಗ್ಗೆನೂ ಬರೆದವ್ರುರೆ ಸಾರ್."

"ಬರಿಲಿ ಬಿಡಿ, ಆಕೆ ನಮ್ಮ ಕಾಲದ ಬಹಳ ಒಳ್ಳೆ ನಟಿ. ಕನ್ನಡಕ್ಕೆ ಮೊಟ್ಟ ಮೊದಲು ಪದ್ಮಶ್ರೀ ತಂದುಕೊಟ್ಟ ನಟಿ. ಆಕೆಯಿಂದ ನಮ್ಮ ನಾಡಿಗೆ ಕೀರ್ತಿ ಬಂದಿದೆ. ನಾನೀಗ್ಲು ಅವರ ಹಳೆ ಚಿತ್ರಗಳನ್ನ ನೋಡ್ತಿನಿ."

"ನಾನೂ ನೋಡ್ತಿನಿ ಸಾರ್, ಅದರಲ್ಲೂ ತಮುಳ ಸಿನಿಮಾ ನೋಡ್ತಿನಿ."

"ಯಾಕೆ? ಕನ್ನಡ ನೋಡಲ್ವ?"

"ಆಕೆ ಕನ್ನಡದಲ್ಲಿ ನಟಿಸಿರೋದೆ ಹತ್ತದನೈದು ಸಿನುಮಾ ಸಾರ್. ಅದೇ ತಮುಳಲ್ಲಿ ಈಜುಡುಗೇಲಿ ಶಿವಾಜಿ, ಎಂ.ಜಿ.ಆರ್ ಜೊತೆಲೆಲ್ಲಾ ಚೆನ್ನಾಗಿ ಮಾಡಿದಾರೆ. ತೆಲುಗಲ್ಲೂ ಅದ್ಭುತವಾಗಿ ಮಾಡಿದಾರೆ ಸಾರ್. ಆಮೇಲೆ...."

"ಈ ಕಡೆ ಬಂದಾಗ ಸಿಕ್ಕಿ."

"ಇನ್ನೊಂದು ವಿಷಯ ಸಾರ್. ವಿಶ್ವನಾಥ್ ನಿಮ್ಮ ಮತ್ತು ಸರೋಜಾದೇವಿ ಹೆಸರನ್ನು ಸೇರಿಸಿ ಬರದಿದ್ದಾರಂತೆ."

"ಏನಂತ ಬರದಿದಾನೆ?"

"ಸರೋಜಾದೇವಿ ನಿಮ್ಮ ಭಾಗಕ್ಕೆ ನಂಬರ್ ಒನ್ ಅಂತ ಬರದವ್ರುರಂತೆ."

"ನಂಬರ್ ಒನ್ ಅಂದ್ರೆ?"


"ಈ ವಿಶ್ವನಾಥ್ ಮೂರುನಾಲ್ಕು ಹುಡುಗಿರನ್ನ ನೋಡಿ ನಾಲ್ಕನೆಯವಳನ್ನು ಮಾತ್ರ ಮದುವೆಯಾಗಿ ಪುನಃ ಐದನೆಯವಳನ್ನ ಮದುವೆಯಾದರಂತೆ. ಈಗ ಅವರ ಜೊತೆ ಇರೊ ಸಂಖ್ಯೆ ನಾಲ್ಕು ಮತ್ತು ಐದು. ಆದ್ರು ಮೊದಲಿನ ಸಂಖ್ಯೆ ಆಗಾಗ್ಗೆ ನೆನಪಿಗೆ ಬಂದು ನವಿರಾದ ನೋವು ಮತ್ತು ವಿಷಾದವುಂಟು ಮಾಡ್ತವಂತೆ. ಅದೇ ತರ ನೀವು ಈಗ ಎರಡನೇ ನಂಬರ್ ಜೊತೆ ಸುಖವಾಗಿದ್ದಿರಿ, ಆದ್ರೆ ಮೊದಲನೇ ನಂಬರ್ ನೆನಪಿಗೆ ಬಂದು ಒಂದು ಅವ್ಯಕ್ತ ಪುಳಕ ಮತ್ತು..."

"ರೀ ಯಾಹೂ ಅವ್ರುರೆ, ಇನ್ನು ಮುಂದೆ ಫೋನ್ ಮಾಡಬೇಡಿ."

"ಸಾರಿ ಸಾರ್!"

ಥೂತ್ತೇರಿ!!!

ಹಿಂಗಾ ಕಾಲೆಳೆಯೋದು!



ಮಾಜಿ ಸಚಿವ ವಿಶ್ವನಾಥರಿಗೆ ಈಗ ವಯಸ್ಸೆಷ್ಟು ಎಂಬುದು ಅವರ 'ಹಳ್ಳಿ ಹಕ್ಕಿಯ ಹಾಡು' ಪುಸ್ತಕದಲ್ಲಿ ಕಾಣಸಿಗುವುದಿಲ್ಲ. ಆದರೂ ಅವರೀಗ ಅರವತ್ತರ ಆಸುಪಾಸಿನಲ್ಲಿರಬಹುದು ಎಂದುಕೊಂಡು ಈ ಪುಸ್ತಕದ ಬಗ್ಗೆ ಒಂದೆರಡು ಮಾತು ಹೇಳಬಹುದು...

ಸಾರ್ವಜನಿಕ ಜೀವನದಲ್ಲಿರುವ-ಅದರಲ್ಲೂ ರಾಜಕಾರಣದಲ್ಲಿರುವ-ವ್ಯಕ್ತಿಯೊಬ್ಬ ಹೀಗೆ ದಿಢೀರನೆ ಹಿಂದಕ್ಕೆ ತಿರುಗಿ ತನ್ನ ಬದುಕಿನ ಕತೆ ಹೇಳಿಕೊಳ್ಳುವುದು, ಸಮಕಾಲೀನರ ಬಗ್ಗೆ ದಾಖಲಿಸುವುದು ಒಳ್ಳೆಯದು. 'ಎಸ್.ಎಂ. ಕೃಷ್ಣ-ಬಿ. ಸರೋಜಾದೇವಿ' ಎಂಬ ವಿವಾದದ ಹೊರತಾಗಿಯೂ ಈ ಪುಸ್ತಕದಲ್ಲಿ ಓದಬೇಕಾದ ಅನೇಕ ವಿಚಾರಗಳಿವೆ. ಅವುಗಳಲ್ಲಿ ಮಜಾ ಅನ್ನಿಸುವ, ಯೋಚಿಸುವ, ಮನಸ್ಸು ಭಾರವಾಗುವ ಪ್ರಸಂಗಗಳಿವೆ. ತಮಾಷೆಯಾಗಿ, ಕತೆ ಹೇಳಿದಂತೆ ಘಟನೆಗಳನ್ನು ನಿರೂಪಿಸುತ್ತಾ ಹೋಗುವ ವಿಶ್ವನಾಥರೊಳಗೆ ಒಬ್ಬ ಸೂಕ್ಷ್ಮ ಸಂವೇದಿ ವ್ಯಕ್ತಿತ್ವ ಆಗಾಗ್ಗೆ ಎಚ್ಚರಗೊಂಡು ತನ್ನ ಸುತ್ತಲಿನ ವಿದ್ಯಮಾನಗಳನ್ನು ಗಮನಿಸುತ್ತಿತ್ತು ಎಂಬುದಕ್ಕೂ ಪುಸ್ತಕದಲ್ಲಿ ದಾಖಲೆಗಳಿವೆ.

ಸಾಬಿಯೊಬ್ಬ ಹಣ ಹೊರತೆಗೆಸಿ ಬರಗಾಲದಲ್ಲಿ ಜನರಿಗೆ ಹೇಗೆ ನೆರವಾದ ಎಂಬ ಮಜಾ ಘಟನೆಯಿದು.

ಆದಗೂರು ಸುತ್ತಮುತ್ತ ಒಮ್ಮೆ ಭಾರಿ ಬರಗಾಲ ಬಂತು. ತಿನ್ನಲೂ ಏನು ಇರದಿದ್ದಾಗ ರೈತರು ಸಾಲಕ್ಕಾಗಿ ಈ ಕುಟೀಗೌಡನ ಹತ್ತಿರ ಬಂದು ಬೇಡಿಕೊಂಡರೆ ಅವನಿಗೋ ಹಿಂಜರಿಕೆ. ಕೊಟ್ಟ ಸಾಲ ನಾಳೆ ವಾಪಸ್ ಬರದಿದ್ದರೆ ಏನು ಗತಿ ಎಂದು!

ಸಾರ್ವಜನಿಕ ಜೀವನದಲ್ಲಿರುವ-ಅದರಲ್ಲೂ ರಾಜಕಾರಣದಲ್ಲಿರುವ-ವ್ಯಕ್ತಿಯೊಬ್ಬ ಹೀಗೆ ದಿಢೀರನೆ ಹಿಂದಕ್ಕೆ ತಿರುಗಿ ತನ್ನ ಬದುಕಿನ ಕತೆ ಹೇಳಿಕೊಳ್ಳುವುದು, ಸಮಕಾಲೀನರ ಬಗ್ಗೆ ದಾಖಲಿಸುವುದು ಒಳ್ಳೆಯದು. 'ಎಸ್.ಎಂ. ಕೃಷ್ಣ-ಬಿ. ಸರೋಜಾದೇವಿ' ಎಂಬ ವಿವಾದದ ಹೊರತಾಗಿಯೂ ಈ ಪುಸ್ತಕದಲ್ಲಿ ಓದಬೇಕಾದ ಅನೇಕ ವಿಚಾರಗಳಿವೆ. ಅವುಗಳಲ್ಲಿ ಮಜಾ ಅನ್ನಿಸುವ, ಯೋಚಿಸುವ, ಮನಸ್ಸು ಭಾರವಾಗುವ ಪ್ರಸಂಗಗಳಿವೆ. ತಮಾಷೆಯಾಗಿ, ಕತೆ ಹೇಳಿದಂತೆ ಘಟನೆಗಳನ್ನು ನಿರೂಪಿಸುತ್ತಾ ಹೋಗುವ ವಿಶ್ವನಾಥರೊಳಗಿನ ಒಂದು ಸೂಕ್ಷ್ಮ ಸಂವೇದಿ ವ್ಯಕ್ತಿತ್ವ ಆಗಾಗ್ಗೆ ಎಚ್ಚರಗೊಂಡು ತನ್ನ ಸುತ್ತಲಿನ ವಿದ್ಯಮಾನಗಳನ್ನು ಗಮನಿಸುತ್ತಿತ್ತು ಎಂಬುದಕ್ಕೂ ಪುಸ್ತಕದಲ್ಲಿ ದಾಖಲೆಗಳಿವೆ.

ಕರ್ನಾಟಕದ ರಾಜಕಾರಣಕ್ಕೆ ಹಾಗೂ ಸಮಾಜಕ್ಕೆ ಮುಖ್ಯ ಅನ್ನಿಸುವಂತಹ ಕೆಲ ಕೊಡುಗೆಗಳನ್ನು ವಿಶ್ವನಾಥ್ ನೀಡಿದ್ದಾರೆ. ಅದು ಮಾಜಿ ಶಾಸಕರಿಗೆ ಮಾಸಾಶನದಿಂದ ಹಿಡಿದು ಮಾಹಿತಿ ಸಿಂಧು, ಮಧ್ಯಾಹ್ನದ ಬಿಸಿಯೂಟ, ಫೇಲ್ ಆದ ಮಕ್ಕಳು ಒಂದು ವರ್ಷ ವೇಸ್ಟ್ ಆಗದಂತೆ ತಕ್ಷಣ ಇನ್ನೊಮ್ಮೆ ಪರೀಕ್ಷೆ ಬರೆಯುವ ನಿಯಮ ತಂದದ್ದು ಇವೆಲ್ಲವೂ ಅದರಲ್ಲಿ ಸೇರಿವೆ.

ಇದೆಲ್ಲವನ್ನು ಮೀರಿದ ವಿಶ್ವನಾಥ ಸೂಕ್ಷ್ಮತೆ ನಮ್ಮನ್ನು ದಂಗು ಬಡಿಸುವುದು ಅಧಿಕಾರಸ್ಥ ರಾಜಕಾರಣಿಯಾಗಿಯೂ ಅವರು ಅನುಭವಿಸಿದ ಅಸಹಾಯಕತೆ ಹಾಗೂ ಏಕಾಂಗಿತನದ ಬಗ್ಗೆ ಹೇಳಿಕೊಂಡಾಗ!

ಮನೆ, ಹೆಂಡತಿ, ಮಕ್ಕಳೊಂದಿಗೂ ಚಣಕಾಲ ಆರಾಮಾಗಿ ಕಾಲ ಕಳೆಯಲು ಬಿಡದ ಜನ. ಅವರ ಲೋಭದ ಲೆಕ್ಕಾಚಾರಗಳು, ಅದರಿಂದ ಉಂಟಾಗುವ

ಬಿಳಿದಾಳೆ ಈಶ

ಸುಸ್ತು ಇವು ಎಲ್ಲಾ ಸೂಕ್ಷ್ಮಜ್ಞರಂತೆ ವಿಶ್ವನಾಥರಿಗೂ ಬಹಳ ಸಾರಿ ರೇಜಿಗೆ ಹುಟ್ಟಿಸಿವೆ.

ತನ್ನವರಿಂದಲೇ ಶೋಷಣೆಗೆ ಒಳಗಾಗುವ ರಾಜಕಾರಣಿಯ ದುಃಸ್ಥಿತಿ ಬಗ್ಗೆ ಕೊರಗುವ ಲೇಖಕರು ಒಂದು ಮುಖ್ಯವಾದ ಮಾತು ಹೇಳುತ್ತಾರೆ:

"ರಾಜಕಾರಣಿಗಳು ಬಲು ಸ್ವಾರ್ಥಿಗಳೆನ್ನುವ ಜನರು ಅದೇ ರಾಜಕಾರಣಿಯನ್ನು ತಮ್ಮ ಸ್ವಾರ್ಥಕ್ಕಾಗಿ ಹೇಗೆ ಬೇಕಾದರೂ ಬಳಸಿಕೊಳ್ಳುವುದನ್ನು ನಾನು ಬಲ್ಲೆ."

ನಾಯಕನಾದವನಿಗೆ ಈ ಎಚ್ಚರ ಇರಬೇಕಾದ್ದು ಬಹಳ ಅಗತ್ಯ. ತಮಗೆ ಆ ಪರಿಜ್ಞಾನವಿತ್ತು ಎಂಬುದನ್ನು ಸಾಬೀತು ಮಾಡಲು ವಿಶ್ವನಾಥ್ ಇಲ್ಲಿ ಪ್ರಯತ್ನಿಸಿದ್ದಾರೆ.

ಇಲ್ಲಿನ ಒಂದೇ ಒಂದು ವಿಪರ್ಯಾಸ ಏನೆಂದರೆ ವಿಶ್ವನಾಥರ ಇಡೀ ರಾಜಕೀಯ ಜೀವನ ಕಾಂಗ್ರೆಸ್ ಎಂಬ ಇಂದಿಯಾದ ಅತೀ ದುಷ್ಟರ ಗುಂಪಿನೊಂದಿಗೆ ತಳಕು ಹಾಕಿಕೊಂಡಿರುವುದು. ಆ ಬಗ್ಗೆ ಅವರು ಆತ್ಮವಿಮರ್ಶೆ ಮಾಡಿಕೊಳ್ಳುವುದಿಲ್ಲ.

ಜಾಗತೀಕರಣದ ಈ ಯುಗದಲ್ಲಿ ಸರ್ಕಾರಗಳು ಜನರಿಂದ ದೂರವಾಗಿ ಕಂಟಕವಾಗಿ ರೂಪಾಂತರವಾಗುತ್ತಿರುವುದನ್ನು ಅವರು ಗಮನಿಸುವುದಿಲ್ಲ. ಇದರ ಹೊರತಾಗಿ ಈ ಆತ್ಮಕಥನದ ಕೆಲ ಘಟನೆಗಳನ್ನು ಆಯ್ದು ಇಲ್ಲಿ ನೀಡಿದೆ.

ಲಾಳದ ಸಾಬಿ

ವಿಶ್ವನಾಥರ ಸಂಬಂಧಿ ಕುಟೀಗೌಡ ಎಂಬ ಶ್ರೀಮಂತ ಧಾನ್ಯ ವ್ಯಾಪಾರಿಯ ತಿಜೋರಿಯಿಂದ ಲಾಳದ


ಅದೇ ವೇಳೆಗೆ ಈ ಕುಟೀಗೌಡನಿಗೆ ನೂರಾರು ಮೂಟೆ ಭತ್ತವನ್ನು ಮಾರಿದ್ದ ಬಾಬ್ತು ಕೊಯಮತ್ತೂರಿನ ವ್ಯಾಪಾರಿಗಳಿಂದ ಹತ್ತಾರು ಸಾವಿರ ದುಡ್ಡು ಬಂದಿರುತ್ತದೆ. ಈ ವಿಷಯ ತಿಳಿದಿದ್ದ ಲಾಳದ ಸಾಬಿ ಏನಾದರೂ ಉಪಾಯ ಮಾಡಿ ಕುಟೀಗೌಡನ ಹಣ ರೈತರಿಗೆ ಸಾಲದ ರೂಪದಲ್ಲಿ ಕೊಡಿಸಬೇಕೆಂದು ಯೋಚಿಸಿಕೊಂಡು ಅವನಲ್ಲಿಗೆ ಹೋಗುತ್ತಾನೆ. ಕುಟೀಗೌಡ ಈ ಸಾಬಿಗೆ ನೂರು ರೂಪಾಯಿ ಕೊಡುವುದಿರುತ್ತದೆ. ಅದನ್ನು ಈಸಿಕೊಂಡು ಹೋಗುವ ಲಾಳದ ಸಾಬಿ ಮಾರನೇ ದಿನವೇ ಗಾಬರಿಯಾಗಿ ಓಡೋಡಿ ಬಂದು 'ಅಣ್ಣೋವ್ ನೀನ್ ಕೊಟ್ಟದ್ದು ಖೋಟಾನೋಟು, ಪೊಲೀಸ್ನೋರು ನಿನ್ನೆ ನನ್ನ ಹಿಡಿದು ಚೆನ್ನಾಗಿ ರಿಪೇರಿ ಮಾಡ್‌ಬುಟ್ರು, ಈಗ ನೀನೂ ಸಿಕ್ಹಾಕ್ಕತ್ತೀಯ" ಎನ್ನುತ್ತಾನೆ.

ಆ ಕಾಲದಲ್ಲೇ ಕೊಯಮತ್ತೂರು ಖೋಟಾ ನೋಟಿಗೆ ಈಗಿನಂತೆಯೇ ಫೇಮಸ್ ಆಗಿರುತ್ತೆ. ಇದರಿಂದ ಗೌಡ ಹೆದರಿ ಹೋಗಿ "ನೀನೇ ಏನಾದ್ರು ಉಪಾಯ ಹೇಳಪ್ಪ" ಅಂತ ಸಾಬಿಗೆ ಗೋಗರೆದೇಟಿಗೆ ಈ ಸಾಬಿ "ಆಯ್ತು, ಹೆಂಗೂ ಊರಲ್ಲಿ ಈಗ ಬರ. ಜನೀನತಾವ ಕಾಳೂಕಡ್ಡೀನೂ ಇಲ್ಲ, ಕಾಸೂ ಇಲ್ಲ ನೀನು ಈ ಖೋಟಾನೋಟನ್ನೆ ಅವರಿಗೆ ಸಾಲ ಅಂತ ಕೊಟ್ಟು ಕೈತೊಳಕೊ, ಬೇಕಾದ್ರೆ ಪ್ರಾಮಿಸರಿ ನೋಟೂ ಬರೆಸಿಕೊ" ಎಂದು ಒಂದು ಪ್ಲಾನ್ ಹೇಳಿಕೊಡುತ್ತಾನೆ. ಜನರಿಗೆ ಕಷ್ಟಕಾಲದಲ್ಲಿ ಹಣ ಸಾಲ ಸಿಕ್ಕು, ಆಮೇಲೆ ಅವರು ಅದನ್ನು ತೀರಿಸುತ್ತಾರೆ ಎನ್ನಿ.

ಅಸಲಿಗೆ ಅವ್ಯಾವು ಖೋಟಾನೋಟುಗಳಾಗಿರದೆ ಒರಿಜಿನಲ್ ನೋಟೇ ಆಗಿರುತ್ತದೆ. ರೈತರ ಕಷ್ಟ ನೋಡಿ ಮರುಗಿದ ಲಾಳದ ಸಾಬಿ ಕುಟೀಗೌಡನ ತಿಜೋರಿ ಬಾಗಿಲು ತೆಗೆಸಲು ಈ ಖೋಟಾನೋಟಿನ ಕತೆ ಸೃಷ್ಟಿಸಿರುತ್ತಾನೆ.

ದೇವೇಗೌಡರಿಗೆ ಜಾಡಿಸಿ ಒದ್ದ ದೇವರು

ಕೃಷ್ಣರಾಜನಗರ ಮತ್ತು ಹೊಳೇನರಸಿಪುರ ಗಡಿಯ ಗುರುವಾರದ ಬೋರೆಸಂತೆ ಹತ್ತಿರ ಒಬ್ಬ ಕುರುಬರವನ ಮೇಲೆ ದೇವರು ಬರುತ್ತಿತ್ತು. ಆಗ PWD ಮಂತ್ರಿಯಾಗಿದ್ದ ದೇವೇಗೌಡರಿಗೆ ಈಗಿನಂತೆಯೇ ದೇವರುಗಳನ್ನು ಹುಡುಕಿಕೊಂಡು ಹೋಗಿ ಅಡ್ಡಬಿದ್ದು ಬರುವ ಕೆಟ್ಟ ಚಾಳಿಯಿತ್ತು. ಈ ದೇವರ ಸುದ್ದಿ ಕೇಳಿದ ಗೌಡರು ಒಂದು ರಾತ್ರಿ ನೇರ ಬೋರೆಸಂತೆಗೆ ಬಂದು ಕುಳಿತುಬಿಟ್ಟರು. ಆಗತಾನೆ ಆ ಕುರುಬರವನ ಮೈಮೇಲೆ ದೇವರು ಬಂದಿತ್ತು. ಗೌಡರನ್ನು ನೋಡಿದ್ದೇ ತಡ ಅದರನ್ನು ತನ್ನ ಕಾಲಿನಿಂದ ಜಾಡಿಸಿ ಒದ್ದು "ಯಾಕಿಷ್ಟು ತಡವಾಗಿ ಬಂದೆ, ನನ್ನ ಮರೆತರೆ ನೀನ್ ಉದ್ಧಾರ ಆಗಲ್ಲ" ಎಂದು ಗದರಿಸಿತಂತೆ. ದೇವರ ಈ ಸಡನ್ ಅಟ್ಯಾಕ್‌ನಿಂದ ಗಾಬರಿಯಾದ ಗೌಡರು ಏನೇ ಉತ್ತರ ಕೊಡುವ ಮೊದಲೇ ಆ ದೇವರು ಕೈಲಿದ್ದ ಬೇವಿನ ಸೊಪ್ಪಿನಿಂದಲೇ ಗೌಡರಿಗೆ ಹಿಗ್ಗಾಮುಗ್ಗಾ ಬಾರಿಸಿತಂತೆ. ಅವತ್ತು ಗೌಡರು ಅಲ್ಲಿಂದ ಹೇಗೆ ಪಾರಾದರೆಂಬುದನ್ನು ವಿಶ್ವನಾಥ್ ದಾಖಲಿಸಿಲ್ಲ. ಆದರೆ ಒಬ್ಬ ಮಿನಿಸ್ಟರಿಗೆ ಒದ್ದು ದಕ್ಕಿಸಿಕೊಂಡ ದೇವರ ಕೀರ್ತಿ ಇನ್ನು ಹರಡಿ



ಜನರ ಭಯ ಭಕ್ತಿ ಜಾಸ್ತಿಯಾಗಿ 'ವ್ಯಾಪಾರ' ಚೆನ್ನಾಗಿ ಮುಂದುವರೆಯಿತಂತೆ.

ಪುಟ್ಟಣ್ಣಯ್ಯನ ಇಂಗ್ಲಿಷ್ ಸಿನಿಮಾ ಖಯಾಲಿ

ನಮ್ಮೆಲ್ಲರ ಅಭಿಮಾನದ ಹೋರಾಟಗಾರ ರೈತ ಸಂಘದ ಪುಟ್ಟಣ್ಣಯ್ಯನವರ ಬಾಲ ಲೀಲೆಯಿದು. ಪುಟ್ಟಣ್ಣಯ್ಯ ಮೈಸೂರಿನಲ್ಲಿ ಪಿಯುಸಿ ಓದುತ್ತಿದ್ದಾಗ ಇಂಗ್ಲಿಷ್ ಸಿನಿಮಾ ನೋಡುವ ಖಯಾಲಿ ಇತ್ತಂತೆ. ಭಾಷೆ, ನಟ-ನಟಿಯರ ಬಗ್ಗೆ ಗೊತ್ತಾಗದಿದ್ದರೂ ಕಿಸ್ಸಿಂಗ್ ಸೀನ್, ಫೈಟಿಂಗ್, ಚೇಸಿಂಗ್ ದೃಶ್ಯಗಳ ಮಜಾ ಪಡೆಯಲು ಸಿನಿಮಾ ನೋಡಿಬರುತ್ತಿದ್ದ ಪುಟ್ಟಣ್ಣಯ್ಯ ಸೀನಿಯರ್ ಸ್ಟೂಡೆಂಟ್‌ಗಳಾಗಿದ್ದ ವಿಶ್ವನಾಥ್ ಗುಂಪಿನವರ ಹತ್ತಿರ ತಾವು ನೋಡಿ ಬಂದ ಪಿಚ್ಚರಿನ ಕತೆಗ ಖುಷ್‌ಖುಷಿಯಾಗಿ ಈ ಕೆಳಕಾಣಿಸಿರುವಂತೆ ಬ ತ್ತಿದ್ದರಂತೆ.

"ಏನ್ ಸಾರ್, ಹೆನ್ರಿ ಸ್ಯಾಂಡೇಜ್ ಓಡ್ತಾ ಬ ಕೆಮಿಗೆ ತಚ್ಕೊಂಡು ಕಿಸ್ ವಡೆದ್‌ಬುಟ್ಟ, ಅಬ್ಬಾ ಮಜಾ ಸಾ, ಆಮ್ಯಾಗೆ 'ಟಟೋನಿ' ಪಲ್ಟಿ ಹೊಡ್ಕೊ ಬಂದು ಸ್ಯಾಂಡೇಜ್‌ಗೆ ಮೊಕ್-ಮೊಕಕ್ಕೆ ಬುಟ್ ಕೆ ಸಾ, ನನ್ಮಕ್ಕಳು ಏನ್ ಫೈಟಿಂಗ್ ಆಡ್ತಾರೆ ಸಾ.... ಉ ನಿಂತೋಯ್ತದೆ ಸಾ."

ಇಂಥ ಸಾಧಾರಣ ಪುಜ್ಜೆಯ, ಮಂಡ್ಯದ ವ ಯುವಕನಾಗಿದ್ದ ಪುಟ್ಟಣ್ಣಯ್ಯ ಈ ದಿನ ಸಾವಿ ರೈತರ ನಾಯಕರಾಗಿ ಹೋರಾಟಗಾರರಾಗಿ ರ ತಳೆದಿರುವುದು ನಿಜಕ್ಕೂ ಹೆಮ್ಮೆಯ ವಿಚಾರ.

ಆದರೆ ಅದೇಕೋ ಏನೋ ಪುಟ್ಟಣ್ಣಯ್ಯನ ವಿಶ್ವನಾಥರ ಈ ಪುಸ್ತಕದ ಬಗ್ಗೆ ಮುನಿಸು ತೋರಿ ಅದು ಬೇಕಿಲ್ಲ ಅನ್ನಿಸುತ್ತೆ, ಇವತ್ತು ಎಷ್ಟೇ ಘನ ಲೀಡರ್ ಆದವರ ಬಾಲ್ಯದಲ್ಲೂ ಹಾಸ್ಯದ ಘ ಹಾಸ್ಯಾಸ್ಪದ ವರ್ತನೆಗಳಿರಲು ಸಾಧ್ಯ. ಅದನ್ನು ನೆ ನಕ್ಕರೆ ಯಾರಿಗೂ ಅಪಚಾರವೇನಲ್ಲ ಬಿಡಿ.

ಈ ಮಂಡ್ಯದ ಹುಡುಗರಿಗೆ ಇಂಗ್ಲಿಷ್ ಸ ಎಷ್ಟಿತ್ತೆಂಬುದನ್ನು ವಿಶ್ವನಾಥ್ ಇನ್ನೊಂದು ಘ ಮೂಲಕ ಹೇಳುತ್ತಾರೆ.

ಮಾಚಯ್ಯನೆಂಬ ಇನ್ನೊಬ್ಬ ವಿದ್ಯಾರ್ಥಿ ಮಿತ್ರ ಈ ಇಂಗ್ಲಿಷ್ ಸಿನಿಮಾ ಚಟ ಇತ್ತಂತೆ. ಅವನೊ "ನಿನ್ನೆ ಗಾಯಿತ್ರಿ ಟಾಕೀಸಲ್ಲಿ 'ಡುರ್ ನಂಬರ್' ಪಿ ಹೋಗಿದ್ದೆ" ಎಂದಾಗ ವಿಶ್ವನಾಥ್‌ರಿಗೆ ಅರ್ಥವಾ ತನಿಖೆ ಮಾಡಿ ನೋಡಿದರೆ ಅದು Dr. No (ಡಾ ನೋ ಸಿನಿಮಾ ಎಂದಾಗಿತ್ತಂತೆ!

ಯಾರಿಗೆ ಜನತಾ ಮನೆ

ವಿಶ್ವನಾಥರ ತಂದೆ ಹುಚ್ಚೇಗೌಡರ ವ್ ಮಾನವೀಯತೆ ತೋರುವ ಘಟನೆ ಇದು.

ಮಂತ್ರಿಯಾಗಿದ್ದ ವಿಶ್ವನಾಥ್ ಒಮ್ಮೆ ಊ ಹೋಗಿದ್ದಾಗ ತಮ್ಮ ಮನೆ-ಹೊಲ ತೋಟದಲ್ಲಿ ಅ ವರ್ಷಗಳಿಂದ ಗೇಯುತ್ತಾ ಇದ್ದ ಒಂದಿಬ್ಬರಿಗೆ 'ಸರ್ಕಾ ಜನತಾ ಮನೆ ಕಟ್ಟಿಸಿಕೊಡುತ್ತೇನೆ' ಎಂದು



...ಪ್ರಶ್ನಿಸುತ್ತಾರೆ.

ಆವಕ್ಕೆ ಈ ಸಾಮಾನ್ಯ ರೈತ ಹುಚ್ಚೇಗೌಡ ಎಂಥ ...ಅಂತಃಕರಣದ ಮಾತು ಹೇಳುತ್ತಾರೆ ಗೊತ್ತೆ?

"ನೀನೆಂಥ ಎಮ್ಮೆಲ್ಲೆನಪ್ಪ, ನಮ್ಮನೇಲಿ ದುಡೀತಾ ...ರೋ ಮಕ್ಕಳಿಗೆ ನಾವು ಮನೆ ಕಟ್ಟಿಸಿಕೊಡಬೇಕ ...ರದು. ಬಡವರಿಗೆ ಕೊಡೊ ಜಂತಾಮನೆ ಕೊಡ್ತೀನಿ ...ಅಂತಿಯಲ್ಲ" ಎನ್ನುತ್ತಾರೆ.

ಈ ರೈತ ತಂದೆ ಹುಚ್ಚೇಗೌಡರು ಬಹುಶಃ ...ಮಂತಿ, ವಿಶ್ವನಾಥರ ನೈತಿಕಪ್ರಜ್ಞೆ ರೀತಿ ಇದ್ದವರು ...ಎನ್ನಬಹುದು.

ಕೆಂಗಲ್‌ರ ಕಾಳಜಿ

ವಿಶ್ವನಾಥರ ಮೊದಲ ಅವಧಿಯ ಶಾಸಕಗಿರಿ ...ಚಾಲೂ ಆಗಿದ್ದಾಗ ಒಮ್ಮೆ ಬೆಳಗಿನ ಹೊತ್ತು ಕೆಂಗಲ್ ಹನುಮಂತಯ್ಯ ಶಾಸಕರ ಭವನದ ವಿಶ್ವನಾಥ ರೂಂಗೆ ಬರುತ್ತಾರೆ. ಅಲ್ಲಿ ಕಳ್ಳಂಬೆಳ್ಳ ಶಾಸಕ ಜಯಚಂದ್ರ, ತೀರ್ಥಹಳ್ಳಿಯ ಕಡಿದಾಳ್ ದಿವಾಕರ್ ಮುಂತಾದ ಯುವಕ ಶಾಸಕರೂ ಇರುತ್ತಾರೆ. ಎಂದಿನಂತೆ ವಿಶ್ವನಾಥ್ ರೂಂನಲ್ಲಿ ಖಾಲಿ ಬಿಯರ್ ಬಾಟಲಿಗಳು, ಚೆಲ್ಲಾಡಿ ಬಿದ್ದಿದ್ದ ನ್ಯೂಸ್ ಪೇಪರ್‌ಗಳಿರುತ್ತವೆ. ವಿಶ್ವನಾಥ್ ಸಂಕೋಚದಿಂದ ಅವನ್ನೆಲ್ಲಾ ಮರೆಯಲ್ಲಿ ಎತ್ತಿಡಲು ಹೊರಟಾಗ ಕೆಂಗಲ್ಲರು "ಇವನ್ನು ಮುಚ್ಚಿಡುವ ಬದಲು ನಿಮ್ಮ ರೂಂನಲ್ಲಿ ಶಾಸನಸಭೆಯ ಪರಿಚಯ, ಚರ್ಚೆಯ ಪುಸ್ತಕಗಳು, ಸಂವಿಧಾನದ ಪ್ರತಿ ತಂದಿಟ್ಟುಕೊಂಡು ಓದಿ" ಎಂದು ಸಲಹೆ ಕೊಡುತ್ತಾರೆ.

ಆಮೇಲೆ ವಿಶ್ವನಾಥ್ ಕೆಂಗಲ್ಲರ ಮಾತಿಗೆ ಬೆಲೆ ಕೊಟ್ಟರೆಂಬುದು ಸಾಬೀತಾಗಿದೆ.

ಕೃಷ್ಣ ಕೃಷ್ಣ ... ಕೆಂಡದ್ದು

ನಟಿ ಬಿ. ಸರೋಜಾದೇವಿಯ ಪ್ರಸ್ತಾಪ ಬಂದಿರುವುದು ಈ ಎಸ್.ಎಂ. ಕೃಷ್ಣ ಚಾಪ್ಟರಿನಲ್ಲಿ.

ಬೇರೆಲ್ಲರ ಬಗ್ಗೆ ನಿಷ್ಠೂರವಾಗಿ, ತಮಾಷೆಯಾಗಿ ಆಪ್ತ ದನಿಯಲ್ಲಿ ಹೇಳಿಕೊಂಡು ಹೋಗುವ ವಿಶ್ವನಾಥ್



ಎಸ್.ಎಂ. ಕೃಷ್ಣರ ಬಗ್ಗೆ ಮಾತ್ರ ದಕ್ಷ, ಸುಸಂಸ್ಕೃತ ಎಂದೇ ಬಿಂಬಿಸುತ್ತಾರೆ. ಕರ್ನಾಟಕ ಕಂಡ ಅತೀ ಭ್ರಷ್ಟ, ...ದೀಮ ಮುಖ್ಯಮಂತ್ರಿಯಾದ ಕೃಷ್ಣ-ಅದು ಹೇಗೆ-...ಯಾಕೆ ವಿಶ್ವನಾಥರಿಗೆ ಉತ್ತಮ ಲೀಡರ್‌ನಂತೆ ಕಂಡರೋ ಗೊತ್ತಿಲ್ಲ.

ಅದಿರಲಿ.

ಈಗ ವಿವಾದವೆಬ್ಬಿಸಿರುವ ಕೃಷ್ಣ-ಸರೋಜಾದೇವಿ ವಿಚಾರವನ್ನು ವಿಶ್ವನಾಥ್ ಸ್ವಲ್ಪ ಹಸಿಹಸಿಯಾಗಿ ದಾಖಲಿಸುತ್ತಾರೆ.

ಒಂದು ದಿನ ಸಿಎಂ ಕೃಷ್ಣ ಜೊತೆ ವಿಶ್ವನಾಥ್ ಕಾರಿನಲ್ಲಿ ಹೋಗುತ್ತಿದ್ದಾಗ ದಿನಪತ್ರಿಕೆಯೊಂದರಲ್ಲಿ 'ಸರೋಜಾದೇವಿ ಮಂಡ್ಯದಿಂದ ಎಲೆಕ್ಷನ್‌ಗೆ ನಿಲ್ತಾರೆ' ಎಂಬ ಸುದ್ದಿ ಇರುತ್ತದೆ. ಆಗ ಕೃಷ್ಣ 'ಜನ ಏನಂತಾರ್ರಿ?' ಅಂತ ಕೇಳಿದಾಗ ವಿಶ್ವನಾಥ್ "ಏನೇ ಆಗ್ಲಿ ಕೃಷ್ಣ ಅವ್ರ ... ಮರೆಯಕಿಲ್ಲ, ಮಂಡ್ಯಕ್ಕೆ ಅವನ್ಮುಂಗೇ ಟಿಕೆಟ್ ಕೊಡ್ತಾನೆ" ಅಂತ ಜನ ಮಾತಾಡಿಕೊಳ್ತಾರೆ ಸಾರ್" ಎಂದು ಉತ್ತರಿಸುತ್ತಾರೆ.

ಆಗ ಕೃಷ್ಣ "ಹಾಗೆಲ್ಲಾ ನಾವು ಯಾರನ್ನೂ ಮರೆಯೋಕಾಗುತ್ತಾ?" ಅಂದರೆ ವಿಶ್ವನಾಥ್ "ನಾನಂತೂ ... ಮರೆತಿಲ್ಲ" ಎನ್ನುತ್ತಾರೆ.



ಓಟರ್ ಲಿಸ್ಟ್ ಥರ ಬೆಳೆಯಬಹುದಾದ ಇವರಿಬ್ಬರ ಪ್ರಣಯ ಚೇಷ್ಟೆಗಳ ವಿವರ ಕರ್ನಾಟಕದ ಜನರಿಗೂ ಅಷ್ಟೋ ಇಷ್ಟೋ ತಿಳಿದಿದೆ. ಅದರಲ್ಲಿ ಪಾಪ, ನಿತ್ಯ ದೇವರ ಪೂಜೆ ಮಾಡಿಕೊಂಡು ಸೈಲೆಂಟಾಗಿರುವ ಸರೋಜಾದೇವಿಯ ವಿಷಯ ಪ್ರಸ್ತಾಪಿಸಿ ವಿಶ್ವನಾಥ್ ಜೇನುಗೂಡಿಗೆ ಕಲ್ಲು ಹೊಡೆದಂತಾಗಿದೆ. ವಿಶ್ವನಾಥರ ತಲೆ ಕಂಡರಾಗದ ಡಿ.ಕೆ. ಶಿವಕುಮಾರ್ ಇದರೊಳಗೆ ನುಗ್ಗಿ ಈಗ ಇನ್ನಷ್ಟು ರಾಡಿ ಎಬ್ಬಿಸಿ ಕೃಷ್ಣಗೆ ಇನ್ನಷ್ಟು ಮುಜುಗರ ಸೃಷ್ಟಿಸಿದ್ದಾರೆ.

ಅದೂ ರಾಜ್ಯ ರಾಜಕಾರಣಕ್ಕೆ ಮರಳಿ ಬರಲು ಕೃಷ್ಣ ರೆಡಿಯಾಗುತ್ತಿರುವ ಕೆಟ್ಟ ಗಳಿಗೆಯಲ್ಲಿ....

ಮಗಳ ಮದುವೆ ಎಷ್ಟು ಚಂದ

ತಮ್ಮ ಅತೀ ಪ್ರೀತಿಯ ಮಗಳು ಇಂದಿರಾ ಮದುವೆಯನ್ನು 124 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮವಾಗಿ ಪರಿವರ್ತಿಸುವ ವಿಶ್ವನಾಥರನ್ನು ಮೆಚ್ಚದೇ ಇರಲು ಸಾಧ್ಯವಿಲ್ಲ.

ಅಧಿಕಾರಸ್ಥ ಸಚಿವನೊಬ್ಬ ಆಡಂಬರ, ಹಣದ ಅಸಹ್ಯ ಪ್ರದರ್ಶನ ಮಾಡದೇ ತನ್ನ ಮನೆ ಮಕ್ಕಳ ಮದುವೆಯನ್ನು ಸರಳವಾಗಿ ಮಾಡಿ ಮುಗಿಸುವುದು ನಿಜಕ್ಕೂ ಚೆನ್ನ. ಅಷ್ಟೇ ಅಲ್ಲ, ಈ ಸಾಮೂಹಿಕ ಮದುವೆಯಲ್ಲಿ ವಿಶ್ವನಾಥರ ಕಾಂಗ್ರೆಸ್ ಪಾರ್ಟಿ ಜನ ಅನ್ನ-ಸಾರು ಮಾಡಿಸಿದರೆ, ಜನತಾದಳ ಪಾರ್ಟಿ ಜನ ಲಾಡು, ರೈತ ಸಂಘದವರು ಮೊಸರು-ಮಜ್ಜಿಗೆ ಒದಗಿಸಿ ಪಕ್ಷಾತೀತ ಮದುವೆ ಸಮಾರಂಭವಾಗಿ ನಡೆಸಿಕೊಡುತ್ತಾರೆ. ಸಿಟ್ಟು-ಸೇಡು ಮೀರಿ ನಿಲ್ಲಬೇಕಾದ ಇಂಥ ಹೃದಯಸ್ಪರ್ಶಿ ಸಂದರ್ಭ ಸೃಷ್ಟಿಸುವ ವಿಶ್ವನಾಥ್ ನಿಜಕ್ಕೂ ಅಭಿನಂದನಾರ್ಹರು.

ಸರ್ಕಾರ ಅಂದರೆ ಸಿರಿಗೆರೆ ಮಠ ಅಲ್ಲ

ಪ್ರಬಲ ಜಾತಿಗಳ ಮಠಾಧೀಶರುಗಳಿಗೆ ಸರ್ಕಾರ ಅಂದರೆ ಎಷ್ಟು ಸದರ, ಮಂತ್ರಿಗಳ ಬಗ್ಗೆ ಎಷ್ಟು ತಾತ್ಸಾರ ಭಾವನೆ ಇರುತ್ತದೆ ಎನ್ನಲು ಈ ಪುಸ್ತಕದಲ್ಲೊಂದು ಘಟನೆ ವಿವರಿಸುತ್ತಾರೆ ವಿಶ್ವನಾಥ್.

ಅವರು ಶಿಕ್ಷಣ ಮಂತ್ರಿಯಾಗಿದ್ದಾಗ ಸರ್ಕಾರಿ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ವಾರ್ಷಿಕ 800 ಕೋಟಿಯಷ್ಟು ಹಣವನ್ನು ಸದುಪಯೋಗ ಮಾಡಿಕೊಳ್ಳುತ್ತಿಲ್ಲ ಎಂಬುದನ್ನು ಪತ್ತೆಹಚ್ಚಿದ ವಿಶ್ವನಾಥ್ ಅದನ್ನು ಸರಿಪಡಿಸಲು ಸರ್ವೀಸ್ ರೂಲ್ಸ್‌ಗೆ ತಿದ್ದುಪಡಿ ತರುವ ಪ್ರಯತ್ನ ಆರಂಭಿಸುತ್ತಾರೆ. ಸಹಜವಾಗೇ ಸರ್ಕಾರಿ ಹಣ ತಿಂದು ಕೊಬ್ಬಿದ್ದ ಮಠಾಧೀಶರಿಗೆ ಇದರಿಂದ ಕೋಪ ಬರುತ್ತದೆ. ಗಲಾಟೆಗಳೂ ಆಗುತ್ತವೆ.



ಆಗೊಮ್ಮೆ ಸಚಿವ ವಿಶ್ವನಾಥರಿಗೆ ಫೋನ್ ಮಾಡುವ ಸಿರಿಗೆರೆ ಮಠಾಧೀಶರು ಈ ಧಾಟಿಯಲ್ಲಿ ಮಾತಾಡಿದರಂತೆ:

"ನೀನೇನಾ ವಿದ್ಯಾಮಂತ್ರಿ, ವಿಶ್ವನಾಥ. ನೀನು ಕೆಲವು ಉದ್ದೇಶಿಸಿರುವ ತಿದ್ದುಪಡಿ ಅಷ್ಟು ಸುಲಭಾ ಅಲ್ಲ, ನೀನು ನಿನ್ನ ಫೈಲ್ ಸಮೇತ ನಮ್ಮ ಆರ್.ಟಿ. ನಗರದ ಮಠಕ್ಕೆ ಬಾ, ನಿನಗೆ ಈ ಬಗ್ಗೆ ತಿಳಿವಳಿಕೆ ಕೊಡುತ್ತೇನೆ."


ಆದರೆ ವಿಶ್ವನಾಥ್ ನಿಜಕ್ಕೂ ಗಟ್ಟಿಗ, 'ನಾನು ಸರ್ಕಾರದ ಮಂತ್ರಿಯಾಗಿ ಮಠಕ್ಕೆ ಬರಲ್ಲ, ಫೈಲೂ ತರಲ್ಲ" ಎಂದು ತಿರುಗೇಟು ಹೊಡೆಯುತ್ತಾರೆ. ಕೊನೆಗೆ ಸರ್ಕಾರ ಹಾಗೂ ಖಾಸಗಿ ಮತ್ತು ಮಠಾಧೀಶರ ಶಿಕ್ಷಣ ಸಂಸ್ಥೆಗಳ ನಡುವೆ ಒಂದು ಸಂಧಾನ ಸಭೆ ನಡೆದಾಗ "ಸರ್ಕಾರ ಸಿರಿಗೆರೆ ಮಠವೂ ಅಲ್ಲ, ಸಿರಿಗೆರೆ ಮಠ ಸರ್ಕಾರವಲ್ಲ" ಎಂದು ಝಾಡಿಸುತ್ತಾರೆ.

ಇದು ನಿಜಕ್ಕೂ ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿಹಿಡಿದ ಪ್ರಸಂಗ.

ಒಡೆಯರ್ ಮೂತ್ರ ಪ್ರಸಂಗ

ಗಣ್ಯ ವ್ಯಕ್ತಿಗಳೆನಿಸಿಕೊಂಡವರೂ ಕೂಡಾ ಸಾಮಾನ್ಯರಂತೆ ಕೆಲವೊಮ್ಮೆ ಫಜೀತಿಗೀಡಾಗುವ ಪ್ರಸಂಗ ಬರುತ್ತಲ್ಲಾ, ಅಂತದ್ದೊಂದು ಘಟನೆ ಇದು.

ಮೈಸೂರರಸ **His Highness** ಶ್ರೀಕಂಠದತ್ತ



ನರಸಿಂಹರಾಜ ಒಡೆಯರ್ ಓಟು ಕೇಳಲು ಹೋಗಿ ಜನರ ಕಾಟಕ್ಕೆ ಸಿಕ್ಕಿಬಿದ್ದ ಪ್ರಸಂಗ ಇದು.

ಆಗೊಮ್ಮೆ ಮೈಸೂರಿನಿಂದ ಲೋಕಸಭಾ ಎಲೆಕ್ಷನ್‌ಗೆ ಸ್ಪರ್ಧಿಸಿದ್ದ ಒಡೆಯರ್ ವಿಧಿಯಿಲ್ಲದೆ, ಅರಮನೆಯಿಂದ ಹೊರಬಂದು ಹಳ್ಳಿಹಳ್ಳಿ ತಿರುಗುತ್ತಾ ಜನರ ಹತ್ತಿರ ಓಟು ಕೇಳಲು ಹೊರಡುತ್ತಾರೆ. ಹಾಗೇ ಓಡಾಡುತ್ತಾ ವಿಶ್ವನಾಥರ ಕೆ.ಆರ್. ನಗರ ಕ್ಷೇತ್ರಕ್ಕೂ ಬರುತ್ತಾರೆ. ಅಲ್ಲಿನ ಜನಕ್ಕೋ ಒಡೆಯರ್ ನೋಡಿ ಬೆರಗೋ ಬೆರಗು ಸಾಕ್ಷಾತ್ ದೊರೆ ಬಂದಿದ್ದಾನೆ ಅಂದರೆ ಹುಡುಗಾಟದ ಮಾತೆ. ಕೆಲವು ಮುಗ್ಧರಂತೂ ಯಾರನ್ನು ಕೇರ್ ಮಾಡದೆ ಮುಂದಕ್ಕೆ ನುಗ್ಗಿ ಬಂದು ಒಡೆಯರ್‌ರನ್ನು ಮುಟ್ಟಿ ತಟ್ಟಿ ಅವರೆದುರಿಗೇ "ಬುದ್ಧೋರ್ಗೂ ನಮ್ಮಂಗೇ ಚರ್ಮ ಅದೇ ಕಣ್ಲಾ" ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಅವರ ಪ್ರಕಾರ ದೊರೆ ಅಂದರೆ ಬಿಲ್‌ಕುಲ್ ಸಾಮಾನ್ಯ ಜನರಂತೆ ಇರಕೂಡದು. ಯಾಕೆಂದರೆ ರಾಜ ದೈವಾಂಶ ಸಂಭೂತ ಅನ್ನೋ ಸುಳ್ಳನ್ನು ನಾವು ಮೊದಲಿಂದಲೂ ಕೇಳಿಕೊಂಡೇ ಬೆಳೆದವರಲ್ವೆ?

ಆದರೆ ಅಷ್ಟರಲ್ಲಿ ದೊರೆಮಗ ಒಡೆಯರ್‌ಗೆ ಸಾಮಾನ್ಯ ಮನುಷ್ಯನ ಒತ್ತಡವೊಂದು ಕಿಬ್ಬೊಟ್ಟೆಯಲ್ಲಿ ಶುರುವಾಗುತ್ತೆ.

ಮೂತ್ರ ವಿಸರ್ಜನೆಯ ಕರೆ ಅದು. ಹಾಗಂತ ದೊರೆಗಳಾದವರು ಬೇಲಿ ಮರೆಯಲ್ಲೋ, ಹತ್ತು ಜನರ ಸಮ್ಮುಖದಲ್ಲೋ ಪ್ಯಾಂಟ್ ಬಿಚ್ಚಿ ನಿಲ್ಲಲಾಗುತ್ತದೆಯೇ?

ಸರಿ ಎಂದು ಒಡೆಯರ್ ತಮ್ಮ ಎಂದಿನ ಗಾಂಭೀರ್ಯದಿಂದಲೇ ವಿಶ್ವನಾಥರನ್ನು ಕರೆದು ಮೂತ್ರ ವಿಸರ್ಜನೆಯ ಅಗತ್ಯದ ಬಗ್ಗೆ ಸೂಚನೆ ಕೊಡುತ್ತಾರೆ. ವಿಶ್ವನಾಥ್ ತಕ್ಷಣ ವಿಚಾರಿಸಿ ನೋಡಿದರೆ ಅವರಿದ್ದ ನಾರಾಯಣಪುರ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತರ ಮನೆಗಳಲ್ಲಿ ನೆಟ್ಟಗಿರುವ ಒಂದೇ ಒಂದು ಶೌಚಾಲಯ ಇರಲ್ಲ. ಒಂದೋ ತೆಂಗಿನ ಗರಿ ಕಟ್ಟಿದವು, ಅಥವಾ ನಿಂತರೆ ತಲೆ ಕಾಣಿಸುವಂತವು. ಹೀಗೆ....

ಕೊನೆಗೆ ವಿರೋಧ ಪಕ್ಷ ಜನತಾದಳದ ಮುದ್ದೇಗೌಡರ ಮನೆಯಲ್ಲಿ ಯುವರಾಜರ ಘನತೆಗೆ ಧಕ್ಕೆ ಆಗದಂತೆ ಮೂತ್ರ ವಿಸರ್ಜಿಸಬಹುದಾದಂತಹ ತಕ್ಕ ಲೆವೆಲ್‌ನ ಶೌಚಾಲಯವಿದೆ ಎಂಬುದನ್ನು ಪತ್ತೆ ಹಚ್ಚುತ್ತಾರೆ. ಹಾಗಂತ ಒಡೆಯರ್‌ರನ್ನು ಕರೆದುಕೊಂಡು ಅರ್ಜೆಂಟಾಗಿ ಅಲ್ಲಿಗೆ ಹೋದರೆ ಆತ ಓಟು ಕೇಳಲು ಬಂದಿರಬಹುದಂತ ಭಾವಿಸಿ ಮನೆ ಬಾಗಿಲಲ್ಲೇ ಒಡೆಯರನ್ನು ತಡೆದ ಹೆಣ್ಣುಮಕ್ಕಳು ಆರತಿ ಎತ್ತುವ ಶಾಸ್ತ್ರ ಶುರು ಮಾಡುತ್ತಾರೆ. ಆತಿಥೇಯ ಮುದ್ದೇಗೌಡ ಆನಂದ ತುಂದಿಲನಾಗಿ "ನಮ್ಮನೇಗ್ ದೊರೆ ಬಂದ್ರು, ಮೊದ್ಲೆ ಹೇಳಿದ್ರೆ ಸೀ ಅಡುಗೆ ಮಾಡುಸ್ತಿದ್ದೆ ಕಣಣ್ಣಾ" ಅಂತ ಪೇಚಾಡಿಕೊಳ್ಳುತ್ತಿದ್ದಾನೆ. ಮನೆ ಸುತ್ತಾ ಜನವೂ ಸೇರಿಬಿಟ್ಟಿದ್ದಾರೆ.

ಅತ್ತ ಒಡೆಯರ್ ಸಹನೆ ಹಾರಿಹೋಗುತ್ತಿದೆ. ಹಳ್ಳಿಜನ ಮಾತ್ರ ಒಡೆಯರ್‌ಗೆ ಗೌರವ ತೋರಿಸುವ ಚಟ ತೀರಿಸಿಕೊಂಡೇ ಮೂತ್ರಾಲಯದತ್ತ ಬಿಟ್ಟಿರುತ್ತಾರೆ. ಅದಕ್ಕೆ ಇರಬೇಕು ಇಂಥ ಫಜೀತಿಗಳು ಬೇಡಾ ಅಂತಲೋ ಏನೋ ಬಹಳ ದೊಡ್ಡ ದೊಡ್ಡ ನಾಯಕರುಗಳು ಒಂದೋ ಹಳ್ಳಿಗಳಿಗೆ ಹೋಗುವುದೇ ಇಲ್ಲ ಅಥವಾ ಹೋಗಲೇಬೇಕಾಗಿ ಬಂದರೆ ಸುಸಜ್ಜಿತ ಬಸ್‌ಗೆ ಆ ರಥ ಈ ರಥ ಅಂತ ಹೆಸರಿಟ್ಟುಕೊಂಡು ಬಸ್ ನೊಳಗೇ ಎಲ್ಲಾ ವ್ಯವಸ್ಥೆ ಮಾಡಿಕೊಂಡಿರುತ್ತಾರೆ ಅನ್ನಿಸುತ್ತದೆ. ■


ವಿಶ್ವನಾಥ್ ಹೇಳದೇ ಬಿಟ್ಟಿದ್ದು....

ಯಾರೇ ಆಗಲಿ ತಮ್ಮ ಜೀವನದ ಕತೆ ಬರೆದುಕೊಳ್ಳಲು ಸ್ವಲ್ಪ ಧೈರ್ಯ ತಂದುಕೊಳ್ಳಬೇಕು. ಮುಖ್ಯವಾಗಿ ದೊದಲು ಸಂಕೋಚ ಬಿಡಬೇಕು.

ವಿಶ್ವನಾಥರ ಆತ್ಮಕತೆ, 'ಹಳ್ಳಿ ಹಕ್ಕಿಯ ಹಾಡಿ'ನಲ್ಲಿ ಅವೆರಡರ ಕೊರತೆ ಎದ್ದು ಕಾಣುತ್ತದೆ. ಅವರು ಹೇಳಿಕೊಳ್ಳದೇ ಉಳಿಸಿರುವ ಆದರೆ ಅವರ ಅನೇಕ ಗೆಳೆಯರು ಬಲ್ಲ ವಿದ್ಯಮಾನಗಳಿವು.

ಈ ವಿಶ್ವನಾಥ್ ಎಷ್ಟೇ ಪ್ರಗತಿಪರ ಅಂದುಕೊಂಡರೂ, ಹಿಂದುಳಿದವರ ನಾಯಕ ಅಂತ ಬಿಂಬಿಸಿಕೊಂಡಿದ್ದರೂ ಈಗಲೂ ಬ್ರಾಹ್ಮಣ ಮಠಾಧೀಶ ಪೇಜಾವರ ಅಜ್ಞಾಧಾರಕರೇ.

ಉಡುಪಿಯ ಬ್ರಾಹ್ಮಣ ಮಠಾಧೀಶರು ಪುರಾತನವಾದ ಕನಕಗೋಪುರ ಕೆಡವಿದಾಗ ಅದಕ್ಕೆ ವಿಶ್ವನಾಥ್



ನೀಡಿದ ತಣ್ಣನೆಯ ಪ್ರತಿಕ್ರಿಯೆಯೇ ಇದಕ್ಕೆ ಸಾಕ್ಷಿ. ಗೋಪುರ ಕೆಡವಿದ ಮಠಾಧೀಶರ ವಿರುದ್ಧ ಇಡೀ ಕುರುಬ ಸಮಾಜ ರಪರಪ ಕುದಿಯುತ್ತಾ ತಿರುಗಿಬಿದ್ದಾಗ ವಿಶ್ವನಾಥ್ ಮೊದಲು ಅದಕ್ಕೆ ದನಿಗೂಡಿಸಿದರಾದರೂ ಆಮೇಲೆ ಮೆತ್ತಗಾಗಿಬಿಟ್ಟರು.

ಅದು ಶುಭದಾ ಎಂಬ ಶಿಕ್ಷಣ ತಜ್ಞೆಯ ಪ್ರಭಾವದಿಂದ ಆದದ್ದು. ಬ್ರಾಹ್ಮಣರಾದ ಈ ಶುಭದಾ ಪೇಜಾವರರ ಶಿಷ್ಯೆಯೂ ಹೌದು. ಅದೇ ವೇಳೆಗೆ ಶಿಕ್ಷಣ ಮಂತ್ರಿಯಾಗಿದ್ದ ವಿಶ್ವನಾಥರ ಆಪ್ತವಲಯದಲ್ಲೂ ಇದ್ದರು. ಸರ್ಕಾರದ ಶಿಕ್ಷಣ ನೀತಿಗಳು, ಮಕ್ಕಳ ಅಗತ್ಯಗಳು, ಸಮಸ್ಯೆಗಳ ಬಗ್ಗೆ ಬಹಳಷ್ಟು ಅರಿತಿದ್ದ ಶುಭದಾ ಕನಕಗೋಪುರ ಗಲಾಟೆಗಳಾದಾಗ ವಿಶ್ವನಾಥರು ಪೇಜಾವರರ ವಿರುದ್ಧ ನಿಲ್ಲದಂತೆ ಬ್ರೇಕ್ ಹಾಕಿಬಿಟ್ಟರು.

ಶೂದ್ರ ವಿಶ್ವನಾಥ್ ಮಹಿಳೆಯರ ಸಲಹೆ, ಸೂಚನೆಗಳನ್ನು ಮೀರಿ ನಡೆಯುವ ಪೈಕಿ ಅಲ್ಲಾ ಎಂಬುದು ಬ್ರಾಹ್ಮಣ ಪೇಜಾವರ ಸ್ವಾಮಿಗೆ ಚೆನ್ನಾಗಿ ಗೊತ್ತಿತ್ತಾದ್ದರಿಂದ ಕನಕಗೋಪುರ ವಿವಾದದಿಂದ ವಿಶ್ವನಾಥ್ ದೂರವೇ ಉಳಿಯುವಂತಾಯಿತು.

ಗಂಗಾವತಿ

ಅನ್ಸಾರಿ: ಜಿಲ್ಲೆ ಮೇಲೆ ಆಸೆ, ಗಂಗಾವತಿ ಮೇಲೆ ಪ್ರೀತಿ!


ಅಭಿವೃದ್ಧಿಗೂ ರಾಜಕೀಯಕ್ಕೂ ಆಗಿಬರುವುದಿಲ್ಲ ಎನ್ನಲು ಗಂಗಾವತಿ ಕ್ಷೇತ್ರದ ಉದಾಹರಣೆಯೊಂದೇ ಸಾಕು. ಕಳೆದ 20 ವರ್ಷಗಳಿಂದ ಇಡೀ ಗಂಗಾವತಿ ನಗರವೇ ಒಂದು ದೊಡ್ಡ ಸ್ಲಂನಂತಿತ್ತು. ಕೊಪ್ಪಳದ ಸಂಸದರು ಇಲ್ಲಿಯವರೇ ಆಗಿದ್ದರೂ, ಇಪ್ಪತ್ತು ವರ್ಷಗಳ ಕಾಲ ಶ್ರೀರಂಗದೇವರಾಯಲು ಶಾಸಕರಾಗಿ ಆಳಿದ್ದರೂ ಇಲ್ಲಿ ಕನಿಷ್ಠ ಮಟ್ಟದ ಮೂಲಭೂತ ಸೌಕರ್ಯ ಕೂಡ ಕಲ್ಪಿಸಲಿಲ್ಲ.

'ಹಾಗಂತ ಇಕ್ಬಾಲ್ ಅನ್ಸಾರಿಯೇನು ಗಂಗಾವತಿಯನ್ನು ಸಿಂಗಾಪುರ ಮಾಡಿದ್ದಾರಾ?' ಅಂತ ಕೇಳಬೇಡಿ. ಆದರೆ ಶ್ರೀರಂಗದೇವರಾಯಲು ಕಾಲದಲ್ಲಿ ಮಂಗಾಪುರವಾಗಿದ್ದ ಗಂಗಾವತಿ ಈಗ ಇದ್ದುದರಲ್ಲಿಯೇ ನೀಟಾಗಿದೆ. ದನದ ದೊಡ್ಡಿಯಂತಹ ಬಸ್ ನಿಲ್ದಾಣ ತೆಗೆದು, ಹೊಸ ಮಾದರಿಯ ಬಸ್ ನಿಲ್ದಾಣ ನಿರ್ಮಿಸಿದ್ದು ಅನ್ಸಾರಿಯ ಒಂದು ಹೆಗ್ಗಳಿಕೆ. ಅದಲ್ಲದೆ, ನಗರದ 31 ವಾರ್ಡ್‌ಗಳಲ್ಲಿ ಕಳಪೆ ಜೊತೆ ತಕ್ಕಮಟ್ಟಿಗೆ ಉತ್ತಮ ಎನ್ನುವಂತಹ ಸಿಮೆಂಟ್ ರಸ್ತೆಗಳ ನಿರ್ಮಾಣ, ಪ್ರತಿ ಕಂಬಕ್ಕೊಂದು ಬೀದಿ ದೀಪ.... ಹೀಗೆ ಎರಡು ದಶಕಗಳಿಂದ ಕಾಂಗ್ರೆಸ್‌ನವರು ಏನು ಮಾಡುತ್ತೀವಿ ಅಂತ ಓಟು ಹೊಡೆಯುತ್ತಿದ್ದರೋ ಅದೆಲ್ಲವನ್ನೂ ಅನ್ಸಾರಿ ಮಾಡಿದ್ದಾರೆ.

ಅವರ ಈ ಕೆಲಸಗಳನ್ನು ಮರೆಮಾಚಲೆಂದೇ ಕಡ್ಡಿಯಂತಿದ್ದ ಅಯ್ಯಪ್ಪ ದೇವಸ್ಥಾನ ನಿರ್ಮಾಣ ವಿವಾದವನ್ನು ಗುಡ್ಡ ಮಾಡಿ, ಅದನ್ನು ಅನ್ಸಾರಿ ತಲೆಗೆ ಕಟ್ಟಿದ್ದು ಬಿಜೆಪಿಯವರು, ಮತ್ತು ಮೊನ್ನೆವರೆಗೆ ಕಾಂಗ್ರೆಸ್‌ನಲ್ಲಿದ್ದು ಈಗ ಬಿಜೆಪಿ ಸೇರಿರುವ ಲಲಿತಾರಾಣಿ ಮತ್ತು ಎಚ್.ಆರ್. ಶ್ರೀನಾಥ ಪರಣ್ಣ ಮುನವಳ್ಳಿ!

ತನ್ನ ರಾಜಕೀಯ ಬದುಕನ್ನು ಕಾಂಗ್ರೆಸ್‌ನಿಂದಲೇ ಆರಂಭಿಸಿ ಇಪ್ಪತ್ತು ವರ್ಷಗಳನ್ನು ಕಳೆದರೂ ಏನೊಂದು ಮಹತ್ವದ ಹುದ್ದೆ ಕೊಡದೇ ಪ್ರತಿ ಚುನಾವಣೆ ಖರ್ಚು-ವೆಚ್ಚ ನಿಭಾಯಿಸುತ್ತಾ ಕತ್ತೆ ದುಡಿದಂತೆ ದುಡಿಯುವುದೊಂದೇ ಆಯಿತಲ್ಲ ತನ್ನ ಬದುಕು ಅಂತ ಕೊನೆಗೆ ಆ ಪಕ್ಷದಿಂದ ಹೊರಬಂದು ಇಕ್ಬಾಲ್ ಅನ್ಸಾರಿ ಜೆಡಿಎಸ್ ಸೇರಿದ ದಿನವೇ ಗಂಗಾವತಿಯ ಫಲಿತಾಂಶ ನಿಚ್ಚಳವಾಗಿತ್ತು. ಅಲ್ಲಿಯತನಕ ಕಾಂಗ್ರೆಸ್‌ನ ಭದ್ರಕೋಟೆ ಎಂತಿದ್ದ ಗಂಗಾವತಿ ಅನ್ಸಾರಿಯಿಂದಾಗಿ ಜೆಡಿಎಸ್ ಕೈವಶವಾಗುತ್ತದೆ ಎಂಬುದು ಸ್ಪಷ್ಟವಾಗಿತ್ತು.

ಗೆದ್ದ ಅನ್ಸಾರಿಯ ಅದೃಷ್ಟವೋ ಏನೋ, ಕಾಂಗ್ರೆ-ಜೆಡಿಎಸ್ ಸಮ್ಮಿಶ್ರ ಸರ್ಕಾರ ರಚನೆಯಾಗಿ ಅನ್ಸಾರಿ ವೈದ್ಯಕೀಯ ಮಂತ್ರಿಯೂ ಆಗಿಬಿಟ್ಟ. ಆಗಲೇ ರಾಮುಲು ಬಿಟ್ಟು ಉಳಿದೆಲ್ಲ ಕಾಂಗ್ರೆಸ್ಸಿಗರ ಸರಮಂಡಲಕ್ಕೆ ಬೆಂಕಿ ಹತ್ತಿದ್ದು. ಅಷ್ಟೇ ಅಲ್ಲದೆ, ಅನ್ಸಾರಿ ಒಬ್ಬ ಮುಸ್ಲಿಂ ಎಂಬ ಕಾರಣಕ್ಕೆ ಬಿಜೆಪಿ ಕೂಡ ಆತನನ್ನು ಬಗ್ಗುಬಡಿಯಲು ತಂತ್ರ ಹೆಣೆಯತೊಡಗಿತು.



ಕೊಪ್ಪಳ ಜಿಲ್ಲಾ ಮಂತ್ರಿಗಳಾಗಿ ಮೆರೆದ ಸಾಲೋಣಿ ನಾಗಪ್ಪ ನೀರಾವರಿ ಕಾಮಗಾರಿಗಳಲ್ಲಿ ಅವ್ಯವಹಾರ ಮಾಡಿದರೆ, ನಂತರದ ಮಂತ್ರಿ ಮಲ್ಲಿಕಾರ್ಜುನ ನಾಗಪ್ಪ ಕೂಲಿಗಾಗಿ ಕಾಳು ಯೋಜನೆಯ ಅಕ್ಕಿಯನ್ನು ರೈಸ್ ಮಿಲ್‌ಗಳಲ್ಲಿ ಪಾಲಿಷ್ ಮಾಡಿಸಿ ಕಾಳಪ್ಪನ ಮೂಲಕ ವಿದೇಶಕ್ಕೂ ಮಾರಿ ಹಗರಣ ಸೃಷ್ಟಿಸಿಕೊಂಡು ಸೋತು ಸುಣ್ಣವಾಗಿ ಬಿಟ್ಟ. ಆಗರ್ಭ ಶ್ರೀಮಂತಿಕೆ ಇರುವ ಅನ್ಸಾರಿ ಈವರೆಗೆ ಯಾವುದೇ ಯೋಜನೆಗಳಲ್ಲಿ ಹಗರಣ ಮಾಡಿದ ಸುಳಿವು ಇಲ್ಲ.

ಜಿಲ್ಲಾ ಮಂತ್ರಿಯಾದರೂ ಸ್ವಂತ ಕ್ಷೇತ್ರ ಗಂಗಾವತಿಗೆ ಕೋಟಿಗಟ್ಟಲೆ ಅನುದಾನ ತಂದು ಬಸ್ ನಿಲ್ದಾಣ, ತಾಲೂಕು ಕಚೇರಿ, ಸರ್ಕ್ಯೂಟ್ ಹೌಸ್, ಸ್ಟೇಡಿಯಂ ನಿರ್ಮಾಣದ ಕೆಲಸಗಳಲ್ಲದೆ, ಎಪಿಎಂಸಿಯ ಜಾಗೆಯನ್ನೂ ಅಭಿವೃದ್ಧಿ ಪಡಿಸಲು ಅನ್ಸಾರಿ ಹೊರಟಾಗ, ಈ ಎಲ್ಲ ಕೆಲಸಗಳು ಕಾರ್ಯಗತವಾದರೆ ಆತ ಮಾಡಿಸಿರುವ ಅಭಿವೃದ್ಧಿ ಕೆಲಸಗಳು ಜನರ ಕಣ್ಣಿಗೆ ಎದ್ದು ಕಾಣುತ್ತದೆ ಅಂತ ರಗಳೆ ತೆಗೆದದ್ದು ಇದೇ ಕಾಂಗ್ರೆಸ್ಸಿಗರು.

ಹಳೆಯ ಬಸ್ ನಿಲ್ದಾಣವಿದ್ದ ಜಾಗದಲ್ಲಿ ಈಗ ಸುಸಜ್ಜಿತವಾದ ಮತ್ತು ವಿಶಾಲವಾದ ಹೊಸ ಬಸ್ ನಿಲ್ದಾಣದ ತಲೆ ಎತ್ತಿದೆ. ಕ್ರೀಡಾಂಗಣದ ಕೆಲಸಕ್ಕೆ ಚಾಲನೆ ನೀಡಲಾಗಿದೆ. ಅಪಘಾತಗಳು ಸಂಭವಿಸಿದಾಗ ರಕ್ತಸಿಗದೆ ಹಲವಾರು ಜನ ಪ್ರಾಣ ಕಳೆದುಕೊಳ್ಳುವುದು ಇಲ್ಲಿ ಸಾಮಾನ್ಯವಾಗಿರುವುದರಿಂದ ಈಗ ಗಂಗಾವತಿಯಲ್ಲೊಂದು ರಕ್ತಭಂಡಾರ ಕಾರ್ಯಾರಂಭ ಮಾಡಿದೆ. ಬಂಡಿಹರ್ಲಾಪುರಕ್ಕೆ ಒಂದು ಪಿ.ಯು. ಕಾಲೇಜ್ ಬಂದಿದೆ. ಗಂಗಾವತಿ ನಗರದಲ್ಲಿ ಸಾಹಿತ್ಯ ಭವನಕ್ಕಾಗಿ 60 ಲಕ್ಷ ಅನುದಾನ ಸಿಕ್ಕಿದೆ.

ಆದರೆ ಗಂಗಾವತಿಗೆ ಅಂತ ಇದ್ದ ಇಂಜಿನಿಯರಿಂಗ್ ಕಾಲೇಜನ್ನು ಕೊಪ್ಪಳಕ್ಕೆ ಹಾಕಿಸಿದರೆ, ಅದನ್ನು ನಾನೇ ಮಾಡಿಸಿದ್ದು ಅಂತ ಅರೆಬರೆ ಚಡ್ಡಿ ಸಂಗಣ್ಣ ಕರಡಿ ಹೇಳಿಕೊಂಡು ತಿರುಗುತ್ತಿದ್ದಾನೆ.

ಗ್ರಾಮೀಣ ಭಾಗದಲ್ಲಿ ಕೆಲವೆಡೆ ಕುಡಿಯುವ ನೀರಿನ ಸಮಸ್ಯೆ ಹಾಗೆ ಉಳಿದಿದೆ. ಸುವರ್ಣ ಗ್ರಾಮ ಯೋಜನೆಯಲ್ಲಿ ಕೆಲವು ಸೆಕ್ರೆಟರಿಗಳ ಕಿತಾಪತಿಯಿಂದ ಕಳಪೆ ಕಾಮಗಾರಿ ನಡೆದಿರುವುದೂ ಉಂಟು. ಗ್ರಾಮೀಣ ಬಸ್ ನಿಲ್ದಾಣಗಳ ನಿರ್ಮಾಣವಾಗಬೇಕಿತ್ತು. ಆದರೂ 20 ವರ್ಷ ಗಂಗಾವತಿ ಆಳಿದ ಶ್ರೀರಂಗದೇವರಾಯರಿಗೆ ಹೋಲಿಸಿದರೆ ಅನ್ಸಾರಿಯ ಕೆಲಸ ಉತ್ತಮ ಎನ್ನುವಂತಿದೆ.



ಆದರೆ ಗಂಗಾವತಿ ವಿಷಯದಲ್ಲಿ ತೋರಿದ ಕಾಳಜಿ ಅನ್ಸಾರಿ ಜಿಲ್ಲಾ ಕೇಂದ್ರ ಕೊಪ್ಪಳಕ್ಕೆ ತೋರಲಿಲ್ಲವೆಂದೇ ಹೇಳಬೇಕು. ಜಿಲ್ಲಾ ಕ್ರೀಡಾಂಗಣ ಕೆಲಸ ಆರಂಭಗೊಂಡಿದ್ದು ಬಿಟ್ಟರೆ, ನಗರದ ರಸ್ತೆ ಅಗಲೀಕರಣ ಆಗಲೇ ಇಲ್ಲ. ಎಸ್‌ಎಫ್‌ಎಸ್ ಶಾಲೆಯಿಂದ ಹಿರೇಹಳ್ಳ ಬ್ರಿಡ್ಜ್‌ವರೆಗಿನ ರಸ್ತೆ ಅಭಿವೃದ್ಧಿ ಹಾಗೂ ಗಟಾರ ನಿರ್ಮಾಣದ ಎರಡೂವರೆ ಕೋಟಿ ಹಣದಲ್ಲಿ ಅರ್ಧದಷ್ಟು ಹಣವನ್ನು ಮಧ್ಯವರ್ತಿಗಳು ಲಪಟಾಯಿಸಿದರೂ ಅದರ ಬಗ್ಗೆ ಅನ್ಸಾರಿ ಗಮನ ಕೊಡಲಿಲ್ಲ.

ಜಿಲ್ಲಾ ಆಸ್ಪತ್ರೆ ನಿರ್ಮಾಣಕ್ಕೆ ಇದ್ದ ತಡೆಯಾಜ್ಞೆಯನ್ನು ತೆರವುಗೊಳಿಸಿ ಆಸ್ಪತ್ರೆ ಕಟ್ಟಡ ನಿರ್ಮಾಣ ಕೆಲಸವನ್ನು ಆರಂಭಿಸಿಬಿಟ್ಟಿದ್ದರೆ ಜನ ಅನ್ಸಾರಿಯನ್ನು ಸದಾಕಾಲ ನೆನೆಯುತ್ತಿದ್ದರು. ಅನ್ಸಾರಿಯವರು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದಾಗ ಜಿಲ್ಲಾ ಕೇಂದ್ರಕ್ಕೆ ಮೆಡಿಕಲ್ ಕಾಲೇಜ್ ತರುವ ಪ್ರಯತ್ನದಲ್ಲಿ ವಿಫಲರಾದರೆ, ಆನಂತರ ಕಾರ್ಮಿಕ ಮಂತ್ರಿಯಾಗಿದ್ದಾಗ ಜಾರಿಗೊಳಿಸಿದ ಕಟ್ಟಡ ಕಾರ್ಮಿಕರ ಯೋಜನೆಗಳು ಜಿಲ್ಲೆಯಲ್ಲಿ ಆಮೆಗತಿಯಲ್ಲಿ ನಡೆಯುತ್ತಿವೆ. ಇವುಗಳ ಬಗ್ಗೆಯೂ ಇನ್ನಷ್ಟು ಗಮನ ಹರಿಸಿದ್ದರೆ ಚೆನ್ನಾಗಿರುತ್ತಿತ್ತು.

ಮೊದಲಿನಿಂದ ಅಭಿವೃದ್ಧಿ ಕೆಲಸಕ್ಕೆ ಅಡ್ಡಿಪಡಿಸುತ್ತ ಬಂದಿರುವ ಕಾಂಗ್ರೆಸ್ ಮೊನ್ನೆಯ ನಗರಸಭೆ ಚುನಾವಣೆಯಲ್ಲಿ ಬರೀ ಎರಡು ಸ್ಥಾನ ಪಡೆದು ನಿತ್ರಾಣಗೊಂಡಿದೆ. ಕ್ಷೇತ್ರ ಪುನರ್ ವಿಂಗಡನೆ ಆಗಿ ಚುನಾವಣೆ ನಡೆದರೆ ಅನ್ಸಾರಿಯ ಕೈ ಹಿಡಿದಿದ್ದ ಹಿಟ್ನಾಳ್ ಸರ್ಕಲ್ ಕೊಪ್ಪಳಕ್ಕೆ ಬರಲಿದೆ. ಗಂಗಾವತಿಯಲ್ಲಿ ಕಾಂಗ್ರೆಸ್ ದಿಕ್ಕೆಟ್ಟು ಕೂತಿದ್ದರೆ, ಬಿಜೆಪಿ ಭಿನ್ನಮತದಿಂದ ಬಳಲುತ್ತಿದ್ದರೆ, ಜೆಡಿಎಸ್‌ಗೆ ಅನ್ಸಾರಿಯೇ ಗತಿ ಎಂತಿದ್ದಾರೆ.


ಇಂತಹ ಪರಿಸ್ಥಿತಿಯಲ್ಲಿ ಬರುವ ಚುನಾವಣೆಯಲ್ಲಿ ಅನ್ಸಾರಿಯ ಅಭಿವೃದ್ಧಿ ಕೆಲಸ ಮತ್ತು ಬಿಜೆಪಿಯ ಕೋಮುವಾದ ಮುಖಾಮುಖಿಯಾಗಲಿವೆ ಎಂಬುದು ಮಾತ್ರ ನಿಶ್ಚಿತ

-ವರದಿಗಾರ

ಬಂಡೆಪ್ಪ ಕಾಶಂಪುರನ ಭ್ರಷ್ಟ ಮುಖ ಬಟಾಬಯಲು

ಬೀದರ್

ನೆರೆಯ ಮಹಾರಾಷ್ಟ್ರದ ಗಡಿಯ ಅಂಚಿನಲ್ಲಿರುವ ಬೀದರ ನಮ್ಮ ರಾಜ್ಯದ ತುತ್ತತುದಿಗೆ ಇರುವ ಪ್ರದೇಶ. ಐತಿಹಾಸಿಕ ಹಾಗೂ ಚಾರಿತ್ರಿಕ ದಾಖಲೆಗಳಿಂದಲೂ ಈ ಜಿಲ್ಲೆಯನ್ನು ವಿಶೇಷವಾಗಿ ಗಮನಿಸಲಾಗುತ್ತದೆ. ಆದರೆ ಇಂದು ಇಲ್ಲಿರುವ ರಾಜಕೀಯ ನಾಯಕರ ಸ್ವಾರ್ಥ ಹಾಗೂ ಗೆಬರಿಕೊಂಡು ತಿನ್ನುವ ಚಟ ಇರುವುದರಿಂದ ಬೀದರ ಜಿಲ್ಲೆ ರಾಜ್ಯದಲ್ಲಿ ಅತಿ ಹಿಂದುಳಿದ ಪ್ರದೇಶಗಳಲ್ಲಿ ಅಗ್ರಸ್ಥಾನ ಪಡೆದುಕೊಳ್ಳುತ್ತದೆ. ಇಲ್ಲಿ ಸರಿಯಾದ ರಸ್ತೆಗಳು, ಒಳಚರಂಡಿ ವ್ಯವಸ್ಥೆ ಕುಡಿಯುವ ನೀರು ಮುಂತಾದ ಪ್ರಾಥಮಿಕ ಅಗತ್ಯಗಳೂ ಇಲ್ಲದ್ದರಿಂದ ಸಾಮಾನ್ಯ ಜನರ ಬದುಕು ದುರ್ಬರಗೊಂಡಿದೆ. ಸರಕಾರಿ ಕಚೇರಿಗಳಂತೂ ಅಕ್ಷರಶಃ ಕೊಂಡವಾಡೆಯಂತಾಗಿವೆ.



ಆದರೆ ಜನಸಾಮಾನ್ಯರ ಇಂಥ ದುರ್ಬರ ಬದುಕನ್ನೆ ಬಂಡವಾಳ ಮಾಡಿಕೊಂಡು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಅಥವಾ ತಮ್ಮ ಗುಡಾಣ ತುಂಬಿಕೊಳ್ಳಲು ಹೊರಟಿರುವವರ ಸಾಲಿನಲ್ಲಿ ಇಲ್ಲಿನ ಮಾಜಿ ಮಂತ್ರಿ ಬಂಡೆಪ್ಪ ಖಾಶಂಪುರ ಕೂಡ ಸೇರುತ್ತಿರುವುದು ಅತ್ಯಂತ ವಿಪರ್ಯಾಸದ ಸಂಗತಿಯಾಗಿದೆ. ಮಾಣಿಕಪ್ಪ ಕಾಶಂಪುರ ಎಂಬ ಸಭ್ಯ ಹಾಗೂ ಚರಿಶ್ಮಾ ಹೊಂದಿದ ವ್ಯಕ್ತಿಯ ಮಗನಾದ ಬಂಡೆಪ್ಪ ಕಾಶಂಪುರ ಇಂದು ತಂದೆಯ ವಿಚಾರಗಳಿಗೆ ಎಳ್ಳುನೀರುಬಿಟ್ಟು ಧನದಾಹಕ್ಕೆ ಬಲಿಯಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ.

ಮೂಲತಃ ಕಾಂಗ್ರೆ ಪಕ್ಷದ ನಿವಾಸಿಯಾಗಿದ್ದ ಕಾಶಂಪುರ ಅದೇಗೋ ಟಿಕೆಟ್ ಪಡಕೊಂಡು ಬಂದು ಸ್ಪರ್ಧಿಸಿದ್ದ. ಆದರೆ ಅದೃಷ್ಟ ಒಲಿಯದೆ ಸೋತು ಹೋದ. ಕೆಲವು ವರ್ಷಗಳ ಕಾಲ ರಾಜಕೀಯ ಅಜ್ಞಾತ ಅನುಭವಿಸಿದ. ಇದನ್ನು ಮನಗಂಡ ಎಸ್.ಎಂ.ಕೃಷ್ಣನ ಕೃಪೆಯಿಂದ ಎಂ.ಎಲ್.ಸಿ. ಯಾಗುವ ಹಂತಕ್ಕೂ ತಲುಪಿದ್ದ. ಆದರೆ ಅದ್ಯಾರದೋ ಅಡ್ಡಗಾಡು ಬಂತು. ಕೊನೆಗೆ ಹಿಂದುಳಿದ ವರ್ಗಗಳ ಅಧ್ಯಕ್ಷನಾಗಿ ಎರಡೂವರೆ ವರ್ಷ ಕೂಡಬೇಕಾಯಿತು.



ರಹೀಂಖಾನ್

ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಏಳಿಗೆ ಆಯ್ತೋ, ಇಲ್ಲವೋ ಗೊತ್ತಿಲ್ಲ. ಕಾಶಂಪುರನ ಅಭಿವೃದ್ಧಿಯಂತೂ ಚೆನ್ನಾಗಿಯೇ ಆಯ್ತು.


ಇದನ್ನೆಲ್ಲ ಸರಿಯಾಗಿ ಗ್ರಹಿಸದ ಮತದಾರರು ಮಾತ್ರ ಖಾಶಂಪುರನ ಬಗ್ಗೆ ಅನುಕಂಪ ಹೊಂದಿದ್ದರು. ಆದರೆ ಜಿಲ್ಲೆಯ ಇತರ ರಾಜಕೀಯ ಮುಖಂಡರು ಒಳಗೊಳಗೆ ಹಲ್ಲುಕಡಿಯ ತೊಡಗಿದರು. ಅವರ ನಿರೀಕ್ಷೆಯಂತೆ ತರುವಾಯದ ಚುನಾವಣೆಯಲ್ಲಿ ಮತ್ತೆ ಕಾಂಗ್ರೆನಿಂದ ಸ್ಪರ್ಧಿಸಬೇಕೆಂದು ಪ್ರಯತ್ನಿಸಿದರೂ ಅದು ಫಲಕಾರಿಯಾಗಲಿಲ್ಲ. ಇದರಿಂದ ಕಾಶಂಪುರ ಅನಿವಾರ್ಯವಾಗಿ ಪಕ್ಷೇತರ ಅಭ್ಯರ್ಥಿಯಾಗಿ ಗೆದ್ದು ಬಂದು, ಜೆಡಿಎಸ್ ಸೇರಿಕೊಂಡು ಮಂತ್ರಿಯೂ ಆದ. ಆದರೆ ಬಹುಸಿರೀ... ಹುಟ್ಟಿಸಿ ವಿಶಿಷ್ಟವಾದ ರಾಜಕಾರಣಿ ಎಂದು ತನ್ನ ಕೆಲ... ನಡವಳಿಕೆಗಳ ಮೂಲಕ ತೋರಿಸಿಕೊಂಡಿದ್ದ ಕಾಶಂಪುರ... ಮಂತ್ರಿಯಾಗುತ್ತಲೆ ಅದನ್ನೆಲ್ಲ ಹುಸಿಗೊಳಿಸಿಬಿಟ್ಟ.

ಈತನ ಸಹೋದರ ಮಹಾಶಯ... ಮಾರುತಿ ಕಾಶಂಪುರನ ಮೂಲಕ ನಡೆಸಿದ... ದರ್ಬಾರಂತೂ ಎಂಥವರನ್ನೂ ನಾಚಿಸು... ತ್ತದೆ. ಇಡೀ ಬೀದರ ಮತಕ್ಷೇತ್ರದ ಒಬ್ಬ... ಮೂರನೆ ದರ್ಜೆಯ ನೌಕರನ ವರ್ಗಾ... ವಣೆಯಾಗಬೇಕಿದ್ದರೂ ಅದು ಮಾರು... ತಿಯ ನಜರ್‌ಗೆ ಬರಲೇಬೇಕು. ಅ... ಅವನ ಕೈ ಬೆಚ್ಚಗೆ ಮಾಡಲೇಬೇಕು... ಅಂದಾಗಲೇ ನೀವು ಕೇಳಿದ್ದೆಲ್ಲ ಪಡ... ಕೊಳ್ಳಲು ಸಾಧ್ಯ ಎಂಬ ಸ್ಥಿತಿ... ನಿರ್ಮಾಣವಾದದ್ದು. ಸುಳ್ಳಲ್ಲ... ಗ್ರಾಮ ಪಂಚಾಯತಿಯ ಕಾರ್ಯ... ದರ್ಶಿಯಾಗಿದ್ದ ತುಳಸಿರಾಮ ಎಂಬ ನಮಕ್ ಹರಾಮ... ನನ್ನು ತನ್ನ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡು... ಇಡೀ ಬೀದರನ ಎಲ್ಲಾ ಸರಕಾರಿ ಕಚೇರಿಯ... ಹಫ್ತಾವಸೂಲಿಗೆ ಬಿಟ್ಟ. ಈ ತುಳಸಿರಾಮ... ನಾದರೋ ಈಗ ಇನೋವಾ ಕಾರ್ ಇಟ್ಟು... ಕೊಂಡು ಜುಮ್ ಅಂತ ತಿರುಗಾಡುವ... ಪರಿ ಎಲ್ಲರಿಗೂ ಆಶ್ಚರ್ಯ ಉಂಟುಮಾಡು... ತ್ತದೆ. ಅನೀಲ ಭೂಸಾರೆ ಎಂಬ ಇನ್ನೊಬ್ಬ... ಹಿಂಬಾಲಕನನ್ನು ಜಿಪಂ ಅಧ್ಯಕ್ಷನನ್ನಾಗಿ... ಆತನ ಮೂಲಕ ಜಿಲ್ಲಾ ಪಂಚಾಯತಿಯ... ಬಂಡೆಪ್ಪ ಕಾಶಂಪುರ ನಡೆಸಿದ ಬಾರಾಬಾ... ಗಡಿಗಳು ಲೆಕ್ಕಕ್ಕೆ ಸಿಗದಷ್ಟು. ಅಮೀನ... ಶೇಖ್ ಎಂಬ ಕೃಷಿ ಇಲಾಖೆಯ ಜಂಟಿ... ನಿರ್ದೇಶಕನ ಮೂಲಕ ರೈತರಿಗೆ ಸಬ್ಸಿಡಿ... ಯಲ್ಲಿ ಬಂಡಿ, ಎತ್ತು ಕೊಡುವ ನೆವ ಹೂಡಿ ಅತ್ಯಂ... ಕಳಪೆ ದರ್ಜೆಯ ಚಕ್ಕಡಿಗಳನ್ನು ಕೊಟ್ಟು, ರೈತರನ್ನು... ಸಾಲಗಾರನನ್ನಾಗಿ ಮಾಡಲಾಗಿದೆ. ಈ ಅಮೀನ್ ಶೇಖ್... ತಿಂದೋಡಿ ಬುದ್ಧಿಗೆ ಬೇಸತ್ತ ಜನ ಬೀದಿಗೆ ಬಂದು... ಹೋರಾಟಕ್ಕೆ ಅಣಿಯಾದಾಗ ಆತನಿಗೆ ಹಾರ್ಟ್ ಅಟ್ಯಾಕ್... ಆದಂತೆ ನಾಟಕ ಮಾಡಿಸಿ ಅವನನ್ನು ಬಚಾವ ಮಾಡಿದ... ಕೀರ್ತಿಗೂ ಕಾಶಂಪುರ ಪಕ್ಕಾಗಬೇಕಾಯ್ತು. ಜಿಲ್ಲೆಯ... ಉಸ್ತುವಾರಿ ಜವಾಬ್ದಾರಿಯನ್ನು ಸಮರ್ಥವಾಗಿ ಬಳ... ಕೊಂಡ ಮಂತ್ರಿ ಕಾಶಂಪುರ ಜಿಲ್ಲೆಯ ಎಲ್ಲಾ ಕಚೇರಿ... ಗಳಲ್ಲೂ ತನ್ನದೂ ಒಂದು ಪಾಲು ಫಿಕ್ಸ್ ಮಾಡಿದ್ದು... ಬಹಿರಂಗ ಸತ್ಯವಾಗಿತ್ತು. ಇದನ್ನು ಶಿಕ್ಷಣ ಇಲಾಖೆಯ... ಡಿಡಿಪಿಐ ದೇವಾನಂದನೆ ಬಹಿರಂಗವಾಗಿ ಹೇಳಬೇಕಾದ...

ಜಿಲ್ಲೆಯ ತುಂಬೆಲ್ಲ ಹರಿಯುತ್ತಿರುವ ಸಾರಾಯಿ ಹೊ...

ರಾಜ್ಯದ ತುತ್ತತುದಿಗಿರುವ ಹಾಗೂ ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಬೀದರ ಜಿಲ್ಲೆಯಲ್ಲಿದ್ದಷ್ಟು ಅನಾರ್ಕಿ, ಅರಾಜಕತೆ ಇನ್ನೆಲ್ಲೂ ಇರಲಿಕ್ಕಿಲ್ಲ. ಇತ್ತೀಚೆಗೆ ಬಂದ ಜಿಲ್ಲಾಧಿಕಾರಿ ಹರ್ಷಗುಪ್ತ ಎಂಬುವವರೊಬ್ಬರಿಂದ ಬೀದರಗೆ ಒಂದು 'ಚಾರ್ಮ್' ಇದೆಯೆ ಹೊರತು ಇಂದಿನ ರಾಜಕಾರಣಿಗಳಿಂದ ಅಥವಾ ಅವರು ಬೆಳೆಸಿಕೊಂಡು ಬಂದಿರುವ ಅಧಿಕಾರಶಾಹಿಯಿಂದ ಅಲ್ಲ.

ಮೇಲುನೋಟಕ್ಕೆ ಘಟಾನುಘಟಿ ನಾಯಕರಂತೆ ಕಂಗೊಳಿಸುವ ಗುರುಪಾದಪ್ಪ ನಾಗಮಾರಪಳ್ಳಿ, ಭೀಮಣ್ಣ ಖಂಡ್ರೆ, ಮಿರಾಜುದ್ದೀನ್ ಪಟೇಲ್ ಹಾಗೂ ಬಂಡೆಪ್ಪ ಕಾಶಂಪುರ, ಮುಂತಾದವರೆಲ್ಲ ಇಲ್ಲಿ ಕೇವಲ ತಾಲೂಕಿನ ರಾಜಕೀಯಕ್ಕೆ ಮಾತ್ರ ಸೀಮಿತ. ಆ ತಾಲೂಕಿನ ರಾಜಕೀಯವಾದರೂ ಕೇವಲ ಹಣ ಗಳಿಕೆಗೆ ಮಾತ್ರ. ಅಭಿವೃದ್ಧಿ ಎಂಬುದನ್ನು ದೀಪ ಹಚ್ಚಿ ಹುಡುಕಾಡಬೇಕಾದ ಸುಸ್ಥಿತಿಗೆ ಬೀದರನ್ನು ತಂದು ನಿಲ್ಲಿಸಿದ ಕೀರ್ತಿ... ಈ ಮುದಿ ರಾಜಕಾರಣಿಗಳಿಗೆ ಸಲ್ಲುತ್ತದೆ.




ಆಸಿಫ್ ಅಲಿ ಅನ್ಸಾರಿ

ರಾಜ್ಯದ ತುಂಬೆಲ್ಲ ಕೋ-ಜಾ ಸರಕಾರ ತ... ಪರಾಕ್ರಮ ಮೆರೆದು ಸಾರಾಯಿನಿಷೇಧ ಮಾಡಿದ್ದಾ... ಬೊಗಳೆ ಬಿಟ್ಟಿತ್ತು. ಆದರೆ ಈ ಆಜ್ಞೆ ಬೀದರ ಜಿಲ್ಲೆಯ... ಜಾರಿಗೆ ಬಂದಂತೆ ಕಾಣುತ್ತಿಲ್ಲವೆನಿಸುತ್ತದೆ. ಏಕೆಂದರೆ... ಬಸವಕಲ್ಯಾಣ, ಹುಮ್ನಾಬಾದ, ಭಾಲ್ಕಿ... ಬೀದರ ಹಾಗೂ ಔರಾದ ತಾಲೂಕಿನ... ಯಾವುದೇ ಹಳ್ಳಿಗೆ ಹೋಗಿ ನೋಡಿದರು... ಕುಡಿದು ತೂರಾಡುತ್ತ ನಿಮ್ಮ ಮೈ ಮೇಲೆಯೇ... ಬೀಳುವ ಆಸಾಮಿಗಳನ್ನು ಕಾಣಬಹುದು... ಇವರ ಮನೆಗಳಿಗೆ ಹೋದರಂತೂ ಅವ... ಹೆಂಡತಿ ಮಕ್ಕಳು ಉಪವಾಸ - ವನವಾಸ... ಅನುಭವಿಸುತ್ತಿರುವ ದೃಶ್ಯ ಸಾಮಾನ್ಯವಾಗಿ...

ವಾಸ್ತವವಾಗಿ ರಾಜ್ಯ ಸರಕಾರ ಸಾರಾಯಿ... ನಿಷೇಧ ಹೇರದಿರುವಾಗ ಕೆಲವೇ ಅಂಗ... ಗಳಲ್ಲಿ ಸಾರಾಯಿ ಸಿಗುತ್ತಿತ್ತು, ಈಗ ಸಾರಾಯಿ...

ಕಾಶಂಪುರನ ತಗಡುಬುದ್ಧಿ ಎಲ್ಲೆಲ್ಲಿಗೆ ಹಬ್ಬಿತ್ತು ನೀವೇ ನೋಡಿ. ಮುಷ್ಕರ ಲೋಕಾಯುಕ್ತರೇ ಬಂದು ಜೆ.ಸಿ.ಪುರಾತ ಎಂಬ ಭ್ರಷ್ಟನ ಅವ್ಯವಹಾರಗಳ ತನಿಖೆ ನಡೆಸಿ ಆತ ಆರೋಪಿ ಎಂದು ಸರ್ಟಿಫಿಕೇಟ್ ನೀಡಿದ್ದರೂ ಕಾಶಂಪುರ ಆತನ ನೆರವಿಗೆ ನಿಂತು ಮತ್ತೆ ಆತ ನನ್ನು ಜಿಲ್ಲಾ ಪಂಚಾಯಿತಿಯ ಕಚೇರಿಯ ಒಳಗೆ ಕೂರಿಸಿದ.

ಕೃಷಿ ಖಾತೆಯ ಮಂತ್ರಿಯಾಗಿದ್ದಾಗ ಕಾಶಂಪುರನ ಜಿಲ್ಲೆಯಲ್ಲಿ 50ಕ್ಕಿಂತ ಹೆಚ್ಚು ರೈತರು ನೇಣು ಹಾಕಿಕೊಂಡು ಸತ್ತರು. ಬಹುಪಾಲು ಜನ ಬೆಳೆದ ಕಬ್ಬಿಗೆ ಫ್ಯಾಕ್ಟರಿಗಳು ಸರಿಯಾದ ಬೆಲೆ ನೀಡವೆ. ಇನ್ನೂ ಕೆಲವು ರೈತರ ಕಬ್ಬು ಹೊಲದಲ್ಲಿ ಕಟಾವೂ ಕೂಡ ಮಾಡದೆ ಇದ್ದಲ್ಲೇ ಬತ್ತಿ ಹೋಗುವ ಕೆಟ್ಟ ದಿನಗಳು ಎದುರಾದಾಗಲೂ ಕಾಶಂಪುರ ಬರೀ ಮೊಸಳೆ ಕಣ್ಣೀರು ಹರಿಸಿದರೆ ಹೊರತು ಯಾವ ರೈತರ ಕಷ್ಟಕ್ಕೂ ನೆರವಾಗಲಿಲ್ಲ. ಸ್ವತಃ ಕಾಶಂಪುರನ ಸಹೋದರನ ಅಡಿಯಲ್ಲಿಯೆ ನಡೆಯುವ ಭವಾನಿ ಶುಗರ್ ಫ್ಯಾಕ್ಟರಿ ಕೂಡ ನಿಗದಿತ ಅವಧಿಗಿಂತ ಮೊದಲೇ ತನ್ನ ಬಾಗಿಲನ್ನು ಮುಚ್ಚಿಕೊಂಡು, ಕಬ್ಬು ಬೆಳೆದ ರೈತರನ್ನು ಬೀದಿಪಾಲು ಮಾಡಿತು. ನಕಲಿ ನೋಟಿನ ಜಾಲವನ್ನು ಬೇಧಿಸುತ್ತ ಇಲ್ಲಿನ ಪೊಲೀಸ್ ಇಲಾಖೆ ಮುಂದುವರೆದದ್ದೇ ಆದರೆ ಅದು ನೇರವಾಗಿ ಬಂದು ಖಾಶಂಪುರನ ತಲೆಬಾಗಿಲಿಗೆ ನಿಲ್ಲಬೇಕಾಗುತ್ತದೆ. ಸಾರಾಯಿ ಪಾಕೇಟ್ ಇಡೀ ರಾಜ್ಯದ ತುಂಬ ಬಂದ್ ಆಗಿದ್ದರೆ, ಇಲ್ಲಿ ಅದು ರಾಜಾರೋಷವಾಗಿ ಹರಿದಾಡುತ್ತದೆ. ಹೀಗಾಗಿ ಕಾಶಂಪುರ ಈ ಸಲ ತನ್ನ ಬಂಡ ಮುಖವನ್ನು ಹೊತ್ತುಕೊಂಡೇ ಮತದಾರರ ಮುಂದೆ ನಿಲ್ಲಬೇಕಾಗಿದೆ. ಆದರೆ ಈತನ ಜೊತೆ ಸಾಥ್ ನೀಡಲೂ ಪಕ್ಷದ ಬಹುತೇಕ ಕಾರ್ಯಕರ್ತರು ಹಿಂದೇಟು ಹಾಕುತ್ತಿದ್ದಾರೆ. ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಾಬುರಾವ ಗುದಗೆ ಮಾತ್ರ ಅದೇಕೋ ಕಾಶಂಪುರನನ್ನು ಅಂತರಂಗವಾಗಿ ವಿರೋಧಿಸಿದರೂ ಬಹಿರಂಗವಾಗಿ ಬೆಂಬಲಿಸುತ್ತಿದ್ದಾರೆ. ಬಹುಶಃ ಇದೊಂದು ಚುನಾವಣೆಯಲ್ಲಿ ಕಾಶಂಪುರನನ್ನು ನಿಲ್ಲಿಸಿ ಆತ ಇಷ್ಟು ವರ್ಷಗಳವರೆಗೆ ಕಮಾಯಿಸಿದ ಹಣ ಖರ್ಚುಮಾಡಿಸಬೇಕೆಂಬ ತಂತ್ರವಿರಬಹುದು!


ಶಕುಂತಲಾ ಬೆಲ್ದಾಳೆ

ಕಾಶಂಪುರನ ಭ್ರಷ್ಟ ಮುಖ ಬಯಲಾಗುವುದನ್ನೇ ಕಾಯುತ್ತಿದ್ದ ಬಿಜೆಪಿಯ ನಗರಸಭೆಯ ಸದಸ್ಯ ಚಂದ್ರಶೇಖರ ಪಾಟೀಲ್ ಶಾಸಕ ಸ್ಥಾನಕ್ಕೆ ನಿಲ್ಲುವ ತಯಾರಿ ನಡೆಸಿದ್ದಾನೆ. ಶಕುಂತಲಾ ಬೆಲ್ದಾಳೆ ಕೂಡ ಮುಂಚೂಣಿಯಲ್ಲಿದ್ದಾಳೆ. ಇನ್ನೂ ಕಾಂಗ್ರೆಸ್‌ನಿಂದ ರೂಹಿಗ್ರೂಪ್‌ನ ರಹೀಂ ಖಾನ ಹಾಗೂ ಶಾಹೀನ್ ಸಂಸ್ಥೆಯ ಮನಾನ ಸೇಠ ತಾಲೀಮು ನಡೆಸಿದ್ದಾರೆ. ಕಳೆದ ಸಲ ಕಾಶಂಪುರನ ಜೊತೆ ಕೈ ಜೋಡಿಸಿದ್ದ ಇಲ್ಲಿನ ಲಿಂಗಾಯತರು ಇಂದು ಯಾಕೋ ದೂರ ಸರಿದಿದ್ದಾರೆನಿಸುತ್ತದೆ. ಉಳಿದಂತೆ ಬಲಾಢ್ಯ ಜನಸಂಖ್ಯೆಯನ್ನು ಹೊಂದಿರುವ ಕಾಶಂಪುರನ ಕುರುಬ ಜನಾಂಗ ರಾಜ್ಯ ನಾಯಕ ಸಿದ್ರಾಮಯ್ಯನ ಇಷಾರವರನ್ನು ಕಾಯುತ್ತಾ ನಿಂತಿದೆ. ಸಿದ್ರಾಮಯ್ಯನ ಇಷಾರ ಏನಾದರೂ ಕಾಶಂಪುರ ವಿರುದ್ಧವಾಗಿದ್ದರೆ ಈತ ಬೀದರನಿಂದ ಧೂಳೀಪಟವಾಗುವುದರಲ್ಲಿ ಯಾವುದೇ ಅನುಮಾನಬೇಡ.

–ವಿಶ್ವಾರಾಧ್ಯ ಸತ್ಯಂಪೇಟೆ

ಗಿಂತಲೂ ಅಗ್ಗವಾದ ದರದಲ್ಲಿ ಬಟ್ಟಿ ಸಾರಾಯಿ, ಕೀಳುದರ್ಜೆಯ ಪಾನೀಯಗಳು ಕಿರಾಣಿ ಅಂಗಡಿಗಳಲ್ಲೂ ಲಭ್ಯ! ಮುಖ್ಯ ರಸ್ತೆಯಲ್ಲಿರುವ ಹೋಟೆಲ್, ಢಾಬಾಗಳಲ್ಲಿಯೂ ಕಳ್ಳಭಟ್ಟಿ ಮಾರಾಟವಾಗುತ್ತಿದೆ. ಈ ಬಗ್ಗೆ ಸಂಬಂಧಿಸಿದ ಅಬಕಾರಿ ಮುಖ್ಯಾಧಿಕಾರಿ ಅಸಿತ್ ಅಲಿ ಅವರಿಗೆ ಕೇಳಿದರೆ ಅಸಹಾಯಕತೆಯಿಂದ ಕೈ ಚೆಲ್ಲಿ ಕೂರುತ್ತಾನೆ. ಹೀಗಾಗಿ ಇಲ್ಲಿ ಸಾರಾಯಿ 600ಕ್ಕೂ ಹೆಚ್ಚು ಹಳ್ಳಿಗಳಲ್ಲಿ ರಾಜಾರೋಷವಾಗಿ ಮಾರಾಟವಾಗುತ್ತಿದೆ. ಇದರಿಂದಾಗಿ ಅಲ್ಲಿನ ಕಿಸೆಯೂ ತಿಂಗಳಿಂದ ತಿಂಗಳಿಗೆ ಹೆಚ್ಚು ಭರ್ತಿಯಾಗುತ್ತ ನಡೆದಿದೆ. ಕುಡುಕರಂತೂ ಮತ್ತಷ್ಟು ಹೊಂದಕುಡುಕರಾಗಿ ಹೋಗುತ್ತಿದ್ದಾರೆ. ನೆರೆಯ ಆಂಧ್ರ ಹಾಗೂ ಮಹಾರಾಷ್ಟ್ರದ ಕೊಡುಗೆಯೂ ಇದಕ್ಕೆ ದೊರೆಯುತ್ತಿದೆ.

ಆದರೆ ಇದನ್ನೆಲ್ಲ ಹತ್ತಿಕ್ಕುವ ಇಚ್ಛಾಶಕ್ತಿ ರಾಜಕಾರಣಿಗಳಿಗಾಗಲಿ, ಅಧಿಕಾರಿಗಳಿಗಾಗಲಿ ಇಲ್ಲದೆ ಹೋದುದರಿಂದ ಬಾದರ ಜಿಲ್ಲೆಯ ತುಂಬೆಲ್ಲ ಕುಡಿತದ ಕರಾಮತ್ತು ದಿನೇದಿನೇ ಹೆಚ್ಚುತ್ತಾ ನಡೆದಿದೆ.

ಇಂಥ ಅಧ್ವಾನ್ ಜಿಲ್ಲೆಯ ಕಡೆಗೊಮ್ಮೆ ಆಳುವವರು ತಿರುಗಿ ನೋಡಬಲ್ಲರೆ?

ಕಾಂಗ್ರೆಸ್ ಬುದ್ಧಿ ಕಲಿಯುವುದೆ?


ಹಾಸನ


ರಾಜಕೀಯವನ್ನೇ ಹಾಸು ಹೊದ್ದು ಮಲಗುವ ಹಾಸನ ಜಿಲ್ಲೆಯಲ್ಲೀಗ ರಾಜಕೀಯ ಕಲರವ ಕೇಳಿಸುತ್ತಿದೆ. ಹಾಸನ ಜಿಲ್ಲೆಯ ಜೆಡಿಎಸ್ ಸರ್ವಾಧಿಕಾರಿ ರೇವಣ್ಣನ ದುರಾಡಳಿತದಿಂದ ಬೇಸತ್ತಿರುವ ಜನತೆ ಪರ್ಯಾಯ ಪಕ್ಷಕ್ಕಾಗಿ ಹಾತೊರೆಯುತ್ತಿರುವುದು ಎಷ್ಟು ಸತ್ಯವೋ ಜೆಡಿಎಸ್‌ಗೆ ಸೆಡ್ಡು ಹೊಡೆದು ನಿಲ್ಲಬಲ್ಲ ಪರ್ಯಾಯ ಪಕ್ಷವೊಂದು ಹಾಸನದ ಜನರಿಗೆ ಕಾಣದಿರುವುದೂ ಅಷ್ಟೇ ಸತ್ಯ.


ಎಚ್.ಡಿ. ರೇವಣ್ಣ

ಅಧಿಕಾರಕ್ಕಾಗಿ ಹಗಲಿರುಳೆನ್ನದೇ ಬಾಯಿಬಡಿದುಕೊಂಡು ಈಗ ವಿಧವಾ ವೇದನೆ ಅನುಭವಿಸುತ್ತಿರುವ ಬಿಜೆಪಿ ಜಿಲ್ಲೆಯ ಜನರಿಗೆ ಶಿಖಂಡಿಯಂತೆ ಕಂಡರೆ, ಕಾಂಗ್ರೆಸ್ ನರಸತ್ತು ನರಳುತ್ತಿರುವ ನಾಮರ್ಧನಂತೆ ಗೋಚರಿಸುತ್ತಿದೆ. ಹೀಗಾಗಿ, ಜೆಡಿಎಸ್‌ಗೆ ಪರ್ಯಾಯವಾಗಿ ಬೇರೊಂದು ಪಕ್ಷವನ್ನು ಎಬ್ಬಿಸಿ ನಿಲ್ಲಿಸಲು ಹಾತೊರೆಯುತ್ತಿರುವ ಜಿಲ್ಲೆಯ ಜನತೆ ಗೊಂದಲದಲ್ಲಿರುವುದಂತೂ ಸತ್ಯ.

ಕಳೆದ ಐವತ್ತು ವರ್ಷಗಳಿಂದ ಜಿಲ್ಲೆಯ ಕಾಂಗ್ರೆಸ್ ಒಂದೇ ಕುಟುಂಬದ ತೆಕ್ಕೆಯಲ್ಲಿತ್ತು. ಅದಕ್ಕೆ ವಾರಸುದಾರನಾಗಿ ಹೊಳೆನರಸೀಪುರ ಕ್ಷೇತ್ರದ ಜಿ. ಪುಟ್ಟಸ್ವಾಮಿ ಗೌಡ ಮತ್ತು ಚನ್ನರಾಯಪಟ್ಟಣದ ಎಚ್.ಸಿ. ಶ್ರೀಕಂಠಯ್ಯ ಮೆರೆಯುತ್ತಾ ಬಂದಿದ್ದರು. ಒಬ್ಬೊಬ್ಬರು ಒಂದೊಂದು ಗುಂಪು ಕಟ್ಟಿಕೊಂಡು ಕಾಂಗ್ರೆಸ್‌ನನ್ನು ಮೇಲೇಳದಂತೆ ಮಾಡಿಹಾಕಿದ್ದಾರೆ. ಒಬ್ಬನಿಗೆ ದೇವೇಗೌಡನೊಂದಿಗೆ ಫೋನು ಸಂಬಂಧ, ಇನ್ನೊಬ್ಬನಿಗೆ ಹರಳೆಣ್ಣೆ ಸಂಬಂಧ. ಹೀಗಿದ್ದರೂ ಇವರಿಬ್ಬರು ಒಬ್ಬರಿಗೊಬ್ಬರು ಸಂಬಂಧಿಕರೆ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಇವರಿಬ್ಬರೂ ಒಂದಾಗಿದ್ದರಿಂದ ಕಾಂಗ್ರೆಸ್‌ನಲ್ಲಿ ಒಂದಿಷ್ಟು ಬದಲಾವಣೆಯ ಗಾಳಿ ಬೀಸುತ್ತೆ ಅಂದುಕೊಂಡಿದ್ದ ಹಾಸನದ ಜನತೆಯ ಆಶಯ ಸುಳ್ಳಾಗಿ ಹೋಯಿತು. ಆದ್ದರಿಂದಲೇ ಜೆಡಿಎಸ್‌ನ ರೇವಣ್ಣನ ಕೈಗೆ ಹಾಸನದ ದರ್ಬಾರ್ ಸಿಕ್ಕಿಬಿಟ್ಟಿತು.




ಎಚ್. ಸಿ. ಶ್ರೀಕಂಠಯ್ಯ

ಕಳೆದ ಚುನಾವಣೆಯಲ್ಲಿ ಅಂದಿನ ಬಿಜೆಪಿಯ ಘಟಾನುಘಟಿಗಳನ್ನು ಕಾಂಗ್ರೆಸ್‌ಗೆ ಎಳೆತಂದು, ಮೂಲ ಕಾಂಗ್ರೆಸ್ಸಿಗರಾದ ಬಿ.ಆರ್.ಗುರುದೇವ, ಎ.ಟಿ. ರಾಮಸ್ವಾಮಿಯಂಥವರಿಗೆ ಟಿಕೆಟ್ ತಪ್ಪಿಸಿ ಜಿಲ್ಲೆಯ ಕಾಂಗ್ರೆಸ್ ಅವನತಿಗೆ ಕಾರಣರಾದರು. ಈ ಬೀಗರಿಬ್ಬರ ಶತಾಯಗತಾಯ ವಿರೋಧದ ನಡುವೆಯೂ ದೇವೇಗೌಡರ ಕುಟುಂಬದ ಆಜನ್ಮ ದ್ವೇಷಿಯಾಗಿ ಬೆಳೆದು ಬಂದವರು ಗಂಡಸಿ ಕ್ಷೇತ್ರದ ಶಿವರಾಂ. ಅಲ್ಪ ಮತಗಳಲ್ಲೆ ಗೆದ್ದುಬಂದು ಜಿಲ್ಲೆಯ ಕಾಂಗ್ರೆಸ್‌ನ್ನು ಜೀವಂತವಾಗಿಡುವಲ್ಲಿ ಶಿವರಾಂ ಯಶಸ್ವಿಯಾಗಿದ್ದರು. ಇದೆಲ್ಲಾ ಈಗ ಇತಿಹಾಸ. ನಂತರದ ದಿನಗಳಲ್ಲಿ ಜಿ. ಪುಟ್ಟಸ್ವಾಮಿಗೌಡರು ನಿಧನರಾಗಿದ್ದು, ಶ್ರೀಕಂಠಯ್ಯನವರು ರಾಜಕೀಯ ಸನ್ಯಾಸ ಸ್ವೀಕರಿಸಿ ಕೆಪಿಸಿಸಿ ನಾಯಕತ್ವಕ್ಕಾಗಿ ದೆಹಲಿ ದಾರಿಯಲ್ಲಿ ಬಿದ್ದದ್ದು, ಕ್ಷೇತ್ರ ಪುನರ್‌ವಿಂಗಡನೆಯಲ್ಲಿ ಬಿ. ಶಿವರಾಮ್ ಎಡಬಿಡಂಗಿಯಾದದ್ದು ಅವರು ತಮ್ಮ ಕ್ಷೇತ್ರ ಗಂಡಸಿಯನ್ನೇ ಮರೆತುಬಿಟ್ಟದ್ದು – ಇವೆಲ್ಲ ನಂತರ ನಡೆದ ಬೆಳವಣಿಗೆಗಳು.


ಬಿ. ಶಿವರಾಮ್

ಈಗ ರಾಜಕೀಯ ಸಂಚಲನ ಮತ್ತೆ ಶುರುವಾಗಿದೆ. ಎಚ್.ಸಿ. ಶ್ರೀಕಂಠಯ್ಯನವರು ತಮ್ಮ ರಾಜಕೀಯ ಸನ್ಯಾಸಕ್ಕೆ ಗುಡ್‌ಬೈ ಹೇಳಿ ಯುವಕರೂ ನಾಚುವಂತೆ ಚುನಾವಣಾ ಕಣದಲ್ಲಿ ಓಡಾಡುತ್ತಿದ್ದಾರೆ. ಇವರ ಒಂದು ಸಮಸ್ಯೆ ಎಂದರೆ ಇವರು ಮತದಾರರ ನಡುವೆ ಇರುವುದಕ್ಕಿಂತ ಜಾಸ್ತಿಯಾಗಿ ಅವರ ಕಿವಿಕಚ್ಚುವವರೊಂದಿಗೇನೇ ಇರುವುದಕ್ಕೆ ಇಷ್ಟಪಡುತ್ತಾರೆ. ಜೊತೆಗೆ ತಮ್ಮ ಕುಲಪುತ್ರ ವಿಜಯ್ ಕುಮಾರ್‌ನನ್ನು ರಾಜಕೀಯವಾಗಿ ಮೇಲೆತ್ತಲು ಭಾರಿ ಸಾಹಸ ಪಟ್ಟರಾದರೂ ಅದೆಲ್ಲ ವರ್ಕ್‌ಔಟ್ ಆಗಿಲ್ಲ.


ಕಳೆದ ನಲವತ್ತು ತಿಂಗಳಲ್ಲಿ ಜೆಡಿಎಸ್ ದಬ್ಬಾಳಿಕೆಯಡಿಯಲ್ಲಿ ಹಾಸನ ಜಿಲ್ಲೆ ನಲುಗಿಹೋಗಿದೆ. ಅದಕ್ಕೆ ಸೆಡ್ಡು ಹೊಡೆದು ನಿಲ್ಲುವ ತಾಕತ್ತನ್ನು ಕಾಂಗ್ರೆಸ್ ಈಗ ಪ್ರದರ್ಶಿಸಬೇಕಿದೆ. ಶ್ರೀಕಂಠಯ್ಯನವರು ತಮ್ಮ ಪ್ರತಿಷ್ಠೆಗೆ ಒಂದಿಷ್ಟು ಬ್ರೇಕ್ ಹಾಕಿ ಕಾರ್ಯಕರ್ತರಂತೆ ಓಡಾಡಿ ಕೆಲಸ ಮಾಡಬೇಕಿದೆ. ಪ್ರತೀ ಕ್ಷೇತ್ರದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿ ಜೆಡಿಎಸ್ ಮತ್ತು ಬಿಜೆಪಿಗಳೊಂದಿಗೆ ಚುನಾವಣಾ ಕಣದಲ್ಲಿ ಸೆಣಸಬೇಕಿದೆ. ಸರ್ವಾಧಿಕಾರಿ ಜೆಡಿಎಸ್ ಮೇಲೆ ಜನತೆಗಿರುವ ಸಿಟ್ಟು ಬಿಜೆಪಿಯ ಅನುಕಂಪದಲೆಯಲ್ಲಿ ಕೊಚ್ಚಿ ಹೋಗದಂತೆ ಕಾಂಗ್ರೆಸ್‌ನ್ನು ಮುನ್ನಡೆಸಬೇಕಿದೆ. ಕಾಂಗ್ರೆಸ್‌ನೊಳಗಿನ ಕಚ್ಚಾಟವನ್ನು ಮುಂದೂಡಿ ಒಗ್ಗಟ್ಟಿನಿಂದ ಚುನಾವಣೆಯನ್ನು ಎದುರಿಸಬೇಕಿದೆ.

ಏಕೆಂದರೆ, ಕಳೆದ ನಲವತ್ತು ತಿಂಗಳ ಜೆಡಿಎಸ್ ದಬ್ಬಾಳಿಕೆಗೆ ಜಿಲ್ಲೆಯಲ್ಲಿ ಪ್ರತಿರೋಧ ಒಡ್ಡಿದ ಕಾಂಗ್ರೆಸ್ಸಿಗ ಶಿವರಾಮ್‌ಗೆ ಶ್ರೀಕಂಠಯ್ಯನವರೂ ಹೆಗಲು ಕೊಟ್ಟಿದ್ದರೆ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಇಂಥ ಹೀನಾಯಸ್ಥಿತಿ ಬರುತ್ತಿರಲಿಲ್ಲ. ಈ ಬಗ್ಗೆ ಕಾರ್ಯಕರ್ತರಿಗೂ ಶ್ರೀಕಂಠಯ್ಯನವರ ಮೇಲೆ ಬೇಸರವಿದೆ.

ಹಾಸನ ಕ್ಷೇತ್ರ


ಈಗ ಕಾಂಗ್ರೆಸ್ಸಿನಲ್ಲಿ ಬರುವ ಚುನಾವಣೆಯಲ್ಲಿ ಟಿಕೆಟ್ ನಿರೀಕ್ಷಿಸುತ್ತಿರುವವರ ಸಂಖ್ಯೆಯೂ ಗಣನೀಯವಾಗಿ ಬೆಳೆಯುತ್ತಿದೆ. ಹಾಸನ ಕ್ಷೇತ್ರವೊಂದರಲ್ಲಿಯೇ ಒಂದು ಡಜನ್‌ನಷ್ಟು ಜನ ಟಿಕೆಟ್‌ಗಾಗಿ ಕ್ಯೂ ನಿಂತಿದ್ದಾರೆ. ಕೆಲವರು ಒಬ್ಬೊಬ್ಬ ಮುಖಂಡನ ನೆರಳಿನಲ್ಲಿ ಬೆಂಗಳೂರು ಅಲೆಯುತ್ತಿದ್ದರೆ, ಮತ್ತೆ ಕೆಲವರು ಜನರ ಮಧ್ಯದಲ್ಲಿಯೇ ಇದ್ದುಕೊಂಡು ವಿಶ್ವಾಸಗಳಿಸುವ, ಪಕ್ಷಕಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ.

ಹಾಸನ ಕ್ಷೇತ್ರದಿಂದ ಕಳೆದೆರಡು ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ, ಆದರೆ ಕಾಂಗ್ರೆಸ್ಸಿಗರ ಕಚ್ಚಾಟದಿಂದ ಜೆಡಿಎಸ್ ಪರ ಸೃಷ್ಟಿಯಾದ ಅಲೆಗೆ ಬಲಿಯಾದ ಕೆ.ಎಂ. ರಾಜೇಗೌಡ ಈ ಬಾರಿಯೂ ಅಖಾಡಕ್ಕಿಳಿಯುವ ತಯಾರಿಯಲ್ಲಿದ್ದಾರೆ. ಎರಡು ಬಾರಿ ಸೋತರೂ ಪರವಾಗಿಲ್ಲ, ಈ ಬಾರಿ ಜೆಡಿಎಸ್ ವಿರೋಧಿ ಅಲೆ ತನ್ನನ್ನು ಗೆಲ್ಲಿಸಿಯೇ ತೀರುತ್ತದೆಂಬ ಅಚಲ ವಿಶ್ವಾಸವನ್ನು ಅವರು ಹೊಂದಿದ್ದಾರೆ.


ಬಿ.ಕೆ. ಮಂಜುನಾಥ್

ಕಾಂಗ್ರೆಸ್‌ನ ಮತ್ತೊಬ್ಬ ಕಟ್ಟಾಳು ಬಿ.ಕೆ. ಮಂಜುನಾಥ್ ಸಹ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಕ್ಷೇತ್ರದ ಜನರೊಂದಿಗೆ ಇವರಿಗೆ ನಿಕಟ ಬಾಂಧವ್ಯವಿದೆ. ಈ ಹಿಂದೆ ತಾವು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಮಾಡಿದ ಜನಪರ ಕೆಲಸಗಳೇ ತಮ್ಮನ್ನು ಗೆಲ್ಲಿಸುತ್ತದೆಂಬ ವಿಶ್ವಾಸ ಅವರಿಗಿದೆ.

ಇವರಿಬ್ಬರಿಗೆ ಟಿಕೆಟ್ ಪಡೆಯುವಲ್ಲಿ ಸ್ಪರ್ಧೆ ಒಡ್ಡುತ್ತಿರುವವರು ವಿಧಾನ ಪರಿಷತ್ ಸದಸ್ಯ ಎಸ್.ಎಂ. ಆನಂದ್. ಇವರ ಅಧಿಕಾರಾವಧಿ ಇನ್ನೂ ಎರಡು ವರ್ಷ ಇದೆಯಾದರೂ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತ ಮಾತ್ರ ಕಡಿಮೆಯಾಗಿಲ್ಲ, ರೇವಣ್ಣನ ಅವಧಿಯಲ್ಲಿ ನಡೆದ ಎಲ್ಲಾ ಅವ್ಯವಹಾರ ಗಳಿಗೆ ಮೌನಸಮ್ಮತಿ ನೀಡಿದ್ದ ಆನಂದ್‌ಗೆ ಕ್ಷೇತ್ರದಲ್ಲಿ ಅಷ್ಟೊಂದು ಒಳ್ಳೆಯ ಹೆಸರಿಲ್ಲ ಎಂಬುದಂತೂ ಸತ್ಯ.


[illegible]

ಸಕಲೇಶಪುರ – ಬೇಲೂರು ಕ್ಷೇತ್ರ

ಕ್ಷೇತ್ರ ವಿಂಗಡನೆಯ ಗುಮ್ಮ ಯಥೇಚ್ಛವಾಗಿ ಕಾದಿರುವುದು ಸಕಲೇಶಪುರ ಮತ್ತು ಬೇಲೂರು ಕ್ಷೇತ್ರವನ್ನು. ಈಗ ಮೀಸಲು ಕ್ಷೇತ್ರವಾಗಿರುವ ಬೇಲೂರು ಕ್ಷೇತ್ರ ಪುನರ್‌ವಿಂಗಡಣೆ ಆಯೋಗದ ಶಿಫಾರಸ್ಸು ಜಾರಿಯಾದರೆ ಆಲೂರು ಸಕಲೇಶಪುರ ಕ್ಷೇತ್ರ, ದರ್ಗಾವಣೆಯಾಗುತ್ತದೆ. ಸಾಮಾನ್ಯ ಕ್ಷೇತ್ರವಾಗಿದ್ದ ಈ ಕ್ಷೇತ್ರ ಮೀಸಲು ಕ್ಷೇತ್ರವಾಗುತ್ತದೆ. ಇಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ನಡುವೆ ಅಷ್ಟೊಂದು ಪೈಪೋಟಿ ಇಲ್ಲ. ಸದ್ಯಕ್ಕೆ ಅಭ್ಯರ್ಥಿಯಾಗಲು ಸಕಲೇಶಪುರ ತಾಲ್ಲೂಕಿನ ಹಡುಬಾಳು ಕ್ಷೇತ್ರದ ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಡಿ.ಸಿ. ಸಣ್ಣಸ್ವಾಮಿಯೊಬ್ಬರದ್ದೇ ಈಗ ಚಾಲ್ತಿಯಲ್ಲಿರುವ ಹೆಸರು. ಜೆಡಿಎಸ್ ಮತ್ತು ಬಿಜೆಪಿಗೆ ಟಾಂಗ್ ಕೊಡಬಲ್ಲ ಕೆಪಾಸಿಟಿ ಇರುವ ಮನುಷ್ಯ.

ಹೊಳೆನರಸೀಪುರ ಕ್ಷೇತ್ರ

ಜಿಲ್ಲೆಯ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ಹೊಳೆನರಸೀಪುರವನ್ನು ರೇವಣ್ಣನಿಗೆ ಪೂರಕವಾಗಿ ಪುನರೂಪಿಸಲು ದೇವೇಗೌಡರು ತಂತ್ರಗಾರಿಕೆಯನ್ನೇ ನಡೆಸಿದ್ದರು. ಕುರುಬರ ಪ್ರಾಬಲ್ಯವಿರುವ ಹಳ್ಳಿಮೈಸೂರು ಹೋಬಳಿಯನ್ನು ಅರಕಲಗೂಡು ಕ್ಷೇತ್ರಕ್ಕೆ ಸೇರಿಸಿ ಹಾಸನ ಕ್ಷೇತ್ರದ ಶಾಂತಿಗ್ರಾಮ ಹೋಬಳಿ, ಗಂಡಸಿ ಕ್ಷೇತ್ರದ ದುದ್ದ ಹೋಬಳಿ ಮತ್ತು ಚನ್ನರಾಯಪಟ್ಟಣ ಕ್ಷೇತ್ರದ ದಂಡಿಗನಹಳ್ಳಿ ಹೋಬಳಿಗಳನ್ನು ಹೊಳೆನರಸೀಪುರ ಕ್ಷೇತ್ರಕ್ಕೆ ಸೇರಿಸಿ ಒಕ್ಕಲಿಗರ ಪ್ರಬಲ ಕ್ಷೇತ್ರವನ್ನಾಗಿ ಮಾಡಲಾಗಿದೆ. ಅದು ಎಷ್ಟರಮಟ್ಟಿಗೆ ವರ್ಕ್‌ಔಟ್ ಆಗುತ್ತೋ ನೋಡಬೇಕಿದೆ. ಏಕೆಂದರೆ, ದುದ್ದ, ಶಾಂತಿಗ್ರಾಮ ಮತ್ತು ದಂಡಿಗನಹಳ್ಳಿ ಕ್ಷೇತ್ರಗಳಲ್ಲಿ ದಾಸ ಒಕ್ಕಲಿಗರೇ ಜಾಸ್ತಿಯಾಗಿದ್ದಾರೆ. ಇವರೆಲ್ಲಾ ರೇವಣ್ಣನ ದ್ವೇಷದ ಬೆಂಕಿಯಲ್ಲಿ ಬೆಂದವರು. ಎಷ್ಟರಮಟ್ಟಿಗೆ ಅವರು ರೇವಣ್ಣನಿಗೆ ಸಾಥ್ ನೀಡುತ್ತಾರೆ ಎಂಬುದನ್ನು ಕಾದುನೋಡಬೇಕು.

ಈ ನಡುವೆ ದೇವೇಗೌಡರ ಪ್ರಬಲ ವಿರೋಧಿಯಾಗಿದ್ದ ಜಿ. ಪುಟ್ಟಸ್ವಾಮಿಗೌಡರ ಸೊಸೆ ಅನುಪಮ ಮಹೇಶ್ ಅವರ ಮಾವ ಮತ್ತು ಪತಿ ಇಬ್ಬರೂ ಸತ್ತಿರುವುದರಿಂದ ಅವರ ಬಗ್ಗೆ ಒಂದು ರೀತಿಯ ಅನುಕಂಪದಲೆಯನ್ನು ಸೃಷ್ಟಿಸುತ್ತಿದೆ. ಜತೆಗೆ ರೇವಣ್ಣನ ವಿರೋಧಿ ಅಲೆಯೂ ಸೇರಿಕೊಂಡರೆ ರೇವಣ್ಣನ ಬ್ಲಡ್ ಪ್ರೆಶರ್ ಜಾಸ್ತಿಯಾಗೋದು ಖಚಿತ. ಒಂದು ವೇಳೆ ಅನುಪಮ ಅವರು ಚುನಾವಣೆಗೆ ನಿಲ್ಲಲು ನಿರಾಕರಿಸಿದರೆ ಆ ಸ್ಥಾನವನ್ನು ತಾಲ್ಲೂಕಿನ ಯುವ ಮುಖಂಡ ದೇವರಾಜ್ ತುಂಬಲಿದ್ದಾರೆ. ಈತ ಕ್ಷೇತ್ರದುದ್ದಕ್ಕೂ ಒಂದಿಷ್ಟು ಅಲೆಯುತ್ತಾ ಪಕ್ಷ ಸಂಘಟನೆಯಲ್ಲಿ ತೊಡಗಿರುವುದು ನಿಜವಾದರೂ, ಅನುಪಮಗಿರುವ ಅಡ್ವಾಂಟೇಜ್ ಈತನಿಗಿರದಿರುವುದು ಒಂದು ನೆಗೆಟಿವ್ ಪಾಯಿಂಟ್ ಆಗಿದೆ.

ಅದೇನೇ ಇದ್ದರೂ ಈ ಬಾರಿ ಜಿಲ್ಲೆಯಾದ್ಯಂತ ಎದ್ದಿರುವ ಜೆಡಿಎಸ್ ವಿರೋಧಿ ಅಲೆಯು ಬಿಜೆಪಿಯ ಪರ ಎದ್ದಿರುವ ಅನುಕಂಪದಲೆಯಲ್ಲಿ ಕೊಚ್ಚಿ ಹೋಗದಂತೆ ತಡೆಯುವ ಜವಾಬ್ದಾರಿ ಕಾಂಗ್ರೆಸ್ ಧುರೀಣರ ಮೇಲಿದೆ. ಒಳಜಗಳ, ಸ್ವಜನಪಕ್ಷಪಾತಗಳನ್ನು ಬದಿಗಿಟ್ಟು ಒಗ್ಗಟ್ಟಿನಿಂದ ಚುನಾವಣೆ ಎದುರಿಸಿದ್ದೇ ಆದಲ್ಲಿ ಕಳೆದ ಚುನಾವಣೆಯಲ್ಲಿ ಹೋದ ಮಾನವನ್ನು ಈ [illegible] ಕಷ್ಟವಾಗಲಾರದು. [illegible] ಕಾಂಗ್ರೆಸ್ ಬುದ್ಧಿ ಕಲಿಯಬೇಕಷ್ಟೆ.

–[illegible]



ಬಲ್ಲಾಳರು ಸವೆದ ದಾರಿ

ಮುಂಬಯಿ ಮಹಾನಗರದಲ್ಲಿ ಕನ್ನಡದ ಕಣಜವನ್ನು ತುಂಬುವ ಕಾಯಕದಲ್ಲಿ ತೊಡಗಿಸಿಕೊಂಡವರಲ್ಲಿ 30.1.2008 ಬುಧವಾರದಂದು ಬೆಂಗಳೂರಿನಲ್ಲಿ ನಿಧನರಾದ ನಮ್ಮ ವ್ಯಾಸರಾಯ ಬಲ್ಲಾಳರೂ ಒಬ್ಬರು. ಇವರ ಜನನ ಡಿಸೆಂಬರ್ 1, 1923 ರಂದು ಉಡುಪಿಯ ಅಂಬಲಪಾಡಿಯಲ್ಲಿ, ಇವರು ಪ್ರತಿಷ್ಠಿತ ನಿಡಂಬೂರು ಬೀದಿನ ಮನೆತನಕ್ಕೆ ಸೇರಿದವರು. ತಂದೆ ರಾಮದಾಸ ಬಲ್ಲಾಳ; ತಾಯಿ ಕಲ್ಯಾಣಿ. 1939 ರಲ್ಲಿ ಉಡುಪಿಯ ಬೋರ್ಡ್ ಹೈಸ್ಕೂಲ್‌ನಲ್ಲಿ ಮದ್ರಾಸು ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಷನ್ ಮುಗಿಸಿದರು. "ಹೆಸರು ಕ್ಷೀರಸಾಗರ ಭಟ್ಟ; ಮಜ್ಜಿಗೆಗೆ ಮಾತ್ರ ತತ್ವಾರ" ಎನ್ನುವಂತೆ ವಿಶ್ವವಿದ್ಯಾಲಯ ಉಚ್ಚಪದವಿಯನ್ನು ಪಡೆಯುವ ಭಾಗ್ಯ ಅವರಿಗೆ ಲಭಿಸಲಿಲ್ಲ. ಒಂದು ವೇಳೆ ಕಾಲೇಜಿನಲ್ಲಿ ಉಚ್ಚಮಟ್ಟದ ಶಿಕ್ಷಣ ಪಡೆದಿದ್ದರೆ ಮುಂಬಯಿಯಲ್ಲಿ ಯಾವುದಾದರೂ ಒಂದು ದೊಡ್ಡ ಕಂಪೆನಿಯಲ್ಲಿ ದೊಡ್ಡ ಅಧಿಕಾರಿಯಾಗಿ ಐಷಾರಾಮಿ ಜೀವನವನ್ನು ಸಾಗಿಸಿ ಹತ್ತರಲ್ಲಿ ಹನ್ನೊಂದಾಗಿ ಕಾಲಗರ್ಭದಲ್ಲಿ ಸೇರಿ ಹೋಗುತ್ತಿದ್ದರು. ಅಂತೆಯೇ ತನ್ನ ಹುಟ್ಟೂರಾದ ಉಡುಪಿಯನ್ನೇ ತನ್ನ ಕರ್ಮಭೂಮಿಯನ್ನಾಗಿ ಆಯ್ದುಕೊಂಡಿದ್ದರೆ ಒಬ್ಬ ಕರ್ಮಠ ಮಾಧ್ವಬ್ರಾಹ್ಮಣನಾಗಿ ಉಡುಪಿ ಅಷ್ಟ ಮಠದ ವಲಯದಲ್ಲಿ ಆಸ್ಥಾನ ವಿದ್ವಾಂಸರಾಗಿ ಗುರುತಿಸಿಕೊಳ್ಳುತ್ತಿದ್ದರೋ ಏನೋ ಅಥವಾ ಹೊಗಳುಭಟರಾಗಿ ಮೆರೆಯುತ್ತಿದ್ದರೇನೋ. ಆ ಕಾಲದಲ್ಲಿ ಮುಂಬಯಿ ಮಹಾನಗರದಲ್ಲಿ ತುಳುವ ಕನ್ನಡಿಗರಿಗೆ ತಮ್ಮ ಅಸ್ಮಿತೆಯನ್ನು ಗುರುತಿಸಿಕೊಂಡು ನಾವು ಕನ್ನಡಿಗರು ಎಂದು ಹೆಮ್ಮೆಯಿಂದ ಹೇಳಿಕೊಳ್ಳಲು ಒಂದು ಸತ್ವಪೂರ್ಣವಾದ ವಾತಾವರಣ ನಿರ್ಮಾಣವಾಗಬೇಕಿತ್ತು. ಆ ಕೊರತೆಯನ್ನು ತುಂಬಲು ಮುಂದೆ ಬಂದವರಲ್ಲಿ ವ್ಯಾಸರಾಯ ಬಲ್ಲಾಳರೂ ಒಬ್ಬರು. ಮಾಧ್ವಮಠದ ಉಸಿರುಗಟ್ಟುವ ವಾತಾವರಣದಿಂದ ಬಿಡುಗಡೆ ಹೊಂದಿದ ಬಲ್ಲಾಳರು 1944 ರಲ್ಲಿ ಮುಂಬಯಿ ಜನಸಾಗರಕ್ಕೆ ಬಂದು ಸೇರಿಕೊಂಡರು. ಹೊಟ್ಟೆ ಅನ್ನವನ್ನು ಬಯಸುತ್ತಿತ್ತು. ಮನಸ್ಸು ಸೃಷ್ಟಿಶೀಲ ಬದುಕಿಗಾಗಿ ಹಪಹಪಿಸುತ್ತಿತ್ತು, ಬಲ್ಲಾಳರು ಮುಂಬಯಿಯ ಕಾಲ್ಟೆಕ್ಸ್ ಕಂಪೆನಿಯಲ್ಲಿ ಸ್ಟೆನೋ ಟೈಪಿಸ್ಟ್ ಆಗಿ ಸೇರಿಕೊಂಡರು. ಮತ್ತೆ ಅಧಿಕಾರಿಯಾದರು.

ಮುಂಬಯಿಯಲ್ಲಿ ಬಲ್ಲಾಳರನ್ನು ಅತಿ ಹತ್ತಿರದಲ್ಲಿ ಕಂಡವರಲ್ಲಿ ನಾನೂ ಒಬ್ಬ. ಅವರು ಸ್ಫುರದ್ರೂಪಿ; ಗೌರವರ್ಣ, ನೀಳಕಾಯ, ಗಂಭೀರವಾದ ಚಹರೆ, ತೂಕದ ಮಾತು, ಮುಂಬಯಿಯ ಸಂಕೀರ್ಣ, ಯಾಂತ್ರಿಕ ಬದುಕನ್ನು ಸೂಕ್ಷ್ಮವಾಗಿ ಅವಲೋಕಿಸುವ ಅದಮ್ಯವಾದ ಒಂದು ಕುತೂಹಲ ಅವರಲ್ಲಿತ್ತು, ಜ್ಞಾನತೃಷೆ ಬೆಂಬಿಡದೆ ಅವರನ್ನು ಕಾಡುತ್ತಿತ್ತು, ಹಿಂದಿ, ಮರಾಠಿ, ಇಂಗ್ಲಿಷ್ ಸಾಹಿತ್ಯದ ಪರಿಚಯ ಅವರಿಗಿದ್ದ ಕಾರಣ ಅವರ ಕಥೆ, ಕಾದಂಬರಿಗಳಲ್ಲಿ ಈ ಭಾಷೆಗಳ ಸಾಹಿತ್ಯದ, ವಿಶೇಷವಾಗಿ ಮರಾಠಿ ಸಾಹಿತ್ಯದ ಪ್ರಭಾವ ಇದೆ ಎಂದು ಊಹಿಸಲು ಸಾಧ್ಯವಿದೆ. ಮುಂಬಯಿ ನಾವು ಕಂಡಂತೆ ಇಂದ್ರನ ಸ್ವರ್ಗವೂ ಹೌದು. ಅಂತೆಯೇ ತುತ್ತು ಅನ್ನಕ್ಕಾಗಿ ತುಂಡುಬಟ್ಟೆಗಾಗಿ ಹಗಲುರಾತ್ರಿ ವಿಲಿವಿಲಿ ಒದ್ದಾಡುವ ನತದೃಷ್ಟ ಜೀವಿಗಳ ನರಕವೂ ಹೌದು. ಬಲ್ಲಾಳರು ಇಂತಹ ದಾರುಣ ಚಿತ್ರಣವನ್ನು ಪ್ರತ್ಯಕ್ಷ ಕಂಡವರು; ಅದಕ್ಕಾಗಿ ಮರುಗಿದವರು.

ಆ ಕಾಲದಲ್ಲಿ ಮುಂಬಯಿಯ ಕೋಟೆ ಪ್ರದೇಶದ ಮಾರುತಿ ಲೇನ್‌ನಲ್ಲಿ ಎಂ.ಎಸ್. ಕೋಟ್ಯಾನ್ ಅವರ ವಿದ್ಯಾನಿಧಿ ಬುಕ್ ಡಿಪೋ ಇತ್ತು, ಆ ಕಾಲದ ಹಿರಿಯ ಕಿರಿಯ ಸಾಹಿತಿಗಳಿಗೆ ಅದೊಂದು ಸರಸ್ವತಿ ಮಂದಿರ. ವ್ಯಾಸರಾಯ ಬಲ್ಲಾಳ, ಅವರ ಸಮಕಾಲೀನ ಸಾಹಿತಿಗಳು ಅಲ್ಲಿ ಒಬ್ಬರನ್ನೊಬ್ಬರು ಭೇಟಿಯಾಗುವುದು ಸರ್ವೇ ಸಾಮಾನ್ಯ. ಡಾ. ಶ್ರೀನಿವಾಸ ಹಾವನೂರ, ವಿದ್ವಾನ್ ರಾಮಚಂದ್ರ ಉಚ್ಚಿಲ, ಖ್ಯಾತ ನವ್ಯ ಕವಿ ಅರವಿಂದ ನಾಡಕರ್ಣಿ, ಮತ್ತೊಬ್ಬ ಕನ್ನಡದ ಶ್ರೇಷ್ಠ ಕಾದಂಬರಿಕಾರ ಯಶವಂತ ಚಿತ್ತಾಲ, ನಮ್ಮೆಲ್ಲರ ಅಚ್ಚುಮೆಚ್ಚಿನ ಕವಿ ಡಾ. ಬಿ.ಎ. ಸನದಿ, ಚಿತ್ರಕಲಾವಿದ ಕೆ.ಕೆ. ಹೆಬ್ಬಾರ ಮುಂತಾದವರು ಅಲ್ಲಿ ಒಟ್ಟಾಗುತ್ತಿದ್ದರು. ಹಗಲು ಹೋಟೆಲುಗಳಲ್ಲಿ ಕ್ಯಾಂಟನುಗಳಲ್ಲಿ ದುಡಿದು ರಾತ್ರಿ ಶಾಲೆಗೆ ಹೋಗುವ ಮಕ್ಕಳಿಗೆ ಅವರನ್ನು ನೋಡುವುದೇ ಒಂದು ಸಂಭ್ರಮ. ಆದರೆ ಇಂದು ಆ ವಿದ್ಯಾನಿಧಿ ಗ್ರಾಹಕರಿಲ್ಲದೆ ಮುಚ್ಚಿಹೋಗಿದೆ. ವ್ಯಾಸರಾಯ ಬಲ್ಲಾಳರ ಮತ್ತೊಂದು ಜ್ಞಾನದೇಗುಲ ಮುಂಬಯಿ ಮಾತುಂಗಾ (ಪಶ್ಚಿಮ) ಮೊಗಲ್ ಲೇನ್‌ನಲ್ಲಿರುವ ಕರ್ನಾಟಕ ಸಂಘ ವಾಚನಾಲಯ ಮತ್ತು ಪುಸ್ತಕ ಭಂಡಾರ. ಇದು ಡಾ. ವಿಶ್ವೇಶ್ವರಯ್ಯ ಸಭಾಂಗಣ ಕಟ್ಟಡದಲ್ಲಿದೆ. ಈ ಸಭಾಂಗಣ ಕನ್ನಡಿಗರ ಸಾಂಸ್ಕೃತಿಕ, ಸಾಹಿತ್ಯಿಕ ಚಟುವಟಿಕೆಗಳ ಒಂದು ತಾಣ. ಉಡುಪಿ ಸಾಂಸ್ಕೃತಿಕ ಸಾಹಿತ್ಯಿಕ ವಲಯಕ್ಕೆ ಕು.ಶಿ. ಹರಿದಾಸ ಭಟ್ಟರು ಹೇಗೆ ಚಿರಪರಿಚಿತ ವ್ಯಕ್ತಿಯೋ ಹಾಗೆಯೇ ನಮ್ಮ ವ್ಯಾಸರಾಯ ಬಲ್ಲಾಳರು ಮುಂಬಯಿಯ ಸಾಹಿತ್ಯಿಕ ಸಾಂಸ್ಕೃತಿಕ ವಲಯದಲ್ಲಿ ಎದ್ದು ತೋರುವ ವ್ಯಕ್ತಿ, ಅವರು ಸಾಹಿತ್ಯಿಕ ಪ್ರಪಂಚದಲ್ಲಿ ತಾನು ಬೆಳೆಯುತ್ತಿದ್ದಂತೆ ಇತರರಿಗೂ ಬೆಳೆಯುವ ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದರು; ಇದು ಅವರ ದೊಡ್ಡ ಗುಣ.

ಸರ್ವಸಾಮಾನ್ಯವಾಗಿ ಸೃಷ್ಟಿಶೀಲ ಬರಹಗಾರನು ತನ್ನ ಸಾಹಿತ್ಯ ಸಾಹಚರ್ಯದ ಮೊದಲ ಘಟ್ಟದಲ್ಲಿ ಪತ್ರಿಕೋದ್ಯಮಿಯಾಗಬೇಕೆಂದು ಹಾರೈಸುತ್ತಾನೆ. ಮುಂಬಯಿ ನಗರ, ಉಪನಗರಗಳಲ್ಲಿ ಹರಿದುಹಂಚಿ ಹೋಗಿದ್ದ ತುಳುವ-ಕನ್ನಡಿಗರ ಕನ್ನಡದಲ್ಲಿ ಅಭಿಮಾನವನ್ನು ಹುಟ್ಟುಹಾಕಲು, ಜನಜಾಗೃತಿಯನ್ನುಂಟು ಮಾಡಲು ಒಂದು ಸಶಕ್ತ ಮಾಧ್ಯಮ. ಆ ಕಾಲದಲ್ಲಿ ಅನಿವಾರ್ಯವಾಗಿತ್ತು. ಈ ಲೇಖಕ ತುಳುವ ಕನ್ನಡಿಗ ಎಂದು ಒತ್ತಿ ಹೇಳಲು ಮುಖ್ಯ ಕಾರಣ, ಕನ್ನಡ ಏನಾದರೂ ಉಳಿದದಿದ್ದರೆ, ಅದು ರಾತ್ರಿ ಶಾಲೆಯಲ್ಲಿ ಕಲಿಯುತ್ತಿದ್ದ ಕರಾವಳಿ ಜಿಲ್ಲೆಯಿಂದ ಹೊಟ್ಟೆಪಾಡಿಗಾಗಿ ಮುಂಬಯಿಗೆ ಬಂದ ಬಡಮಕ್ಕಳಿಂದ ಮತ್ತು ಮುನ್ಸಿಪಾಲಿಟಿ ಶಾಲೆಯಲ್ಲಿ ಕಲಿಯುವ ಕೆಳವರ್ಗಕ್ಕೆ ಸೇರಿದ ಮಕ್ಕಳಿಂದಲೇ ಹೊರತು ಮಧ್ಯಮ ವರ್ಗ, ಶ್ರೀಮಂತ ವರ್ಗದ ಮಕ್ಕಳಿಂದಲ್ಲ, ಇಂದು ರಾತ್ರಿ ಶಾಲೆಗಳು, ಮುನ್ಸಿಪಾಲಿಟಿ ಶಾಲೆಗಳು ಬಿಕೋ ಅನ್ನುತ್ತಿವೆ. ಇರಲಿ; ಆ ಮಾತು ಬೇರೆ.

ವ್ಯಾಸರಾಯ ಬಲ್ಲಾಳರು, ಹುಚ್ಚುಮನಸ್ಸಿನ ಹತ್ತು ಮುಖಗಳನ್ನು ಹೊತ್ತುಕೊಂಡು ಸಮಾನಮನಸ್ಕರ ಸಹಕಾರದಿಂದ 'ನುಡಿ' ಎನ್ನುವ ಕನ್ನಡ ಸಾಪ್ತಾಹಿಕವನ್ನು 1947 ರಲ್ಲಿ ಹುಟ್ಟುಹಾಕಿದರು. ಈ ಪತ್ರಿಕೆಗೆ ಖ್ಯಾತ ಪತ್ರಕರ್ತ ಉಡುಪಿಯವರೇ ಆದ ಎಂ.ವಿ. ಕಾಮತ್ ಬರೆಯುತ್ತಿದ್ದರು. ಅಂತೆಯೇ ವಿದ್ವಾನ್ ರಾಮಚಂದ್ರ ಉಚ್ಚಿಲ, ಡಾ. ಶ್ರೀನಿವಾಸ ಹಾವನೂರ, ಅದೇ ರೀತಿ ಕರ್ನಾಟಕ ರಾಜ್ಯ ಉದಯವಾಗದೆ ಕನ್ನಡದಲ್ಲಿ ಬರೆಯಲಾರೆನೆಂದು ದೀಕ್ಷೆ ತೊಟ್ಟ ಕೃಷ್ಣಕುಮಾರ ಕಲ್ಲೂರರ ಲೇಖನಗಳನ್ನು ಬರೆದು ಕನ್ನಡದ ಜನಮಾನಸದಲ್ಲಿ ಕನ್ನಡ ಬಗ್ಗೆ ಅಭಿಮಾನ ಹುಟ್ಟಲು ಅಹರ್ನಿಷಿ

ರೆಡ್ಡಿಗಳು ಸಂಚು ರೂಪಿಸಿದರು

ಆಟದ ಎಲ್ಲನ್ನನ ಆಟ ನಡೀತಾ ಇದ್ದದ್ದು ಮಾದಿಗರ ಹೊಲೆಯರ ಹಟ್ಟಿಗಳಲ್ಲಿ ಮಾತ್ರ. ಅದೇನೂ ದೊಡ್ಡ ಸಮಸ್ಯೆ ಅಲ್ಲ. ಅವರನ್ನ ಹೇಗಿದ್ದರೂ ಊರಿನವರು ಕರೆದು ಆಟ ಆಡಿ ಅನ್ನೋದಿಲ್ಲ. ಆದರೆ ಈ ಎಲ್ಲನ್ನನ ಹೆಸರು ಮಾತ್ರ ಆ ಊರು, ಈ ಊರು ದಾಟಿ ಎಲ್ಲಾ ಜಾತಿಗಳನ್ನೂ ದಾಟಿ ಹರಡೋದಕ್ಕೆ ಶುರುವಾಯಿತು. ಎನ್ನೆಲದಿನ್ನೆಯ ಚಿಕ್ಕ ಶ್ಯಾನುಭೋಗ, ಅಚ್ಚಿರೆಡ್ಡಿ ಮುಂತಾದ ಜಾತ್ಯಹಂಕಾರಿಗಳಿಗೆ ಹೊಲೆಮಾದಿಗರ ಈ ಹೊಸ ಅವತಾರವನ್ನ ಸಹಿಸಲಾಗಲಿಲ್ಲ. ತಮ್ಮ ಸಮ ನಿಲ್ಲಲು ಯತ್ನಿಸುವ ಮಾದಿಗರಿಗೆ ಸರಿಯಾದ ಪಾಠ ಕಲಿಸಬೇಕು ಅಂತ ಅವರಿಗೆ ಅನ್ನಿಸಿದ್ದು ಮತ್ತು ಆ ಪ್ರಕಾರ ಅವರು ನಡಕೊಂಡಿದ್ದು ಮುಂದಿನ ಕಥೆ.



ಒಂದು ಕಡೆ ಈ ನಾಟಕ, ಎಲ್ಲನ್ನ, ನಾಗನ್ನ ಇವರ ಹೆಸರುಗಳು ಜನರ ನಾಲಿಗೆ ಮೇಲೆ ಆಡ್ತಾ ಇದ್ದರೆ, ಮತ್ತೊಂದು ಕಡೆ ಮೇಲ್ಜಾತಿಗಳಲ್ಲಿ ಒಂದು ವಿಚಿತ್ರ ಸನ್ನಿವೇಶ ಸೃಷ್ಟಿಯಾಯಿತು. ಎಲ್ಲಾ ಹಳ್ಳಿಗಳ ದೊಡ್ಡ ಮನುಷ್ಯರಿಗೆ ಈ ನಾಟಕದ ವಿಷಯ ನುಂಗಲಾರದ ತುತ್ತಾಯಿತು. ಎನ್ನೆಲದಿನ್ನೆಯವರಿಗಂತೂ ತಮ್ಮ ತಲೆ ಹೋದಷ್ಟು ಅವಮಾನ ಅನ್ನಿಸಿತು.

ಚಂದ್ರಪ್ಪ ಹೇಳಿದ ಹಾಗೆ ವಿಷಯವೇನೋ ತುಂಬಾ ಸಣ್ಣದೇ. ಆದರೆ ತುಂಬಾ ಆಳ. ಅದನ್ನು ಮುಚ್ಚಬೇಕಾದರೆ ಬೇಕಾದ ಮಣ್ಣು ಅಷ್ಟಿಷ್ಟಲ್ಲ.

ಆಟದ ಎಲ್ಲನ್ನನ ಆಟ ನಡೀತಾ ಇದ್ದದ್ದು ಮಾದಿಗರ ಹೊಲೆಯರ ಹಟ್ಟಿಗಳಲ್ಲಿ ಮಾತ್ರ. ಅದೇನೂ ದೊಡ್ಡ ಸಮಸ್ಯೆ ಅಲ್ಲ, ಅವರನ್ನ ಹೇಗಿದ್ದರೂ ಊರಿನವರು ಕರೆದು ಆಟ ಆಡಿ ಅನ್ನೋದಿಲ್ಲ, ಆದರೆ ಈ ಎಲ್ಲನ್ನನ ಹೆಸರು ಮಾತ್ರ ಆ ಊರು, ಈ ಊರು ದಾಟಿ ಎಲ್ಲಾ ಜಾತಿಗಳನ್ನೂ ದಾಟಿ ಹರಡೋದಕ್ಕೆ ಶುರುವಾಯಿತು. ಒಂದು ಊರಿನ ಅಗಸರು, ನಾಯಿಂದರು, ಮತ್ತಿನ್ನೂ ಇಂಥದೇ ಜಾತಿಗಳವರು ಯಾವುದೋ ಕೆಲಸದ ಮೇಲೆ ಹೋದಂತೆ ನಟಿಸಿ ಆಟ ನಡೀತಿದ್ದ ಊರಿಗೆ ಹೋಗಿ ಎಲ್ಲನ್ನನ ಅಭಿನಯ ನೋಡಿಕೊಂಡು ಬರ್‍ತಾ ಇದ್ದರು. ಸ್ವಲ್ಪ ದಿನ ಆದಮೇಲೆ ಅಂಥಾ ನೆಪಗಳಿಗಾಗಿಯೇ ಕಾಯಲಿಲ್ಲ ಅವರು. ಆಟ ನೋಡಬೇಕೆಂದೇ ಹೋಗಿ ನೋಡಿಕೊಂಡು ಬರಲಾರಂಭಿಸಿದರು. ಕೊನೆಗೆ ಎನ್ನೆಲದಿನ್ನೆಗೇ ಹೋಗಿ ಆ ಊರಿನ ಹಟ್ಟಿಯಲ್ಲಿ ಆಟ ಕೋಡೋವರೆಗೂ ಬಂತು. ಅದೂ ದೊಡ್ಡ ಸಮಸ್ಯೆ ಏನಲ್ಲ. ರೆಡ್ಡಿಗಳು ಮಾತ್ರ ಅಲ್ಲಾಡಲಿಲ್ಲ, ಅಚ್ಚಿರೆಡ್ಡಿಗೆ ಅಷ್ಟು ಸಾಕು.

ಸಮಸ್ಯೆ ಬಂದಿದ್ದೆಲ್ಲಾ ಬೇರೆ ವಿಷಯದಲ್ಲಿ, ಮಾಮೂಲಾಗಿ ನಾಟಕ ಶುರು ಆಗೋ ಮೊದಲು 'ಶ್ಯಾನುಭೋಗರು ಬಂದರೇ! ದೊಡ್ಡ ರೆಡ್ಡಿಗಳು ಬಂದರೇ!' ಅಂತ ಸೂತ್ರಧಾರ ಕೇಳೋದು ಪರಿಪಾಠ. ಅವರೆಲ್ಲಾ ಬಂದ ಮೇಲೇನೇ ಆಟ ಶುರುವಾಗುತ್ತಿತ್ತು, ಒಂದೊಂದು ಸಲ ಊರಿನ ರೆಡ್ಡಿ ತಡವಾಗಿ ಬಂದು, ಆಟ ಮತ್ತೆ ಮೊದಲಿನಿಂದ ಆಡಿ ಅಂದರೆ ಆಡ್ತಾ ಇದ್ದದ್ದೂ ಉಂಟು. ಆದರೆ, ಎಲ್ಲನ್ನನ ಆಟದಲ್ಲಿನ ಸೂತ್ರಧಾರ ನಾಗನ್ನ 'ಘನತೆವೆತ್ತ ಶ್ಯಾನುಭೋಗರು ಬಂದರೇನೋ?' ಅಂತ ಕೇಳ್ತಿಲ್ಲ, ಬದಲಾಗಿ 'ಘನತೆವೆತ್ತ ಮಾದಿಗ ಹಿರಿಯ ಮತ್ತು ಅಷ್ಟೇ ಘನತೆವೆತ್ತ ಹೊಲೆಯ ಹಿರಿಯ ಬಂದಿದ್ದಾರೇನು' ಅಂತ ಕೇಳ್ತಿದಾನೆ. ಆ ಇಬ್ಬರೂ ಊರಿನ ದೊಡ್ಡ ಮನುಷ್ಯರ ಥರ ಠೀವಿಯಿಂದ ಬಂದು ಕೂತುಕೊಳ್ತಿದ್ದಾರೆ. ಹಳ್ಳಿಯ ರೆಡ್ಡಿಗಳಿಗೆ ಮತ್ತು ಕೆಲವರು ದೊಡ್ಡ ಮನುಷ್ಯರಿಗೆ ತಲೆ ತೆಗೆದಷ್ಟು ಅವಮಾನ ಮಾಡಿದ್ದು ಇದೇ ವಿಷಯ. ಎನ್ನೆಲದಿನ್ನೆಯ ಚಿಕ್ಕ ಶ್ಯಾನುಭೋಗ, ಅಚ್ಚಿರೆಡ್ಡಿ ಮುಂತಾದ ಜಾತ್ಯಹಂಕಾರಿಗಳಿಗೆ ಹೊಲೆಮಾದಿಗರ ಈ ಹೊಸ ಅವತಾರವನ್ನ ಸಹಿಸಲಾಗಲಿಲ್ಲ. ತಮ್ಮ ಸಮ ನಿಲ್ಲಲು ಯತ್ನಿಸುವ ಮಾದಿಗರಿಗೆ ಸರಿಯಾದ ಪಾಠ ಕಲಿಸಬೇಕು ಅಂತ ಅವರಿಗೆ ಅನ್ನಿಸಿದ್ದು ಮತ್ತು ಆ ಪ್ರಕಾರ ಅವರು ನಡಕೊಂಡಿದ್ದು ಮುಂದಿನ ಕಥೆ.

ಅದಕ್ಕೆ ಬೇಕಾದ ಸಿದ್ಧತೆಗಳು ದಿಬ್ಬಲ ಮಿಟ್ಟದಲ್ಲಿ ನಡೆದಿದ್ದವು. ಚಿಂತಲಗುಂಟದಿಂದ ಐದು ಮೈಲಿ ದೂರವಿದ್ದ ಈ ಊರು ಅಚ್ಚಿರೆಡ್ಡಿ ಮಾವನ ಮನೆ. ಆ ಮಾವನಾದ ಬುಕ್ಕರೆಡ್ಡಿ ಆ ಪ್ರಾಂತ್ಯದಲ್ಲೇ ಅತ್ಯಂತ ಮೂರ್ಖ ಅಂತ ಹೆಸರಾಗಿದ್ದ. ಹೆಂಡತಿ ಜೊತೆ ಜಗಳವಾಡಿ ಅವಳನ್ನ ಈಳಿಗೆ ಮಣೆಯಿಂದ ಹೊಡೆದಿದ್ದಕ್ಕೆ ಅವಳು ಸತ್ತಳು. ಅವಳ ಅಪ್ಪ ಅಮ್ಮಂಗೂ ಹೇಳದೆ ಅವಳ ಹೆಣ ಸುಟ್ಟುಬಿಟ್ಟ. ಅಗಸರ ಮಂಗಯ್ಯನ ತುಂಡು ಭೂಮಿ ತನ್ನ ಭೂಮಿಯ ಪಕ್ಕ ಇದ್ದು ಅದನ್ನ ಒಳಗೆ ಹಾಕ್ಕೊಳ್ಳೋವರೆಗೂ ನಿದ್ದೆ ಮಾಡಲಿಲ್ಲ, ಮಂಗಯ್ಯ ಹಾಳಾಗಿ ಹೋದ.

ದೊಡ್ಡ ಶ್ಯಾನುಭೋಗ ಬದುಕಿದ್ದಾಗ ಅವನ ಮನೆಗೆ ಅಚ್ಚಿರೆಡ್ಡಿ ಹೋಗಿ ಬರ್ತಿದ್ದ. ಆಗಲೇ ಅವನನ್ನು ಬುಕ್ಕರೆಡ್ಡಿ ನೋಡಿದ್ದು. ಅಚ್ಚಿರೆಡ್ಡಿಗೆ ತನ್ನ ಮಗಳನ್ನ, ಅವಳ ಜೊತೆ ಐದೆಕರೆ ಖುಷ್ಕಿ, ಎರಡೆಕರೆ ತರಿ ಭೂಮೀನು ಕೊಟ್ಟ. ಒಂದು ಸಲ ಮಗಳನ್ನ ನೋಡೋಕೆ ಎನ್ನೆಲದಿನ್ನೆಗೆ ಬಂದಾಗ ಮರಿ ಶ್ಯಾನುಭೋಗ ಈ ಆಟದ ಎಲ್ಲನ್ನ, ನಾಗನ್ನ ಇಬ್ಬರ ಬಗ್ಗೆ ಹೇಳಿದ್ದ. ತಾನಾಗಿದ್ದರೆ ಇಷ್ಟು ಹೊತ್ತಿಗೆ ಇಬ್ಬರನ್ನೂ ಅಡ್ಡಡ್ಡ ಕಡಿದು ಬಿಡ್ತಿದ್ದೆ ಅಂದುಕೊಂಡ ಬುಕ್ಕರೆಡ್ಡಿ. ತನ್ನ ಊರಿನಲ್ಲಿ ಆಟ ನಡೆಯುತ್ತೆ ಅಂತ ಗೊತ್ತಾದಾಗ ಅಳಿಯನಿಗೆ ವಿಷಯ ತಿಳಿಸಿ ತಾನು ಏನು ಮಾಡಬೇಕು ಹೇಳಿಕಳಿಸು ಅಂತ ಕೇಳಿದ್ದ. ಮಾವನಿಗೆ ತಾನು ಹೇಳೋದೇನಿದೆ, ಅವರ ಇಷ್ಟಬಂದ ಹಾಗೆ ಮಾಡಲಿ ಅಂತ ಅಳಿಯ ಬಂದ ಆಳಿಗೆ ಹೇಳಿ ಅವನನ್ನು ಹಿಂದಕ್ಕೆ ಕಳಿಸಿದ.

ಆಟ ನಡೆಯೋ ಹಿಂದಿನ ದಿನ ಬುಕ್ಕರೆಡ್ಡಿ ತನ್ನ

ಸೇವೆಸಲ್ಲಿಸುತ್ತಿದ್ದರು. ಕೃಷ್ಣಕುಮಾರಿ ಕಲ್ಲೂರರವರು ಒಂದು ತಾಂತ್ರಿಕ ವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿದ್ದರು. ಈ ಲೇಖಕನು ಕಂಡ ಅಪರೂಪದ ವ್ಯಕ್ತಿಗಳಲ್ಲಿ ಅವರೂ ಒಬ್ಬರು. 'ನುಡಿ' ಪತ್ರಿಕೆ ಆರ್ಥಿಕ ಮುಗ್ಗಟ್ಟಿನಿಂದಾಗಿ 1950 ರಲ್ಲಿ ನಿಂತು ಹೋಯಿತು. ನುಡಿಯನ್ನು ಉಳಿಸುವ ಅರ್ಹತೆ ಕನ್ನಡಿಗರಿಗೆ ಇಲ್ಲವಾಯಿತು.

ಅನಂತರ ಬಲ್ಲಾಳರು ತಮ್ಮ ಲೇಖನಗಳನ್ನು ಪ್ರಕಟ ಮಾಡುತ್ತಿದ್ದ ಪತ್ರಿಕೆ 'ತಾಯಿನುಡಿ.' ಇದರ ಸಂಪಾದಕರು ದತ್ತಾತ್ರೇಯ ಮೆಂಡನ್. 'ನುಡಿ' ನೇಪಥ್ಯಕ್ಕೆ ಸರಿದ ಮೇಲೆ ಮತ್ತೆ ಕನ್ನಡಿಗರ ಆಶೋತ್ತರಗಳನ್ನು ಪ್ರತಿಬಿಂಬಿಸುವ ಹೊಣೆಯನ್ನು 'ತಾಯಿನುಡಿ' ವಹಿಸಿಕೊಂಡಿತು. ಬಲ್ಲಾಳರು ಈ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ಟ್ರೆಡಲ್ ಪ್ರಿಂಟಿಂಗ್ ಮೆಷಿನ್ ಅಂತೆಯೇ ಹ್ಯಾಂಡ್ ಕಂಪೋಸ್‌ನಿಂದ ಈ ಪತ್ರಿಕೆ ಪ್ರಕಟಗೊಳ್ಳುತ್ತಿತ್ತು. ಬಲ್ಲಾಳರು ಆಫೀಸ್ ಬಿಟ್ಟ ತಕ್ಷಣ ನೇರವಾಗಿ ಆ ಪತ್ರಿಕೆಯ ಕಾರ್ಯಾಲಯಕ್ಕೆ ಬಂದು ಪತ್ರಿಕೆಯ ಗುಣಮಟ್ಟದ ಬಗ್ಗೆ ದತ್ತಾತ್ರೇಯ ಮೆಂಡನ್ ಸಂಗಡ ಸಮಾಲೋಚನೆ ನಡೆಸಿದ ನಂತರವೇ ವಿಟಿ ರೈಲು ನಿಲ್ದಾಣದಲ್ಲಿ ರೈಲು ಹತ್ತಿ ವಡಾಳದಲ್ಲಿಯ ಅವರ ಮನೆಗೆ ರಾತ್ರಿ ತಲುಪುತ್ತಿದ್ದರು. ಅವರ ಒಡನಾಟದಲ್ಲಿ ಅವರಿಗೆ ಅತಿ ಹತ್ತಿರವಾದವರು ಕನ್ನಡದ ಕಟ್ಟಾಭಿಮಾನಿ ಎ.ಎಸ್.ಕೆ. ರಾವ್ ಮತ್ತು ಬಿ.ಎ. ಸನದಿ. ರಾವ್ ಆ ಕಾಲದಲ್ಲಿ ಅಪರೂಪದ ಸಂಘಟಕರಾಗಿದ್ದರು. ಅಂತೆಯೇ ಈ ಲೇಖಕ ಮತ್ತು ಅರವಿಂದ ಕುಂದರ್ ಹುಟ್ಟು ಹಾಕಿದ 'ಪ್ರೇಕ್ಷಕ' ಮಾಸಪತ್ರಿಕೆಗೂ ಆಗಾಗ ಲೇಖನಗಳನ್ನು ಬಲ್ಲಾಳರು ಒದಗಿಸುತ್ತಿದ್ದರು. 'ತಾಯಿ ನುಡಿ'ಯೂ ಈಗ ಇಲ್ಲವಾಗಿದೆ. ತಾಯಿ ನುಡಿಗಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ ದತ್ತಾತ್ರೇಯ ಮೆಂಡನ್‌ರೂ ಇಲ್ಲವಾಗಿದ್ದಾರೆ. ಅಂತೆಯೇ ನಾವು ಹುಟ್ಟುಹಾಕಿದ 'ಪ್ರೇಕ್ಷಕ' ಮಾಸ ಪತ್ರಿಕೆಯೂ ಕಾಲಗರ್ಭಕ್ಕೆ ಸೇರಿಹೋಗಿದೆ.

ಇನ್ನು ಬಲ್ಲಾಳರ ಸಾಹಿತ್ಯದ ಕೃಷಿಯ ಬಗ್ಗೆ ಹೇಳುವುದಿದ್ದರೆ ಅವರೊಬ್ಬ ಶ್ರೇಷ್ಠ ಮಟ್ಟದ ಕಥೆಗಾರ, ಕಾದಂಬರಿಕಾರ. ಅವರ ಕಥಾಸಂಕಲನ 'ಬದುಕಿನ ಆದರ್ಶ' 1950 ರಲ್ಲಿ ಪ್ರಕಟವಾಯಿತು. ಎರಡನೆಯ ಕಥಾಸಂಕಲನ 'ಕಾಡುಮಲ್ಲಿಗೆ'. ಅನಂತರ 'ಮಂಜರಿ' ಎನ್ನುವ ಕಥೆಗಳ ಸಂಕಲನ. 'ತ್ರಿಕಾಲ ಸಂಪಿಗೆ ಹೂ' ಇತ್ಯಾದಿ ಕಥಾಸಂಕಲನಗಳು ಓದುಗರ ಪ್ರಶಂಸೆಗೆ ಪಾತ್ರವಾದವು.

ಕರ್ನಾಟಕದಲ್ಲಿ ಕನ್ನಡದ ಪ್ರಗತಿಶೀಲ ಕಾದಂಬರಿಗಳಿಂದ ಕನ್ನಡಿಗರ ಮನಸೂರೆಗೊಂಡವರಲ್ಲಿ ಅ.ನ.ಕೃ. ತರಾಸು, ಬಸವರಾಜ ಕಟ್ಟೀಮನಿ, ಕೃಷ್ಣಮೂರ್ತಿ ಪುರಾಣಿಕ, ಚದುರಂಗರಂತೆ ಮುಂಬಯಿ ಕನ್ನಡಿಗರ ಮನಸೂರೆಗೊಂಡವರಲ್ಲಿ ವ್ಯಾಸರಾಯ ಬಲ್ಲಾಳರೂ ಒಬ್ಬರು. ಬಲ್ಲಾಳರ ಅನುರಕ್ತೆ, ಹೇಮಂತಗಾನ, ವಾತ್ಸಲ್ಯ-ಪಥ, ಉತ್ತರಾಯಣ, ಆಕಾಶಕ್ಕೊಂದು ಕಂದೀಲು, ಹೆಜ್ಜೆ ಮತ್ತು ಬಂಡಾಯ ಮುಂಬಯಿ ಕನ್ನಡಿಗರು ಬಹಳಷ್ಟು ಮೆಚ್ಚಿಕೊಂಡ ಕಾದಂಬರಿಗಳು. ಬಲ್ಲಾಳರಿಗೆ ಸಂದ ಪ್ರಶಸ್ತಿಗಳು, ಗೌರವಗಳು ಹತ್ತು ಹಲವು. 1986 ರಲ್ಲಿ 'ಬಂಡಾಯ' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ತಮ್ಮ ಹೆಚ್ಚಿನ ಕಾದಂಬರಿಗಳಲ್ಲಿ ಕೌಟುಂಬಿಕ ಜೀವನವನ್ನೇ ವಸ್ತುವಾಗಿ ಆರಿಸಿಕೊಂಡ ಬಲ್ಲಾಳರ 'ಬಂಡಾಯ' ಕಾದಂಬರಿಯಲ್ಲಿ ಮುಂಬಯಿ ಮಹಾನಗರದಲ್ಲಿ ಮಿಲ್ಲು, ಕಾರ್ಖಾನೆಗಳಿಗೆ ದುಡಿಯುವ ಕಾರ್ಮಿಕರ ಬದುಕು ಮತ್ತು ಅವರಿಗೆ ಸಿಗಬೇಕಾದ ನ್ಯಾಯದ ಬಗ್ಗೆ ಹೋರಾಟ, ಸಂಘರ್ಷಗಳನ್ನು ವಸ್ತುನಿಷ್ಠವಾಗಿ ಚಿತ್ರಿಸಿದ್ದಾರೆ. ಈ ಕಾದಂಬರಿಯು ಇತರ ಕಾದಂಬರಿಗಳಿಗಿಂತ ಕಥಾವಸ್ತುವಿನಲ್ಲಿ ಭಿನ್ನವಾಗಿದ್ದು ಮುಂಬಯಿ ನಗರದ ಸಂಕೀರ್ಣ ಬದುಕಿನ ಮತ್ತೊಂದು ಚಿತ್ರಣವನ್ನು ಇದು ಯಶಸ್ವಿಯಾಗಿ ನೀಡುತ್ತದೆ.

ಈ ಲೇಖಕನು ತಿಳಿದಂತೆ ಬಲ್ಲಾಳರು ಯಾರಲ್ಲಿಯೂ ವೈಮನಸ್ಸನ್ನು ಕಟ್ಟಿಕೊಂಡಿರಲಿಲ್ಲ, ಅನ್ಯಾಯವೆಂದು ಗೊತ್ತಿದ್ದೂ ಅವರು ಅದನ್ನು ಮಾತಿನಲ್ಲಿ ಪ್ರತಿಭಟಿಸುತ್ತಿದ್ದಿಲ್ಲ, ತಾನು ವಿವಾದಾತ್ಮಕ ವ್ಯಕ್ತಿಯಾಗದೆ ಸಭ್ಯನಾಗಿ, ಸಜ್ಜನನಾಗಿ ಇರಬೇಕೆಂದು ಅವರು ಹಾರೈಸುತ್ತಿದ್ದರು. ಪ್ರತಿಭಟಿಸುವ ಪ್ರಸಂಗ ಬಂದಾಗ ಬಲ್ಲಾಳರು ಮೌನ ವ್ರತವನ್ನು ಆಚರಿಸುತ್ತಿದ್ದರು. ಇದು ಸಜ್ಜನಿಕೆಯೋ ಅಥವಾ ಬರಹಗಾರನ ಮೃದುಹೃದಯದ ದೌರ್ಬಲ್ಯವೋ ತಿಳಿಯುವುದು ದುಸ್ತರ. ಈ ಕಾರಣಕ್ಕಾಗಿ ಮುಂಬಯಿಯ ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಎಡಪಂಥೀಯ ಅಥವಾ ಬಲಪಂಥೀಯರೆನ್ನುವುದನ್ನು ಗಣನೆಗೆ ತಾರದೆ ಅವರು ಹೋಗುತ್ತಿದ್ದರು. ಪ್ರಾಯಶಃ ಎಲ್ಲರನ್ನು ಮೆಚ್ಚಿಸಬೇಕೆನ್ನುವ ಆಂತರಿಕ ತುಡಿತ ಆ ನಿಲುವಿಗೆ ಅವರನ್ನು ತಲುಪಿಸಿರಬಹುದು. ಇಂತಹ ಇಬ್ಬಂದಿತನಕ್ಕೆ ಅವರು ಕಡಿವಾಣ ಹಾಕಬೇಕಿತ್ತು.

1984 ರಲ್ಲಿ ತಮ್ಮ ಉದ್ಯೋಗದಿಂದ ನಿವೃತ್ತಿಯಾದ ಅನಂತರ ಬಲ್ಲಾಳರು ತನ್ನ ಹುಟ್ಟೂರಿಗೆ ಬರಲಿದ್ದಾರೆಂದು ಅವರ ಅಭಿಮಾನಿಗಳು ನಿರೀಕ್ಷಿಸಿದ್ದರು. ಆದರೆ ಅವರು ಮತ್ತೆ ಆರಿಸಿಕೊಂಡದ್ದು ಮುಂಬಯಿಗೆ ಪೈಪೋಟಿ ನೀಡುವ ಬೆಂಗಳೂರು ಮಹಾನಗರವನ್ನು. 1995 ರಂದು ಅವರು ಮುಂಬಯಿಗೆ ವಿದಾಯವನ್ನು ಕೋರಿ, ಬೆಂಗಳೂರಿನಲ್ಲಿಯೂ ತನ್ನ ಸಾಹಿತ್ಯಿಕ ಸಾಹಚರ್ಯವನ್ನು ಮೊನ್ನೆಮೊನ್ನೆ ನಿಧನರಾಗುವವರೆಗೂ ಮುಂದುವರಿಸಿದರು.

ವ್ಯಾಸರಾಯ ಬಲ್ಲಾಳರಿಗೆ ತನ್ನ ಹುಟ್ಟೂರಿನಲ್ಲಿ ಕಳೆದ ಡಿಸೆಂಬರ್‌ನಲ್ಲಿ ಜರುಗಿದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಬೇಕೆನ್ನುವ ಮಹದಾಸೆ ಇತ್ತು. ಸ್ವಾಗತ ಸಮಿತಿ ಪ್ರಕಟಿಸಿದ ಪ್ರಥಮ ಬುಲೆಟಿನ್‌ನಲ್ಲಿ ವ್ಯಾಸರಾಯ ಬಲ್ಲಾಳರು ಅಧ್ಯಕ್ಷರೆಂದು ಪ್ರಕಟವಾಗಿತ್ತು. ಉಡುಪಿಯ ಅವರ ಅಭಿಮಾನಿಗಳು ಕುಣಿದಾಡಿದರು.

ಅಧ್ಯಕ್ಷ ಸ್ಥಾನ ತಪ್ಪಿಹೋದ ಕಾರಣ ಬಲ್ಲಾಳರು ಕೊರಗಿದರಂತೆ. ಕಣ್ಣೀರು ಮಿಡಿದರಂತೆ. ಇಷ್ಟೆಲ್ಲ ಸಾಧನೆ ಮಾಡಿದ ವ್ಯಕ್ತಿ ಅಧ್ಯಕ್ಷಸ್ಥಾನ ತಪ್ಪಿಹೋದ ಕಾರಣಕ್ಕಾಗಿ ಮರುಗುವುದು ಬಾಲಿಶವೆಂದು ಹೇಳದೆ ಬೇರೆ ದಾರಿಯಿಲ್ಲ. ಎಂತಿದ್ದರೂ 85 ವರ್ಷಗಳ ಕಾಲ ತುಂಬು ಜೀವನವನ್ನು ಬಾಳಿದ ಈ ಹಿರಿಯ ಚೇತನಕ್ಕೆ ನುಡಿ ನಮನಗಳು.

■ ಗೋಪಾಲ ಬಿ. ಶೆಟ್ಟಿ, ಉಡುಪಿ

ಅಮಾವಾಸೆಯ ಗೋವು


ಹೊತ್ತು
ಸತ್ತ ಗೋವಿನ ಹೆಣ ಹೊತ್ತ ನಮ್ಮಿಬ್ಬರನ್ನ
ಊರ ಹೊರಹಾಕಿದ ವೈದಿಕವೆ

ಈ ಹೊತ್ತು
ಗೋವು ಪವಿತ್ರ ಅದರ ಮೂತ್ರ ಪೌಷ್ಟಿಕಾಂಶ
ಎನ್ನುವ ವೈದಿಕವೇ
ತಿನ್ನುತ್ತಿದ್ದೇನೆ ಯಾಕೆಂದರೆ
ಕೋಳಿ ಎಪ್ಪತ್ತು ಹಂದಿ ಅರ್ವತ್ತು
ಕುರಿ ನೂರ ನಲ್ವತ್ತು
ಮಾಂಸವೂ ಪವಿತ್ರವೆಂದು
ಈ ದರದ ನಾಡಿನಲ್ಲಿ


ನಿಮಗೆ, ಹೊಗೆ ಯಜ್ಞಗಳಿಗಾಗಿ ಕುಂಕುಮ
ಭಂಡಾರ
ತೀರ್ಥಗಳಿಂದಾಗಿ ಶೀತ
ನನ್ನ ಮಗ ಪವಿತ್ರವನ್ನ ತಿಂದವ
ಗೂಳಿಯಂತೆ ಕೊಚ್ಚೆ ಚರಂಡಿಯ ಹೇಲು ಸಾಲಿನಲಿ
ಬೆಳೆದವ
ಹೂಂಕರಿಸುತ್ತಾನೆ ಬಡಿ ಬಡಿದು ಗೋ ಚರ್ಮದ
ತಮಟೆಯ
ಸದ್ದಿನ ಹಾಡಿನಲ್ಲಿ ನೆನೆಯುತ್ತಾನೆ
ಆಕೆಯನ್ನ
ಚರ್ಮ ಹಾಲು ಕೊಟ್ಟವಳನ್ನ
ಹುಳಿ ಹಿಂಡಿದವರ
ಬೆಣ್ಣೆ ಕರಗಿಸಿ ಎಣ್ಣೆದೀಪ ಹಚ್ಚುತ್ತಾನೆ
ಅಮಾಸ

ತಂದೆ, ನಾನೆಂದೂ ಕಲಿಸಲಿಲ್ಲ ಈತನಿಗೆ
ಆರ್ಟ್ ಆಫ್ ಲಿವಿಂಗ್‌ನ ಪವಿತ್ರ ಅಪವಿತ್ರ
ಏಕೆಂದರೆ ಪವಿತ್ರ ಎಂಬುವುದರಲ್ಲಿ
ಜೀವವಿಲ್ಲ
ಜೀವವೇ ಪವಿತ್ರವೆಂದು ಎಚ್ಚರಿಸಿದ್ದ ಲಂಕೇಶ್

■ ಟಿ.ರಂಗಪ್ಪ ಮಡಿಕೇರಿ



ಜಿ. ಕಲ್ಯಾಣರಾವ್‌ರವರ



ಅನುವಾದ: ಪ್ರೊ. ನಗರಗೆರೆ ರಮೇಶ್

ಆಟ ಆಡಿದ. ಹಟ್ಟಿಯ ಹಿರಿಯರನ್ನೆಲ್ಲಾ ಕರೆದು ಎಲ್ಲನ್ನ ಆಟ ಆಡಲೇಬಾರದು, ಆಡಿದರೂ ಹೊಲೆ ಮಾದಿಗರನ್ನ ಶ್ಯಾನುಭೋಗರು, ರೆಡ್ಡಿಗಳ ರೀತಿಯಲ್ಲಿ ಕರೆಯಬಾರದು, ಹಾಗೇನಾದರೂ ಆದರೆ ಅವರ ಗುಡಿಸಲುಗಳು ಬೂದಿಯಾಗುತ್ತವೆ ಅಂತ ಹೆದರಿಸಿದ. ಆ ರಾತ್ರಿನೇ ದಿಬ್ಬಲ ಮಿಟ್ಟದ ಹಟ್ಟಿಯಿಂದ ಒಬ್ಬ ಮನುಷ್ಯ ಬಂದು ನಾಗನ್ನನಿಗೆ ಈ ವಿಷಯ ತಿಳಿಸಿದ. ಆಟ ಮುಂದಕ್ಕೆ ಹಾಕೋದೇ ಒಳ್ಳೇದು ಅಂತಾಲೂ ಹೇಳಿದ. ರಂಗಸ್ಥಳ ಮತ್ತೊಂದು ತಿರುವು ತೆಗೆದುಕೊಳ್ಳುತ್ತಿದೆಯೆನಿಸಿತು ನಾಗನ್ನನಿಗೆ.

ಅಲ್ಲಿಯವರೆಗೂ ನಾಗನ್ನನಿಗಾಗಲಿ, ಎಲ್ಲನ್ನನಿಗಾಗಲಿ ಹೊಲೆಮಾದಿಗರಲ್ಲಿ ಜಾತಿ ಮುಖಂಡರನ್ನು ಹಾಗೆ ಸ್ವಾಗತಿಸೋದು ಅಷ್ಟು ವಿಪರೀತಕ್ಕೆ ಹೋಗುತ್ತೆ ಅಂತ ಅನ್ನಿಸಿರಲಿಲ್ಲ. ಆದರೆ ಈಗ ನಾಗನ್ನನಿಗೆ ಚಂದ್ರಪ್ಪ ಹೇಳಿದ ಮಾತು ಮತ್ತೆ ನೆನಪಾಯಿತು. ಅಗೆಯಬೇಕಾದದ್ದು, ಮುಚ್ಚಬೇಕಾದದ್ದು ಇನ್ನೂ ಸಾಕಷ್ಟು ಇದೆ ಅಂತ ಅನ್ನಿಸಿತು. ತನಗೇ ಗೊತ್ತಿಲ್ಲದೆ ತನ್ನ ಜೀವನ ಯಾವುದೋ ದಿಕ್ಕಿಗೆ ತಳ್ಳಲ್ಪಡುತ್ತಾ ಇದೆ ಅಂತ ಅಂದುಕೊಂಡ. ಎಲ್ಲನ್ನನ ಕಡೆ ನೋಡಿದ. ಅದು ಯಾಕೋ, ಎಲ್ಲನ್ನ ಕೂಡಾ ತನ್ನ ಥರಾನೇ ಪ್ರವಾಹದ ಎದುರು ಈಜುವ ಮೀನೇ ಅಂತ ಅನ್ನಿಸಿತು. ಆದರೆ ಆ ವಿಷಯ ಅವನಿಗೆ ಅರ್ಥವಾಗಿರಲಿಲ್ಲ, ಅವನಿಗೆ ಎಲ್ಲ ಹೇಳಬೇಕು ಅಂದುಕೊಂಡ. ಮಾದಿಗರ ಹಟ್ಟಿಯಿಂದ ಹೋಲಯ್ಯನ್ನ ಮತ್ತು ಮಾತಯ್ಯನ ಅಳಿಯ ಮುಸಲಯ್ಯನ್ನ ಕರೆದುಕೊಂಡು ಬರೋದಕ್ಕೆ ಟಿಟ್ಟೋಜನನ್ನು ಕಳಿಸಿ ಎಲ್ಲನ್ನನ ಜೊತೆ ನದಿ ಕಡೆ ಹೊರಟ.

ನದಿ ದಡದ ಮೇಲೆ ಎಲ್ಲರೂ ಕೂತು ನಡೆದಿದ್ದನ್ನೆಲ್ಲಾ ಚರ್ಚೆ ಮಾಡಿದರು. ಟಿಟ್ಟೋಜಿ, ಹೋಲಯ್ಯ ಇಬ್ಬರೂ ಆಟ ನಡೀಲೇಬೇಕು ಅಂದರು. ಮುಸಲಯ್ಯ [illegible] ಅವನ ಸ್ವಭಾವವೇ ಅದು. ಆಟ ಆಡಿದರೆ ಆ ಹಳ್ಳಿಯ [illegible] ಅನ್ನೋದು ಚನ್ನಾಗೇ ಗೊತ್ತಿತ್ತು, ದಿಬ್ಬದಮಿಟ್ಟ [illegible] ಜನರ ಜೊತೆ ಮಾತನಾಡೋದೇ ಒಳ್ಳೇದು [illegible] ಮುಗುಳ್ನಗೆ ಜೊತೆಯಲ್ಲಿ ಆ ನಾಲ್ಕೂ ಜನ [illegible] ಅವರು ನಡೀತಿದ್ದ ಆ ಬೆಳದಿಂಗಳಲ್ಲಿ

ಮಂಜು ಸುರೀತಿದ್ದು ಒಂಥರಾ ಹೊಗೆ ಎಲ್ಲಾ ಕಡೇನೂ ಆವರಿಸಿತ್ತು. ದಿಬ್ಬಲಗುಟ್ಟ ಅಷ್ಟೇನೂ ದೂರ ಇರಲಿಲ್ಲ. ತಿಂಗಳ ಚುಕ್ಕಿ ಮೂಡೋ ಹೊತ್ತಿಗೆ ಹೋಗಿ ಸೇರಬಹುದು.

ಈ ನಾಲ್ಕೂ ಜನ ಹೀಗೆ ಮಾತನಾಡ್ತಾ ಇರಬೇಕಾದರೆ, ಎನ್ನೆಲದಿನ್ನೆ ಊರಿನಲ್ಲಿ ಮೇಲ್ಜಾತಿ ಜನರೆಲ್ಲ ಚಾವಡಿಯಲ್ಲಿ ಸೇರಿ ಇದೇ ವಿಷಯದ ಬಗ್ಗೆ ಚರ್ಚೆ ನಡೆಸ್ತಾ ಇದ್ದರು. "ಗಂಡಸೆಂದರೆ ಬುಕ್ಕಿರೆಡ್ಡಿ" ಎಂದು ಕೆಲವರೆಂದಾಗ ಅಚ್ಚಿರೆಡ್ಡಿಗೆ ಹೆಮ್ಮೆ ಎನಿಸಿತು. ಅಚ್ಚಿರೆಡ್ಡಿಯನ್ನು ಕೂಡ ಕೆಲವರು ಹೊಗಳ್ತಾ ಇದ್ದರೆ, ಚಿಕ್ಕ ಶ್ಯಾನುಭೋಗನಿಗೆ ಅದು ಅಷ್ಟೇನೂ ಒಳ್ಳೇ ಸೂಚನೆ ಅನ್ನಿಸಲಿಲ್ಲ. ತನ್ನ ತಂದೆಯ ಸ್ಥಾನಕ್ಕೆ ಬುಕ್ಕಿರೆಡ್ಡಿ, ತನ್ನ ಸ್ಥಾನಕ್ಕೆ ಅಚ್ಚಿರೆಡ್ಡಿ ಬರ್ತಾ ಇದ್ದಾರೆ ಅನ್ನಿಸಿತು. ಅದಕ್ಕೆ ಮಾತೇ ಮರೆಸಿದ.

ಆ ಮಾತು ಕಿವಿಗೆ ಬಿದ್ದಾಗ ಅಚ್ಚಿರೆಡ್ಡಿ ಚಿಕ್ಕಶ್ಯಾನುಭೋಗನ ಕಡೆ ನೋಡಿದ. ನಾಗನ್ನ ನಾರಯ್ಯನ ಮಗ ಅನ್ನೋ ವಿಷಯ ಆ ಶ್ಯಾನುಭೋಗನಿಗೆ ತಿಳಿಯದ್ದೇನಲ್ಲ. ತಿಳಿದೂ ಮತ್ತೆ ಆ ವಿಷಯಾನೇ ಕೇಳ್ತಿದ್ದ. ಕಾರಣ ಇಲ್ಲದೆ ಒಂದು ಮಾತೂ ಹೆಚ್ಚಾಗಿ ಆಡೋದಿಲ್ಲ ಚಿಕ್ಕ ಶ್ಯಾನುಭೋಗ ಅನ್ನೋ ವಿಷಯ ಅಚ್ಚಿರಡ್ಡಿಗೆ ಗೊತ್ತು. ಸದ್ಯಕ್ಕಂತೂ ಹೌದು ಅಂತ ಹೇಳಿ ಸುಮ್ಮನಾದ. ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋದಮೇಲೆ ಅವರಿಬ್ಬರೇ ಆ ಚಾವಡಿಯಲ್ಲಿ ಕೂತು, ಇನ್ನೂ ಮಾತಾಡ್ತಲೇ ಇದ್ದರು. ಇಬ್ಬರಿಗೂ ಒಂದೇ ಕ್ಷಣದಲ್ಲಿ ದಿಬ್ಬದ ಬೇಸಾಯ ನೆನಪಿಗೆ ಬಂತು.

'ಅವತ್ತೇ ತದೀಬೇಕಾಗಿತ್ತು' ಅಂದ ಚಿಕ್ಕ ಶ್ಯಾನುಭೋಗ.

'ಯಾವತ್ತು?' ಗೊತ್ತಿದ್ದೂ ಶ್ಯಾನುಭೋಗನ ಬಾಯಿಂದಲೇ ಹೇಳಿಸೋಣ ಅಂತ ಅಚ್ಚಿರೆಡ್ಡಿ ಕೇಳಿದ.

'ಅದೇ, ಹೊಲೆಮಾದಿಗರೆಲ್ಲಾ ಸೇರಿ ನಮ್ಮೂರಿನ ದಿಬ್ಬದ ಬೇಸಾಯ ಶುರುಮಾಡಿದಾಗ!' ಶ್ಯಾನುಭೋಗನ ಜವಾಬು.

ಅಚ್ಚಿರೆಡ್ಡಿಯ ಕಣ್ಣಮುಂದೆ ಅಂದಿನ ಘಟನೆ ಸ್ಪಷ್ಟವಾಗಿ ನಿಂತಿತು ■

ಹಳೆ ಲವ್ ಮ್ಯಾಟ್ರು ಮಾತಾಡೋ ಬರಿಯೋ ಹಕ್ಕು ನಮಿಗದೆ

ಕಾಂಗ್ರೆಸ್ಸಿನ ಒಳಜಗಳದ ವಿಸಯ ಕೇಳಿದ ಕಾಳಮಾವ ಆಚ್ಚರಿಯಾಗಿ.

"ಹಿಂಗಾದ್ರೆ ಹಾಳಾಗೋಯ್ತವೆ ಬುಡು" ಎಂದ.

"ಅಲ್ಲಾ ಜನ ಓಟು ಕೊಡಕ್ಕೆ ತಯಾರಾಗಿರುವಾಗ ನಾಯಿ ಕಚದಾಡಿದಂಗೆ ಕಚದಾಡ್ತ ಕುಂತವಲ್ಲಾ, ಇವುಕೇನೇಳನಾ?" ಎಂದ ಸೀರ.

"ಮನೇಲಿ ಯಜಮಾನ ಅಂತ ವಬ್ಬ ಇಲವಲ್ಲಾ, ಅದಕೆ ಅಂಗೆ ಕಚದಾಡ್ತ ಕುಂತವೆ ಕಣೋ" ಎಂದ ಉಗ್ರಿ.

ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಯಜಮಾನ ಇಲ್ದೆಯಿದ್ರೇನು, ಅಲ್ಲಿ ಸೋನಿಯಾ ಗಾಂಧಿ ಇಲ್ಲವೇನ್ಲ?"

"ಗುಜರಾತಿನಲ್ಲಿ ಹಿಂಗೆ ಆಗಿ ಕಾಂಗ್ರೆಸ್ಸಿನೋರು ಮಣ್ಣ ತಿಂದೋದ್ರು ಕಣೊ ಮಾವ. ಅಲ್ಲಿ ಬಿಜೆಪಿ ಕಡಿಂದ ಮೋದಿ ಅನ್ನೋನು ತ್ರಿಶೂಲ ಹಿಡಕಂಡು ವಂಟಿದ್ದ. ಅವುನೆದ್ರಿಗೆ ಈ ಕಾಂಗ್ರೆ ಬಡ್ಡೆತ್ತವು ದೂರದಲ್ಲಿರೋ ಸೋನಿಯಾ ಗಾಂಧಿ ತೋರಿಸಿಗಂಡು ಬರಿಗೈಲಿ ವಂಟದ್ರೊ. ಅವುನು ಎದುರಾಳಿ ಗಂಡ್ಸೆ ಇಲ್ಲದಂಗಾಗಿ ಮಲ್ಲಾರನ್ನು ಸೋಲಿಸಿ ತಿರಗ ಮುಖ್ಯಮಂತ್ರಿಯಾದ" ಎಂದ ಉಗ್ರಿ ಗುಜರಾತಿನ ಉದಾಹರಣೆ ಕೊಟ್ಟ.

"ಹೆಚ್ಚು ಕಮ್ಮಿಯಾದ್ರೆ ಇಲ್ಲೂ ಅಂಗೆ ಆಯ್ತದೇನೊ ಕಂಡ್ರ?" ಎಂದ ಸೀರ.

"ನಿನ್ನಂಥೋನೇ ಅಂಗಂದ್ರೆ ಆಗದೆಯಿದ್ದತೆ? ಈ ಕಾಂಗ್ರೆ ಬಡ್ಡೆತ್ತವು ಜಗಳ ನಿಲ್ಲಿಸಲಿಲ್ಲಾ ಅಂದ್ರೆ ಆಗೇ ಆಯ್ತದೆ ತಗೊ" ಎಂದ ಉಗ್ರಿ.

"ಅದ್ಯಾಕಂಗೆ ಜಗಳ ಆಡ್ತವುಲ ಅವು?" ಎಂದಳು ಜುಮ್ಮಿ.

"ಕಾಲದಿಂದ ಅಂಗೆ ಕಣೆ ಅವು. ದೇವೇಗೌಡ ಬಿಜೆಪಿ, ಕಾಂಗ್ರೆಸ್ ಯರುಡು ಪಾರ್ಟಿ ಮೇಲೂ ಯುದ್ಧ ಮಾಡ್ತಿನಿ ಅಂತ ಹ್ವಂಟಿರುವಾಗ ಇವು ತಮ್ಮತಮ್ಮಲ್ಲೇ ಗುದ್ದಾಡತಾ ಅವೆ. ಯಲ್ಲ ವದದಾಡಿ ಸತ್ರೆ, ಯಳವಣ್ಣ ನೂಕ್ಕಾಟದಲ್ಲೇ ಸತ್ತ ಅನ್ನಂಗೆ ಬಿಜೆಪಿ ಪಾರ್ಟಿ, ಜೆಡಿಎಸ್ಸು ವದದಾಡುವಾಗ ಈ ಕಾಂಗ್ರೆಸ್ಸಿನವು ಕ್ಯಳಿಕೆ ಬದ್ದು ತಿರಗ ದ್ಯಾವೇಗೌಡನ ಮನೆ ಬಾಗಲಲ್ಲಿ ನಿಂತಗತ್ತವೆ. ಆಗವುನು ಏಳುಸುತ್ತಿನ ಮಾತುಕತೆ ಮುಗದಮ್ಯಾಲೆ ತಿರಗ ಪವರು ತನ್ನ ಮಕ್ಕಳು, ಸೊಸೆರು, ಬೀಗರು, ಬಿಜ್ಜರ ಕೈಲಿರಂಗೆ ಮಾಡಿ ಕತ್ತನೆ" ಎಂದ ಉಗ್ರಿ.

"ಅಂಗೆ ಆಗ್ಲಿ ಬುಡತ್ತಗೆ" ಎಂದ ಕಾಳಮಾವ.

"ನೀನಿನ್ನೇನಂದಿ ಮಾವ?"

"ಇಸಿಸಿ ಇನ್ನೇನಂದಿಲ? ಈ ಬುದ್ಧಿ ಮದ್ಲಿದ್ರೆ ಹಿರಿಗಂಡುನ್‌ತಾವುಲೇ ಇರತಿದ್ದೆ ಅಂತಿದ್ದಂತೆ ಯಾವಳೊ, ಅಂಗಾಯ್ತದೆ ನೋಡು."

"ಮುಂದಾಗದಾ ಯಾವದಾರ ತಡಿಯಕ್ಕಾದತೆ ಮಾವ? ಆಗದ್ಯಲ್ಲ ಆಗ್ಲಿ ಬುಡ ಅನುಭವುಸನ" ಎಂದು ಉಗ್ರಿ ಹೇಳುವಾಗ ಕಾಣಿಸಿಕೊಂಡ ವಾಟಿಸ್ಸೆ

"ಯಾಕಪ್ಪ ಉಗ್ರಿ ಸೋತ ಮಾತಾಡ್ತಿ? ಏನಾಯ್ತು, ವಾಟ್ಸಾಪನ್?" ಎಂದ.

"ಕಾಂಗ್ರೆಸ್ಸಿನೋರ ಜಗಳದ ಸುದ್ದಿ ಕಣೊ."

"ಕಾಂಗ್ರೆಸ್ಸಿನ ಜಗಳ ಇದ್ದಿದ್ದೆ ಕಣೊ. ಅದು ಜಗಳಾಡಿಕಂಡೇ ಮಕ್ಕಳು ಮಾಡ್ತ ಆಸ್ತಿ ಮಾಡಿಕಂಡು, ಬದುಕೊ ಸಂಸಾರಿದ್ದಂಗೆ. ಜಂತಾದಳದಂಗೆ ಡೈವರ್ಸ್ ಪಾರ್ಟಿ ಅಲ್ಲ, ಅಂಡರ್‌ಸ್ಟಾಂಡ್?"

"ಅದು ನಿಜವೆ ಬುಡು. ನಮ್ಮ ಚಿಗಪ್ಪ ಹೆಡತಿ ಜೊತೆ ಚೆನ್ನಾಗಿ ಮಾತಾಡಿದ್ದ ನೋಡಲಿಲ್ಲ, ಯಾವಾಗ್ಲು ಜಗಳ ಆಡೋನು. ಆದ್ರು ಆರು ಮಕ್ಕಳು ಹುಟ್ಟಿಸಿ, ಮನೇನು ಕಟ್ಟಿದ. ಆದು ಕುರಿ ದನ ಮಡಿಕಂಡು ಚನಾಗೇ ಬದುಕ್ತ ಅವುನೆ" ಎಂದ ಉಗ್ರಿ.

"ನೋಡದೇತರ ಕಾಂಗ್ರೆಸ್ಸು. ಇವತ್ತು ಡಿ.ಕೆ. ಶಿವಕುಮಾರ, ವಿಶ್ವನಾಥ ಬೀದಿಲಿ ನಿಂತಗಂಡು ಜಗಳ ಆಡ್ತ ಅವೆ. ಇನ್ನೊಂದಿನ ವಬ್ಬರಿಗೊಬ್ಬರು ತಬ್ಬಿಕೊಂಡು ಮಾತಾಡ್ತವೆ ಗೊತ್ತ?" ಅಂದ ವಾಟಿಸ್ಸೆ.



"ಅವುರ್‍ಯಾಕ್ ಜಗಳ ಆಡ್ತರ್ಲ?" ಎಂದಳು ಜುಮ್ಮಿ.

"ಅವುರ ಜಗಳದಲ್ಲಿ ಬಾಳ ಇಂಟರೆಸ್ಟಿಂಗ್ ಮ್ಯಾಟ್ರು ಸೇರಿಕಂಡದೆ ಕಣಕ್ಕ. ಆ ಕಾಲದಲ್ಲಿ ಎಸ್ಸೆಂ ಕೃಷ್ಣ ಸರೋಜಾದೇವಿ ಲವ್ ಮಾಡಿದ್ದ ಸುದ್ದಿಯ ವಿಶ್ವನಾ... ಅವುನ ಲೈಸಿಸ್ಟಿಲಿ ಬರುದುಬುಟ್ಟದ್ದನಂತೆ. ಅದ್ಕೆ ಡಿ. ಶಿವಕುಮಾರನ ಕಡೆವು ಪುಸ್ತಕನೆ ಬಿಡುಗಡೆ ಮಾಡದಂ... ಗಲಾಟೆ ಮಾಡ್ತವೆ."

"ಅಂಗರೆ ಪುಸ್ತಗ ಬಂದಿಲ್ಲ ಅನ್ನು?"

"ಬರದೇನು? ಈಗಾಗ್ಲೆ ಬಂದದೆ ಕಣ... ಬೇಕಾದ್ರೆ ವಿಶ್ವನಾಥನಿಗೆ ಒಂದು ಪೋ... ಮಾಡು, ಕಳಿಸಿಕೊಡ್ತನೆ."

"ಅಂಗರೆ ತರುಸ್ಲ ಅದೇನದೆ ಸೋಡನ..."

"ಅದೆ ಹೇಳಿದ್ನಲ್ಲಕ್ಕ, ಒಂದು ಚಾಪ್ಟ... ಎಸ್ಸೆಂ ಕೃಷ್ಣ ಸರೋಜಾದೇವಿ ಲವ... ಸೀನದಂತೆ. ಅದ್ಕೆ ಈ ಬಡ್ಡೆತ್ತವು ಕೂಗಾಡ್ತವ..."

"ಲವ್ವು ಸೀನಲ್ಲಿ ಏನಿದ್ದತಂತೇ?"


"ಕಾವೇರಿ ನದಿ ತೀರವಂತೆ. ಸಕ್ಕರೆ ಅಂ... ಮರಳು ಮೇಲೆ ನಾಲ್ಕು ಸುಂದರವಾ... ಪಾದಗಳು ನ್ವಡಕಂಡು ಬತ್ತದಂತೆ. ಆ ಪಾ... ಎದುರಬದುರ ನಿಲ್ತವಂತೆ. ಸುಂದರವಾ... ಹೆಣ್ಣಿನ ಪಾದ ತುದಿಬೆರಳ ಮೇಲೆ ನಿಲ್ತವಂ... ಇಬ್ಬರ ಕೈಲೂ ಇಬ್ಬರ ಕಪೋಲಗಳ... ಇರತವಂತೆ. ಇನ್ನೇನು ತುಟಿಗಳು ಸೇರಬೇಕು... ಅಷ್ಟರಲ್ಲಿ ಹುಡುಗನ ತಂದೆ ಗದರಸ್ತನಂತೆ... ಆ ತಂದೆ ಯಾರು ಅಂದ್ರೆ ಸೋಮನ... ಮಲ್ಲಯ್ಯ" ಎಂದು ವಾಟಿಸ್ಸೆ ಸಿನಿಮಾ... ಕತೆಯಂತೆ ಹೇಳುತ್ತಿರುವಾಗ, ನಗಾಡಿ... ಜುಮ್ಮಿ,

"ಇಂತವೇಳಕ್ಕೆ ಸರಿ ಕಂಡ್ಯ ನೀನು" ಎಂದಳು.

"ನೀನು ಅಂಗೇಳಿದ್ರೆ ನಾನಿನ್ನೇನು ಹೇಳನಕ್ಕ? ... ವಿಶ್ವನಾಥ ಮದ್ಲೆ ತರ್ಲೆ, ಜ್ವತಿಗೆ ರಸಿಕ. ನನ್ನಂಗೆ ಅವು... ಯಲ್ಲಾರು ಅಂತ ತಿಳಕಂಡು ಸರೋಜದೇವಿಗೂ, ಕಿಷ್ಣನಿಗ... ಲವ್ವಿತ್ತು ಅಂತ ಬರದು ಬುಟ್ಟವುನೆ."

ಕುರಿತೋದದೆಯಂ ಕಂಡರ್ 'ಕೃಷ್ಣಲೀಲೆ'ಯ!

ಅವತ್ತು ಎರಡು ಗಂಟೆಯ ಸುಮಾರಿಗೇ ಪ್ರಾರಂಭ ಆಯಿತು. ಟಿವಿ 9ರವರು ಅದನ್ನು ಎಷ್ಟು ರಸವತ್ತಾಗಿ ವರ್ಣಿಸುತ್ತಿದ್ದರು ಅಂತೀರಿ! ಪ್ರೇಮಪ್ರಕರಣ ಅದೂ ಸಮಾಜದಲ್ಲಿ ಪ್ರತಿಷ್ಠಿತರಾಗಿರುವವರ ಪ್ರೇಮ ಪ್ರಕರಣ ಅಂದಮೇಲೆ ಕೇಳುವುದೇ ಬೇಡ. ಆ ವರ್ಣನೆ ಕೇಳ್ತಾ ಕೇಳ್ತಾ ಮುದಿಯರ ತಣ್ಣಗಿನ ರಕ್ತವೂ ಬಿಸಿ ಏರಿತು ಅಂದರೆ... ಬಿ.ಕೆ. ಸುಂದರರಾಜ್, ಎನ್. ನರಸಿಂಹಯ್ಯ ಇಂತಹ ಘಟಾನುಘಟಿ ಕುಳಗಳ ಕಾದಂಬರಿಗಳೇ ಇದರ ಮುಂದೆ ಸಪ್ಪೆ ಅನ್ನಿಸಿತು. ಅನಕೃ ಅವರ ನಗ್ನ ಸತ್ಯ, ಸಂಜೆಗತ್ತಲು, ಶನಿಸಂತಾನಗಳನ್ನೆಲ್ಲ ನೀವಾಳಿಸಿ ಬಿಸಾಕಬೇಕು ಹಾಗಿತ್ತು ಆ ರಂಜನೀಯ ಮಾತಿನ ವೈಖರಿ. ಎಸ್.ಎಂ.ಕೃಷ್ಣ ಅನ್ನೋ ಗಿಣಿ ಬಿ. ಸರೋಜಾ ದೇವಿ ಅನ್ನೋ ಹಣ್ಣನ್ನು ಯಾವ್ಯಾವ ಭಂಗೀಲಿ ಕಚ್ಚಿತ್ತೋ, ಆ ಹಣ್ಣು ಎಲ್ಲೆಲ್ಲಿ ಕಚ್ಚಿಸಿಕೊಂಡು ತನ್ನನ್ನು ತಣಿಸಿಕೊಂಡಿತೋ ಎಂಬೆಲ್ಲ ಭಾವನೆಗಳನ್ನ ಮನಸ್ಸಿನಲ್ಲಿ ಉದ್ರೇಕಗೊಳಿಸಿತ್ತು, ಈಗ ಗಿಣಿ ಕಚ್ಚಿದ ಹಣ್ಣಿಗೆ ಅದು ಹಂಬಲಿಸುತ್ತದೆಯೋ ಅಥವಾ ಅದು ಒಂದು 'ನಂಬರ್' ಆಗಿ ಮಾತ್ರ ಇದೆಯೋ ಎಂಬೆಲ್ಲವು ಎಲು ಬಿಲ್ಲದ ನಾಲಿಗೆಗೆ ತಲುಬು ತಂದುಕೊಟ್ಟಿತ್ತು, ಈ ಕುರಿತು ಅಲ್ಲಲ್ಲಿ 'ರಸಮಂಜರಿ' ಕಾರ್ಯಕ್ರಮಗಳೂ ನಡೆದವಂತೆ!



ಇತರ ಯಾವುದೇ ನಾಯಕ ನಾಯಕಿಯ ವಿಷಯ ಆಗಿದ್ದರೂ ತಾವೂ ಇಂತಹ ರಸಮಂಜರಿಗಳಲ್ಲಿ ಮಜ ಉಡಾಯಿಸಬಹುದಾಗಿತ್ತು, ಎಷ್ಟೋ ಸಲ ಈ ಹಿಂದೆ ಹೀಗೆ ಮಾಡಿದ್ದೂ ಉಂಟು. ಹಾಗೇ ಮಾಡಬಹುದಾಗಿತ್ತು, ಆದರೆ ಈಗ ತಮ್ಮ ಕೆಂಗುಲಾಬಿ ನಾಯಕ ಖಳನಾಯಕ ನಾಗಿರುವ ಸುದ್ದಿಯನ್ನು ಟಿವಿ9ನವರು ಉದ್ರೇಕಕಾರಿಯಾಗಿ ಬಿತ್ತರಿಸುತ್ತಿರುವ ವೈಖರಿ, ಅದನ್ನು ನೋಡುತ್ತಾ ಕೇಳುತ್ತಾ ವಿಕೃತ ಸುಖ ಅನುಭವಿಸುತ್ತಿರುವ ಮಂದಿ ಕಂಡು ಮೈಕೊಡವಿ ಎದ್ದಿತು ಧೀರಪಡೆ. ನಡೆಯಿತು 'ಹಳ್ಳಿಹಕ್ಕಿ ಹಾಡಿತು' ಪುಸ್ತಕ ಬಿಡುಗಡೆಯಾಗಬೇಕಾದ ಮೈಸೂರಿನ ದಾಣಿ ಬಹದ್ದೂರ ರಂಗಮಂದಿರ ಕಡೆ. ಪುಸ್ತಕ ಬಿಡುಗಡೆಗೆ ಒಡ್ಡಿತು ತಡೆ.

ಈ ಕೃತಿಯನ್ನು ಓದಿದ್ದರೆ ಈ ಧೀರರು? ಬಿಡುಗಡೆಯೇ ಆಗಿಲ್ಲ ಓದುವುದೆಲ್ಲಿ ಬಂತು?

ಯಾಕೆ? ಕೃತಿಯೊಂದು ಮಾರುಕಟ್ಟೆಗೆ ಬಂದ ಹಲವು ದಿನಗಳ ಮೇಲೆ ಅದರ ಬಿಡುಗಡೆ ಸಮಾರಂಭ ನಡೆಯುವುದಿಲ್ಲವೆ, ಮರಣ ಹೊಂದಿದ ನಂತರ ಹನ್ನೊಂದನೆಯ ದಿವಸದ ಕಾರ್ಯ ನಡೆಯುವ ಹಾಗೆ! ಅಥವಾ ತಿಂಗಳ ತಿಥಿಯೋ, ವರ್ಷದ ತಿಥಿಯೋ ನಡೆಯುವ ಹಾಗೆ!

ಇಲ್ಲಿ ಹಾಗಾಗಿರಲಿಲ್ಲ, ಕೃತಿ ಇನ್ನೂ ಮಾರುಕಟ್ಟೆಗೆ ಬಂದೇ ಇರಲಿಲ್ಲ, ಹಸ್ತ ಪ್ರತಿ ಓದಿರ ಬಹುದಲ್ಲ? ಅದರ ಸಾಧ್ಯತೆ ಕಡಿಮೆ. ಇಲ್ಲ ಎಂದೇ ಹೇಳಬಹುದು. ಪುಸ್ತಕದ ಹೂರಣ ತಿಳಿದ ಬಗೆ ಹೇಗೆ?

ಸಾಲದೆ ಟಿವಿ 9ರ ರೋಚಕ ಪ್ರಚಾರ. ಅವರಿಗೋ ಪಾಪ ಟಿಆರ್‌ಪಿ ಹೆಚ್ಚಿಸಿಕೊಳ್ಳುವ ತವಕ. ಹೀಗೆ ಮಾಡುವಾಗ ಒಂದೊಂದು ಸಲ ಅವರಿವರ ಮನೆ ಹಾಳಾಗಬಹುದು, ಮಾನ ಹರಾಜಾಗಬಹುದು. ಆದರೂ ಚಾನೆಲ್‌ನ ಅಳಿವುಉಳಿವಿನ ಪ್ರಶ್ನೆ ನೋಡಿ. ಸಮಯಾಸಂದರ್ಭ ಮನೆಹಾಳುಮಾಡಬೇಕಾಗುತ್ತೆ, ಮಾನಾನೂ ಹರಾಜಿಗಿಡಬೇಕಾಗುತ್ತೆ! ಇದು ಹೇಗಾದರೂ ಇರಲಿ. ಯುವ ಮಂದಿ ನಂಬಿದರು. ಅಷ್ಟು ಮಾತ್ರ ಸತ್ಯ.

ತಡೆ ಒಡ್ಡಿದರು ನಿಜ. ಆದರೆ ಹೇಗೆ?

ಕೂಗಾಡಿ, ಕಿರುಚಾಡಿ; ಹೂವಿನ ಕುಂಡಗಳನ್ನ ಒಡೆದು ಹಾಕಿ; ಕೃತಿ ಬಿಡುಗಡೆಗೆ ಬಂದಿದ್ದ ಹಿರಿಯ ಚಿಂತಕ, ಸಾಹಿತಿ ಯು.ಆರ್.ಅನಂತಮೂರ್ತಿಯವರನ್ನ ನೂಕಾಡಿ, ತಳ್ಳಾಡಿ! ತಮ್ಮ ನಾಯಕನ ಮಾನ ರಕ್ಷಣೆಗೆ ಇಷ್ಟಾದರೂ ಅಳಿಲುಸೇವೆ ಬೇಡವೆ!

ಅವತ್ತು ಪುಸ್ತಕ ಬಿಡುಗಡೆ ಆಗಲಿಲ್ಲ, ಅನಂತಮೂರ್ತಿಯವರ ಭಾಷಣ, ಪೊಲೀಸರ ಕಣ್ಗಾವಲಿನಲ್ಲಿ ನೆರವೇರಿತು. ಅವರು ಹೇಳಿದರು; 'ನಾನು ಪುಸ್ತಕವನ್ನು ಸಂಪೂರ್ಣವಾಗಿ ಓದಿದ್ದೇನೆ. ನನ್ನ ಮನಸ್ಸನ್ನು ಅದು ಆವರಿಸಿದೆ. ಮಾನಸಿಕವಾಗಿ ಅದರ ಬಿಡುಗಡೆ ಆಗಿದೆ, ಅನಂತಮೂರ್ತಿ ಮಾನಸಿಕವಾಗಿ ಪುಸ್ತಕ ಬಿಡುಗಡೆ ಮಾಡಿದರು. ಕೃತಿಯ ಲೇಖಕ ಎಚ್. ವಿಶ್ವನಾಥ್ ಅವರೂ ಮನಸ್ಸಿನಲ್ಲೇ ಈ ಪುಸ್ತಕ ರಚಿಸಿದ್ದರೆ ಈ ತಾಪತ್ರಯವೇ ಇರುತ್ತಿರಲಿಲ್ಲ ಎಂಬುದು ಕೃಷ್ಣ ಅಭಿಮಾನಿಗಳ ಅನ್ನಿಸಿಕೆ ಅನ್ನುವುದು ಖಚಿತಗೊಂಡಿಲ್ಲ, ಏನೇ ಆಗಲಿ, ಮಾರನೆಯ ದಿವಸ 'ಹಳ್ಳಿ ಹಕ್ಕಿ ಹಾಡು' ಬಿಡುಗಡೆ ಆಯಿತು. ಪತ್ರಕರ್ತರ ಭವನದಲ್ಲಿ, ಪೊಲೀಸರ ಬಿಗಿ ಭದ್ರತೆಯಲ್ಲಿ!

ಕೃತಿ ಬಿಡುಗಡೆ ಆದನಂತರ ಈ ರೀತಿಯ ಘಟನೆಗಳು ಸಾಮಾನ್ಯ. ಬಿಡುಗಡೆಯ ಮೊದಲೇ ಹೀಗಾಗಬೇಕಾದರೆ ಏನಿತ್ತು ಅದರಲ್ಲಿ?

ಠುಸ್! ಏನೂ ಇಲ್ಲ!

ಕೃಷ್ಣ-ಸರೋಜಾದೇವಿ ಪ್ರಣಯ, ಪ್ರೇಮ, ವಿವಾಹ-ಸಂಬಂಧ ಕುರಿತಂತೆ ಮಂಡ್ಯದ ಹಳ್ಳಿಗಳಲ್ಲಿ ಜಾನಪದ ಕತೆಯಾಗಿದೆ. ಇದರಲ್ಲಿ ಅಶ್ಲೀಲತೆಯ ಸೋಂಕಿಲ್ಲ. ತಮ್ಮ ನಾಯಕ, ನಾಯಕಿಯರ ಕುರಿತು ರೋಚಕವಾಗಿ ಮಾತನಾಡುತ್ತಾ ಖುಷಿಪಡುತ್ತಾರೆ. ಹೆಮ್ಮೆ ಪಡುತ್ತಾರೆ. ವಿಶ್ವನಾಥ್ ವ್ಯಕ್ತಪಡಿಸಿರುವುದೂ ಇದೇ ಅಭಿಪ್ರಾಯವನ್ನ. ಲೋಕಸಭೆಗೆ ಬಿ. ಸರೋಜಾದೇವಿ ಮಂಡ್ಯ ಕ್ಷೇತ್ರದ ಅಭ್ಯರ್ಥಿ ಅಂತ ಯಾವುದೋ ಸ್ಥಳೀಯ ಪತ್ರಿಕೆಯಲ್ಲಿ ಊಹಾಪೋಹವಾಗಿ ಬರೆದಿತ್ತಂತೆ. ಕೃಷ್ಣ ಇರುವುದರಿಂದ ಸೀಟು ದೊರಕಿಸಿಕೊಡುವುದೂ ಖಾತರಿ ಅಂತಾನೂ ಉಬ್ಬಾಡಿಕೊಂಡಿದ್ದರಂತೆ. ಟಿವಿ 9ನಲ್ಲಿ ಬಂದಿರುವ ಸುದ್ದಿ ತರಹಾನೆ ಅದೂನೂ ಇತ್ತಂತೆ. ಆ ಪ್ರಸಂಗ ಕುರಿತು ಕೃಷ್ಣ ತಮ್ಮ ನಡುವೆ ನಡೆದ ಸಂಭಾಷಣೆಯನ್ನ ಯಥಾವತ್ ಚಿತ್ರಿಸಿದ್ದಾರಂತೆ ಈ ಕೃತಿಯಲ್ಲಿ, ಕೃತಿ ರಚನೆಕಾರನ ಊಹೆಗು... ನಿಲುಕದ್ದನ್ನು ಕೃಷ್ಣಬೆಂಬಲಿಗರು ಕಂಡರು!

ರವಿ ಕಾಣದ್ದನ್ನು
ಕವಿ ಕಂಡ.
ವಿಶ್ವನಾಥ್ ಕಾಣದ್ದನ್ನು
ಕೃಷ್ಣ ಬೆಂಬಲಿಗರು ಕಂಡರು!
ಎಂಬಂತೆ.

ಈ ಧೀರ ಪಡೆಯ ನಾಯಕತ್ವ ಯಾರದ್ದು?

ಪ್ರತ್ಯಕ್ಷ ಯಾರೇ ಇರಬಹುದು. ಸೂತ್ರಧಾರ ಡಿ.ಕೆ. ಶಿವಕುಮಾರ್.

ಅಣಕ

ಎಚ್.ಎಲ್. ಕೇಶವಮೂರ್ತಿ

ಪಾಪ ಅವರಿಗೆ ಬೇಕಿರುವುದು ಕೃಷ್ಣ ಅವರ ಕರ್ನಾಟ... ಆಗಮನ. ಮತ್ತೆ ಬಿಚ್ಚಬೇಕಲ್ಲ ಇವರ ಹಿಂದಿನ ವರ... ಈ ಘಟನೆ ಕುರಿತು 'ವಿಶ್ವನಾಥ್ ಅವರಿಗೆ ಮಾನಸಿ... ಅಸ್ವಸ್ಥತೆ ಉಂಟಾಗಿದೆ. ನಾವೆಲ್ಲರೂ ಸೇರಿ ಅವರನ... ಮಾನಸಿಕ ಆಸ್ಪತ್ರೆಗೆ ಸೇರಿಸಿ ಗುಣಪಡಿಸೋಣ' ಎಂದರು... ಆಹಾ, ಎಂತಹ ದಾರ್ಶನಿಕತೆ!

ಮಂಡ್ಯದ್ದೊಂದು ಸ್ಪೆಷಾಲಿಟಿ. ಹಣ ಇದ್ದವರಿಗೆ... ಇಲ್ಲಿ ಮಣೆ. ಹಣ ಹೇಗೆ ಮಾಡಿದ ಅನ್ನುವುದು ಬೇಕಿ... ಡಿಕೆಶಿಗೂ ಅಭಿಮಾನಿ ಸಂಘ, ಎಚ್‌ಡಿಕೆಗೂ ಅಭಿಮಾ... ಸಂಘ. ಕೊನೆಗೆ ಅಶೋಕ ಖೇಣಿಗೂ ಒಂದು ಅಭಿಮಾ... ಸಂಘ! ದುಡ್ಡಿದ್ದವರು ಬನ್ನಿ, ನಿಮಗೂ ದಿಢೀರ್ ಒಂದು... ಅಭಿಮಾನಿ ಸಂಘ ರೆಡಿ! ಅದ್ದೂರಿ ಸನ್ಮಾನಾನೂ ಮಾಡ್ತಾ... ಆದರೆ ಅದಕ್ಕೆ ತಗುಲುವ ಖರ್ಚು ಮೇಲೊಂದಿಷ... ಕೊಟ್ಟರೆ ಸಾಕು! ಜಗ್ಗೇಶ್ ಭಾಷೆಯಲ್ಲಿ ಹೇಳುವುದಾದ... ಕಾಸಿದ್ದವನೇ ಬಾಸು! ಇಂತಹ ಜಾಯಮಾನದ ಡಿಕೆ... ಕೃಷ್ಣ ಅಭಿಮಾನಿಗಳು ಅಂದುಕೊಂಡವರು ಬೀದಿಗಿಳಿದರು... 'ಹಳ್ಳಿ ಹಕ್ಕಿ ಹಾಡಿತು' ವಿರುದ್ಧ ಅಲ್ಲ! ವಿಶ್ವನಾಥ್ ವಿರುದ್ಧ... ಆ ಕೃತಿ ಓದಿದ್ದರೆ ಇವರು? ಮತ್ತೆ ಅದನ್ನೇ ಪ್ರಸ್ತಾಪಿಸಬೇಕಿ... ಅದನ್ನೇ ಏನು, ಯಾರು ಯಾವ ಪುಸ್ತಕ ಬರೆದರು...

"ಅಂಗ್ಯಲ್ಲ ಬರಿಬಾರ್ದು" ಎಂದ ಕಾಳಮಾವ.

"ಯಾಕ್ ದ್ವಡಪ್ಪ ಬರಿಬಾರ್ದು?"

"ನೋಡವ್ವ, ನಾನು ಅಂಗಿ ಇಕ್ಕಿದಿನಿ."

"ಇಕ್ಕಿದ್ದಿ. ಹಳೇ ಅಂಗಿ. ತೋಳತ್ರ ಹರುದೋಗ್ಯದೆ. ಕುತ್ತಿಗೆ ಪಟ್ಟಿ ಸವುದು ಜುಂಗೆದ್ದದೆ....."

"ಕೇಳಲಿ ಹೇಳಗಂಟವಾ. ಆತುರ ಬದ್ದೆತ್ತುದ್ದೆ. ಅಂಗಿ ಯಾಕಿಕ್ಕಿದ್ದಿನಿ ಅಂದ್ರೆ ಮಾನ ಮುಚಗಳಕ್ಕೆ. ಅದೇ ತರ ಮನುಸ ಕೆಲವೊಂದು ವಿಸಿಯನ ತಗಿಬಾರ್ದು, ಮಾನಕ್ಕುಮ್ಮಿ" ಎಂದು ಕಾಳಮಾವ ಗಂಭೀರವಾಗಿ ಹೇಳಿದ.

"ನೋಡು ದ್ವಡಪ್ಪ, ಸರೋಜಾದೇವಿ ಸಿನುಮ ಆಗುಟ್ರು. ಎಸ್ಸೆಂ ಕೃಷ್ಣ ರಾಜಕಾರಣಿ. ಇವರು ಸುದ್ದಿ ಮಾತಾಡೋ ಹಕ್ಕು, ಬರಿಯೋ ಹಕ್ಕು ನಮಿಗದೆ" ಎಂದ ವಾಟಿಸ್ಸೆ.

"ಅದೇ ಕಣೊ ವಾಟಿಸ್ಸೇ, ನಿಮಿಗೆ ಆ ಹಕ್ಕು ಕೊಟ್ಟೋರ್ಯಾರು? ಅಂತ ಸರೋಜಾದೇವಿ ಕೇಳ್ತವುಳೆ."

"ಯಾರೂ ಕೊಡಕ್ಕೆ ಬರಲ್ಲ ಕಣೊ ಉಗ್ರೀ. ಡೆಮಾಕ್ರಸಿಲೀ ಅದೇ ಪ್ರಾಪ್ತಿಯಾಯ್ತದೆ ಟ್ವೈಟು ಅಂಡರ್ ಸ್ಟಾಂಡ್."

"ಅಂಗರೆ ಸರೋಜಾದೇವಿ ಬೇಜಾರಾಗಿದ್ದಳೆ?" ಎಂದಳು ಜುಮ್ಮಿ.

"ಬೇಜಾರಾಗಲವೇನಕ್ಕ? ಪ್ರಾಯದ ಭಗ್ನ ಕನಸನ್ನು ಮುಪ್ಪಿನಲ್ಲಿ ನೆನೆಸಿದ್ರೆ ಯಾರಿಗೆ ಆದ್ರೂ ಬೇಜಾರಾಯ್ತದೆ."

"ಆತರ ವಿಸ್ವನಾಥ ಬರೆದವನೆ ಅನ್ನು."

"ಎಸ್."

"ದ್ಯಾವೇಗೌಡನತ್ರ ಇಂತ ಯಾವ ಕತೆನೂ ಇಲ್ಲ ನೋಡು" ಎಂದ ಕಾಳಮಾವ.

"ಅಂತ ಕತೆ ಇರಬೇಕಾದ್ರೆ ಹೃದಯದಲ್ಲಿ ಪ್ರೀತಿ ಪ್ರೇಮ ಇರಬೇಕು ದೊಡಪ್ಪ. ಕೆಲವುರಲ್ಲಿ ಇರಲ್ಲ. ಆದ್ರು ಬೇಕಾದಷ್ಟು ಮಕ್ಕಳ ಹುಟ್ಟುಸ್ತರೆ. ಪೆರೆಗ್‌ಜಾಂಪಲ್ಲು ನೀನು ಮತ್ತು ದೇವೇಗೌಡ್ರು."

"ಹೋಗೋ ಹಲಕ ಬಡೆತ್ತುಬ್ಬ" ಎಂದು ಕಾಳಮಾವ ಸಿಟ್ಟಾದ

"ಕಾಳಮಾವ್ನಂದೂ ವಿಸೊ ಇತ್ತೇನೊ. ಯಾರಿಗ್ಗೊತ್ತು?" ಎಂದು ಜುಮ್ಮಿ ನಕ್ಕಳು.

"ಅದ ಕಟಿಗಂಡೇನ್ಲೆ ಈಗ?" ಎಂದ ಕಾಳಮಾವ.

"ನೋಡಕ್ಕ ದ್ವಡಪ್ಪ ಕೊಟ್ಟಿರೋ ಉತ್ತರದಲ್ಲಿ ದುಪ್ಪುಟದೆ. ಇರ್ಲಿ ದ್ವಡಪ್ಪ, ನಿನ್ನ ಪರಸನಲ್ ಲೈಫ್ ನಾವು ಕೆದಕಕ್ಕೋಗಬಿಲ್ಲ, ಯಾಕೆ ಅಂದ್ರೆ ನೀನು ಖಾಸಗಿ ಪರಸನ್, ಸಾರ್ವಜನಿಕ ವ್ಯಕ್ತಿ ಅಲ್ಲ. ಆದ್ರೆ ಐದು ಭಾಷೆಲಿ ಪಾತ್ರ ಮಾಡಿರೊ ಸರೋಜಾದೇವಿ ವಿಷಯ ಮಾತಾಡೋ ಹಕ್ಕು, ಬರಿಯೋ ಹಕ್ಕು ನಮಿಗದೆ. ಇಲ್ಲಿಂದ ಮಂಡ್ಯಕ್ಕೋಗಿ ಅವ್ರುಳ ಸಿನುಮ ನೋಡಿದಿವಿ. ಮೆಚ್ಚಿದ್ದಿವಿ. ಕೊಂಡಾಡಿದ್ದಿವಿ. ಆರಾಧಿಸಿದ್ದಿವಿ. ಅದೇ ರೀತಿ ಎಂದೂ ಯಾವ ಕೆಲಸನೂ ಮಾಡದೆ ಬರೀ ರಾಜಕಾರಣ ಮಾಡಿ ಇವತ್ತು ನೂರಾರು ಕೋಟಿ ರೂಪಾಯಿನ ಆಸ್ತಿ ಒಡೆಯ ಎಸ್ಸೆಂ ಕೃಷ್ಣನ ಬಗ್ಗೆ ಮಾತಾಡೂ ಹಕ್ಕು, ಬರಿಯೋ ಹಕ್ಕು ನಮಿಗದೆ ಅನ್ನದ ಅವುನ ಪರ ಕೂಗಾಡ್ತಯಿರೊ ಫೂಲಿಸ್‌ಪೆಲೋಗಳು ತಿಳಕಬೇಕು, ಅಲವೇನೊ ಉಗ್ರಿ?"

"ಅಲ್ಲ ಕಣೊ, ಕೃಷ್ಣ ಭ್ರಷ್ಟ ಆದ್ರೆ ಆ ವಿಷಯ ಬರಿ. ಅದು ಬುಟ್ಟು ನಲವತ್ತು ವರ್ಷದ ಹಿಂದಿನ ಕತೆ ಬರದ್ರೆ ಹ್ಯಂಗೆ ಅಂತ?"

"ಭ್ರಷ್ಟ ವಿಷಯ ಯಾರೋತ್ತರೊ ಉಗ್ರಿ? ಎಷ್ಟೇ ಹಳೇವಾದ್ರು ಲವ್ ಮಾಟ್ರು ಥ್ರಿಲ್ ಕೊಡ್ತವೆ. ವಿಶ್ವನಾಥ್ ಅವುರಿವುರ ವಿಷಯ ತಗುಂಡು ಇಂತ ಥ್ರಿಲ್ ಅನುಭವುಸೊ ವ್ಯಕ್ತಿಯಂತೆ."

"ಅವುನೆ ಏನೂ, ನಾವು ಮಾಡದೂ ಅದೇ ಅಲವೇನೊ?"

"ಇರಬವುದು. ನಮ್ಮ ದೊಡಪ್ಪನತ್ರ ಅಂತವ್ವಲ್ಲ ನ್ಯಡಿಯದಿಲ್ಲ. ಅದ್ಕೆ ಅವುನಂಥರೆಯ ಮೈಸೂರು, ಅಲ್ಲಿ ಇಲ್ಲಿ ಕೂಗಾಡ್ತ ಅವೆ. ಅದು ಪುಸ್ತಕ ಓದಕ್ಕೂ ಹೋಗದೆ ಕೂಗ್ತವೆ."

"ಅಂಗರೆ ಪುಸ್ತಕ ಓದಿಲವೆ ಅವು?"

"ಎಲ್ಲೋತ್ತವೆ ಅವು? ಡಿ.ಕೆ. ಶಿವಕುಮಾರನಂಥೊರು ಓದುಬೇಕು ಅವು ಕೇಳಬೇಕು. ಅದ್ಕೆ ಕಾಂಗ್ರೆಸ್ ಅಂಗಾಗಿರದು."

" ?!" ■

ಅದನ್ನು ಅವರು ಓದುವುದಿಲ್ಲ. ಕಡೆಗೆ ಎಸ್.ಎಂ.ಕೃಷ್ಣ ಅವರೇ ಪುಸ್ತಕ ಬರೆದರೂ ಅದನ್ನೂ ಓದುವುದಿಲ್ಲ. ಪುಸ್ತಕ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ; ಕೃಷ್ಣ ಅವರನ್ನು ಅಭಿಮಾನದಿಂದ ನೋಡ್ತಾರೆ. ಕುರಿತೋದದೆಯಂ ಕೃಷ್ಣ ಮನ ಅರಿತರಿವರು. ಅಲ್ಲಲ್ಲಿ ರಸ್ತೆ ತಡೆ ನಡೆಸಿದರು. ಪ್ರಯಾಣಿಕರಿಗೆ ಅನಾನುಕೂಲವಾಗಿರಬಹುದು. ನಾಯಕನಿಗಾಗಿರುವ ಅವಮಾನದ ಪ್ರತೀಕಾರಕ್ಕೆ ಇವೆಲ್ಲ ಸರ್ವೇಸಾಮಾನ್ಯ. ದೊಡ್ಡ ಆಲದಮರ ಬಿದ್ದಾಗ ಭೂಮಿ ನಡುಗುವುದು ಸಾಮಾನ್ಯ ಅಂತ ಅವರ ನಾಯಕ ರಾಜೀವಗಾಂಧಿಯವರ ಹೇಳಿಕೆಯೇ ಇದೆಯಲ್ಲ!

ಮುಂದಿನ ಹೆಜ್ಜೆ ಏನು?

ಪುಸ್ತಕ ಬಿಡುಗಡೆ ಆಗಿದೆ. ಇನ್ನು ಮೂರು ತಿಂಗಳ ಅವಧಿಯಲ್ಲಿ ಇದರ ಇಂಗ್ಲಿಷ್ ಭಾಷಾಂತರವೂ ಸಿದ್ಧವಾಗುತ್ತಂತೆ. ಅದರ ಬಿಡುಗಡೆಯನ್ನ ದೆಹಲಿಯಲ್ಲಿ ಮಾಡಲಾಗುವುದಂತೆ! ಡಿ.ಕೆ.ಶಿವಕುಮಾರ್ ಅವರೇನೋ ಕೇವಲ ಇಂಗ್ಲಿಷಿನಲ್ಲೇ ಯಾಕೆ ಜರ್ಮನಿ, ಜಪಾನಿ, ಇಟಲಿ ಮುಂತಾದ ಭಾಷೆಗಳಲ್ಲೂ ಪ್ರಕಟಿಸಲಿ ಎಂದು ಉದಾರ ಮನಸ್ಸಿನಿಂದ ಒಪ್ಪಿಗೆ ನೀಡಿದ್ದಾರೆ. ಆದರೂ ಇದಕ್ಕೆ ಅಂತ್ಯ ಅಂತ ಒಂದು ರೂಪ ಕೊಡಬೇಕಲ್ಲ. ವೀರಶೈವ, ಭಜರಂಗಿ, ಇಸ್ಲಾಂ ಸಂಸ್ಕೃತಿಗಳಂತೆ ಇದ ಪುಸ್ತಕ ಹಿಂದಕ್ಕೆ ಪಡೆಯಿರಿ ಎಂಬ ಹೋರಾಟಕ್ಕೆ ರೂಪಕೊಡುವುದಾ ಅಥವಾ ಸಿಂಪಲ್ ಅಂಡ್ ಸಿಂಬಾಲಿಕ್ ಆಗಿ ಮಾನನಷ್ಟ ಮೊಕದ್ದಮೆ ಹೂಡುವುದಾ? ಮಾನನಷ್ಟ ಆಗಿದೆ ಅಂತಾನೆ ಭಾವಿಸೋಣ. ಯಾರಿಗೋ ಮಾನನಷ್ಟ ಆದರೆ 'ಇನ್ನಾರೋ ಮಾನನಷ್ಟ ಆಯಿತು ಮಾನನಷ್ಟ ಆಯಿತು' ಅಂತ ಕುಣೀತಾ ನ್ಯಾಯಾಲಯಕ್ಕೆ ಹೋದರೆ, 'ಯಾರಿಗೆ ಮಾನನಷ್ಟ ಆಗಿದೆಯೋ ಅವರು ಬರಲಿ. ನೀವು ಮುಚ್ಚುಕಂಡಿರಿ' ಅಂತ ಏನಾದರೂ ನ್ಯಾಯಾಲಯ ಹೇಳಿದರೆ, ಪಾಪ ಮಾಜಿ ಮುಖ್ಯಮಂತ್ರಿ ಹಾಲಿ ರಾಜ್ಯಪಾಲರು ಬಂದು ಕೋರ್ಟಿನ ಕಟಕಟೆಯಲ್ಲಿ ನಿಲ್ಲುವ ಹಾಗಾಗುತ್ತಲ್ಲಾ... ಈ ತರಲೆ ತಾಪತ್ರಯ ಎಲ್ಲ ಯಾಕೆ ಅಂತ ಮಾನನಷ್ಟ ಮೊಕದ್ದಮೆ ಹೂಡ್ತೀವಿ ಅಂತ ಜನ ಮೆಚ್ಚಿಸೋಕೆ ಹೇಳಿಕೆ ನೀಡಿದರೂ ಬಾಲ ಮುದುರಿಕೊಂಡು ಬದ್ದಿರುವ ಸಾಧ್ಯತೆಗಳೇ ಹೆಚ್ಚಿದ್ದರೂ 'ಹಳ್ಳಿ ಹಕ್ಕಿ ಹಾಡು' ಕಟಕಟೆ ಏರುವುದನ್ನಂತೂ ತಡೆಯುವ ಸಾಧ್ಯತೆ ಕಂಡುಬರುತ್ತಿಲ್ಲ. 'ಈ ಚಮತ್ಕಾರೀಲೀ ಬರೆಯಬಹುದಾದರೆ ನಾನು ಯಾಕೆ ಬರೆಯಬಾರದು' ಎಂಬುದಾಗಿ ವಿಶ್ವನಾಥ್ ತಾವು ಬರೆಯಲು ಪ್ರಾರಂಭಿಸುವುದಕ್ಕೆ ಕಾರಣ ಇದಾಯ್ತು ಅಂತ ಹೇಳಿದ್ದಾರಂತೆ. ಇದರಿಂದ ಕೆರಳಿದ ಮೈಸೂರಿನ ಲಿಟ್ಲ್ ಚಿತ್ರರಂಗದ ಜನಾಂಗದ ಸಿಂದಣೆ ಆಗಿದೆ ಅಂತ ನ್ಯಾಯಾಲಯಕ್ಕೆ ಹೋಗುತ್ತಾರಂತೆ! ನಮ್ಮ ಪೆಟ್ಟಿನ

ಚತುರ್ಭಾಷಾ ತಾರೆ ಬಿ. ಸರೋಜಾದೇವಿ 'ನನ್ನ ಮನಸ್ಸಿಗೆ ಬಹಳ ನೋವಾಗಿದೆ. ಈ ಕುರಿತು ಏನನ್ನೂ ಹೇಳಲು ಬಯಸುವುದಿಲ್ಲ, ಅಂದಿದ್ದರೂ, ಮುಂದುವರೆದು 'ನಾನು ರಾಜಕಾರಣಿಯಲ್ಲ, ನಾನೊಬ್ಬ ಕಲಾವಿದೆ. ನನ್ನನ್ನು ಯಾಕೆ ಎಳೆದುತಂದಿದ್ದಾರೋ ಗೊತ್ತಿಲ್ಲ, ರಾಜಕೀಯದಲ್ಲಿ ಅನೇಕ ಕಲಾವಿದೆಯರಿದ್ದಾರೆ. ಅವರ ಕುರಿತು ಬರೆಯಬಹುದಾಗಿತ್ತಲ್ಲ, ಎಂದಿರುವುದು ಆ ತಾರೆಯ ಘನತೆಗೆ ಸರಿಹೊಂದುವುದಿಲ್ಲ ಅನ್ನಿಸುತ್ತೆ. 'ನನ್ನ ವೈಯಕ್ತಿಕ ಜೀವನ ಪ್ರಶ್ನಿಸಲು ಅವರು ಯಾರು' ಎಂದು ಅವರು ಕೇಳಿರುವಂತೆಯೇ 'ನನ್ನ ಕುರಿತು ಹೇಳಲು ಈಕೆ ಯಾರು?' ಎಂದು ರಾಜಕೀಯದಲ್ಲಿರುವ ಕಲಾವಿದರೂ ಕೇಳಬಹುದಲ್ಲಾ ಅಂತ.

ಇಷ್ಟಕ್ಕೇ ಈ 'ಹಳ್ಳಿ ಹಕ್ಕಿ ಹಾಡು' ರಾದ್ಧಾಂತ ಮುಗಿಯುವಂತಿಲ್ಲ.

ಯಾಕೆ ಅಂತೀರಾ?

ಪೂಜಾರಿಯೊಬ್ಬ 'ದೇವೇಗೌಡರನ್ನು ಒದ್ದ' ಪ್ರಸಂಗವೂ ಇದರಲ್ಲಿ ಇದೆಯಂತೆ!

ಇದು ಏನು ಕತೆ ಅಂದರೆ ಕೃಷ್ಣರಾಜನಗರ ತಾಲ್ಲೂಕು ಹಾಗೂ ಹೊಳೆನರಸೀಪುರ ತಾಲ್ಲೂಕು ಬಾರ್ಡರ್‌ನಲ್ಲಿ ಒಂದು ಹಳ್ಳಿ ಇದೆಯಂತೆ. ಅಲ್ಲಿ ಒಂದು ಗುಡಿ ಇದೆಯಂತೆ. ಆ ಸುತ್ತಿಗೆಲ್ಲ ಅದು ಖ್ಯಾತಿಯಂತೆ. ಅಲ್ಲಿ ಪೂಜೆ ಮಾಡಿಸಿದರೆ ತಮ್ಮ ಇಷ್ಟಗಳೆಲ್ಲವೂ ಪೂರೈಸುತ್ತವೆ ಎಂದು ಭಕ್ತರ ನಂಬಿಕೆಯಂತೆ. ಆ ಪೂಜೆ ನಡೆಯೋದು ಬೆಳಗಿನಜಾವ ಅಂತೆ. ಆಗ ಮಂತ್ರಿಯಾಗಿದ್ದ ದೇವೇಗೌಡರು ಪೂಜೆಗೆ ಹೋದರಂತೆ. ಬೆಳಗಿನ ಜಾವ ಮೂರು ಗಂಟೆಗೇನೆ ಸಮೀಪದಲ್ಲಿದ್ದ ಬಾವಿಯಲ್ಲಿ ಸ್ನಾನ ಮಾಡಿ, ಮಡಿ ಉಡುಗೆಯಲ್ಲಿ ಪೂಜೆಗೆ ಹೋಗಿ ಕುಳಿತರಂತೆ. ದೇವಸ್ಥಾನದ ವೈಶಿಷ್ಟ್ಯ ಅಂದರೆ ಅಲ್ಲಿಯ ಪೂಜಾರಿಯ ಮೈಮೇಲೆ ದೇವರು ಬರುತ್ತಿತ್ತಂತೆ! ಹೀಗೆ ಪೂಜಾರಿ ಮೈಮೇಲೆ ಬಂದ ದೇವರು ಗೌಡರನ್ನು ಕಂಡಾಕ್ಷಣ 'ಯಾಕೋ ಇಷ್ಟು ಲೇಟು' ಅಂತ ಹೇಳಿ ಕಾಲಿನಿಂದ ಒದೆಯಿತಂತೆ! ಗೌಡರು ತಿಂದ ಒದೆತದ ಫಲವಾಗಿ ಆ ಗ್ರಾಮದೇವತೆ ಜನರ ಬಾಯಲ್ಲಿ 'ಆ ದೇವತೆ ಏನೂ ಸಾಮಾನ್ಯಳಾದೋಳಲ್ಲಪ್ಪ, ಮಂತ್ರೀನೆ ಒದ್ದುಬಿಟ್ಳು. ಅಂತಹವಳು' ಅಂತ ಪ್ರಸಿದ್ಧಿ ಪಡೆದಳಂತೆ!

ಇದನ್ನೆಲ್ಲ ಕೇಳಿದನಂತರ, ಅಲ್ಲಿಇಲ್ಲಿ ಓದಿದನಂತರ ನನ್ಗಂಡು ಆ 'ಹಳ್ಳಿ ಹಕ್ಕಿ ಹಾಡಿತು' ಓದಲೇಬೇಕು ಅನ್ನಿಸುತ್ತಿದೆ. ನಿಮಗೆ...?

ಅಂದಹಾಗೆ ಈ ಖಾಲಿ ಡಬ್ಬಕ್ಕೆ ಕಲ್ಲು ಹಾಕಿ ಅಲ್ಲಾಡಿಸಿದಂಗೆ ಸದ್ದು ಇರೋ ಈ ಗಲಾಟೆಯೂ ಮಾರುಕಟ್ಟೆ ತಂತ್ರಾನಾ.... ■


ಮರೆಯುವ ಮುನ್ನ



ಪಿ. ಲಂಕೇಶ್ —ಅಕ್ಟೋಬರ್ 29, 1989

ನೇಗಿಲು, ಕೊಳಲು

ಬಲರಾಮನ ಆಯುಧ ನೇಗಿಲು, ಕೃಷ್ಣನ ವಾದ್ಯ ಕೊಳಲು. ಮನುಷ್ಯನ ಬದುಕಿಗೆ ಈ ನೇಗಿಲು, ಕೊಳಲು ಆಧಾರವೆನ್ನಿಸುತ್ತದೆ. ಕೃಷಿ ಬಂದು ಜನತೆಗೆ ಅತ್ಯಗತ್ಯ ಗೇಣು ಹೊಟ್ಟೆಗಾಗಿ, ಗಜ ಬಟ್ಟೆಗಾಗಿ ಕೃಷಿ ಅನಿವಾರ್ಯ. ಅಲ್ಲದೆ ಕೃಷಿಯಿಂದಲೇ ಇನ್ನಿತರ ಸಂಪತ್ತು ಕೂಡ. ಕೃಷಿ ಮಾಡಿ ಒಂದು ಪಾಲನ್ನು ಅಗಸನಿಗೆ, ಒಂದು ಪಾಲನ್ನು ಕಮ್ಮಾರನಿಗೆ, ಒಂದು ಪಾಲನ್ನು ತೋಟಿಗೆ ಕೊಟ್ಟರೇ ಗ್ರಾಮಕ್ಕೆ ಸೌಖ್ಯ. ಅದೆಲ್ಲಕ್ಕಿಂತ ದೊಡ್ಡ ಪಾಲನ್ನು ಪ್ರತಿಯೊಬ್ಬ ಗ್ರಾಮಸ್ಥನೂ ಊರಿನ ದೇವಾಲಯಕ್ಕೆ ಕೊಡುತ್ತಿದ್ದ. ದೇವಾಲಯ ಕೃಷ್ಣನೆಂಬ ದೇವರ ಜಾಗ ಮಾತ್ರವಲ್ಲ; ಆತನ ಕೊಳಲು ಪ್ರತಿನಿಧಿಸುವ ಸಂಗೀತ, ನೃತ್ಯ, ಸಾಹಿತ್ಯ ಅರ್ಥಪೂರ್ಣ ರಂಗ ಕೂಡ. ಹಳ್ಳಿಯ ಗದ್ದೆಯಲ್ಲಿ ಕುಡಿಯೊಡೆವ ಪಸಲು ಮನುಷ್ಯನ ಚೇತನದಲ್ಲಿ ಕಲೆಯಾಗಿ ರೂಪುಗೊಳ್ಳುವುದು ಹೀಗೆ.



ದೇವಸ್ಥಾನ ಒಂದಾನೊಂದು ಕಾಲಕ್ಕೆ ಗ್ರಾಮದ ಕೇಂದ್ರ. ಜನರನ್ನು ಒಗ್ಗೂಡಿಸುತ್ತಿದ್ದ, ಅವರನ್ನು ವೈಯಕ್ತಿಕ ಭಕ್ತಿಗೆ, ಸಾಮೂಹಿಕ ಹಬ್ಬಕ್ಕೆ ಹಚ್ಚುತ್ತಿದ್ದ ಸ್ಥಳ ದೇವಸ್ಥಾನ. ಅಲ್ಲಿ ನೇಗಿಲು ಮತ್ತು ಕೊಳಲು ಸಮ್ಮಿಳನಗೊಳ್ಳುತ್ತಿದ್ದವು; ವ್ಯಕ್ತಿಯ ಅಳಲು ಮತ್ತು ಜನತೆಯ ಶಕ್ತಿ ಒಂದಾಗುತ್ತಿದ್ದವು.

ದೇವಸ್ಥಾನ ಇವತ್ತು ಶಾಲೆಯಾಗಬೇಕಾಗಿದೆ; ಅಥವಾ ಮಸೀದಿ, ಚರ್ಚು, ದೇವಸ್ಥಾನಗಳೆಲ್ಲ ಶಾಲೆಯನ್ನು ವಿಸ್ತರಿಸಬೇಕಾಗಿದೆ. ಕೃಷಿ, ಕೈಗಾರಿಕೆ, ಕಸುಬುದಾರಿಕೆಯೆಲ್ಲ ಹೊಸಹೊಸ ಆಯಾಮ ಪಡೆದು ಜನರನ್ನು ನೆಮ್ಮದಿಯಾಗಿಟ್ಟು ಅವರ ತುಟಿಗಳನ್ನು ಕೊಳಲಿಗೆ ಹೊಂದಿಸಬೇಕಾಗಿದೆ. ಇಲ್ಲಿ ನಾನು ಭಕ್ತಿಗೆ ಪ್ರಾಮುಖ್ಯ ಕೊಡುತ್ತಿಲ್ಲ. ಜನತೆ ಕಲಿಯುವ, ಕಾಣುವ ಕ್ರಿಯೆಯಲ್ಲಿ ಭಾಗಿಗಳಾಗಿ ತಮಗಿಂತ ದೊಡ್ಡದಾದ ಕಾರ್ಯಕ್ರಮವೊಂದಕ್ಕೆ, ಮೌಲ್ಯವೊಂದಕ್ಕೆ ತಮ್ಮನ್ನು ತಾವು ಕೊಟ್ಟುಕೊಳ್ಳಬೇಕಾಗಿದೆ. ಅದೊಂದೇ ಇವತ್ತು ಯಾವ ಗೊಂದಲವೂ ಇಲ್ಲದೆ ನೇಗಿಲು ಮತ್ತು ಕೊಳಲನ್ನು ಒಂದುಗೂಡಿಸುವ ಮಾರ್ಗ.

ಕರ್ಪೂರ, ತಾವರೆ




ಯಾರೂ ಓದದ ವಿಶ್ವವಿದ್ಯಾನಿಲಯದ ಪುಸ್ತಕಗಳ ಪಟ್ಟಿ ತರಿಸಿಕೊಂಡೆ. ಈ ಪುಸ್ತಕಗಳು ಸರ್ಕಾರಿ ಪುಸ್ತಕಗಳು ಎಂತಲೋ, ಬೇಕಾಬಟ್ಟಿ ಹೊರಬಂದ ಪುಸ್ತಕಗಳು ಎಂತಲೋ ಜನ ಇವನ್ನು ಓದುವುದಿಲ್ಲ. ಆದರೆ ಅಲ್ಲಿ ವಿ.ಸೀ. ಅವರ, ಬಿ.ಜಿ.ಎಲ್. ಸ್ವಾಮಿಯವರ, ಎ.ಎನ್. ಮೂರ್ತಿರಾಯರ ಪುಸ್ತಕಗಳೆಲ್ಲ ಇದ್ದವು. ನಾನು ಪಟ್ಟಿ ನೋಡಿ ತರಿಸಿಕೊಂಡ ಇಪ್ಪತ್ತು ಪುಸ್ತಕಗಳಲ್ಲಿ ಒಂದು ಸ್ವಾಮಿಯವರ 'ಶಾಸನಗಳಲ್ಲಿ ಗಿಡಮರಗಳು.'

ಗಿಡಮರಗಳೆಂದರೆ ಈ ಬಿ.ಜಿ.ಎಲ್. ಸ್ವಾಮಿಯವರ ಕುತೂಹಲ ಮತ್ತು ತಿಳಿವಳಿಕೆ ಅಪಾರ; ಹಾಗೆಯೇ ಇವರ ಪಾಂಡಿತ್ಯ ಕೂಡ. ಅವುಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ಸೂಚಿಸುತ್ತೇನೆ. ನಮ್ಮ ಜನರ ಪೂಜೆಯಲ್ಲಿ ಸೇರಿಹೋಗಿರುವ, ಕಾವ್ಯದಲ್ಲಿ 'ಕರಗಿ ಕಣ್ಮರೆಯಾಗುವುದಕ್ಕೆ' ಸಂಕೇತವಾದ ಕರ್ಪೂರ ನಮ್ಮ ದೇಶದ್ದೇ ಅಲ್ಲ. ಚೈನಾದಲ್ಲಿ ಬೆಳೆವ ಕರ್ಪೂರದ ಮರ ದ್ರವಿಸುವ ಮೇಣವೇ ಕರ್ಪೂರ; ಅದು ನಮ್ಮ ದೇಶಕ್ಕೆ ಬಂದದ್ದು ಹನ್ನೊಂದು, ಹನ್ನೆರಡನೆಯ ಶತಮಾನದಲ್ಲಿ, ಹಾಗೆಯೇ ಪನ್ನೀರು. ಪನ್ನೀರನ್ನು ಮಾಡುವುದು ರೋಜಾ ಹೂವುಗಳಿಂದ. ಈ ಗುಲಾಬಿ ಬಂದದ್ದು ಮೊಗಲರ ರಸಿಕತೆಯಿಂದಾಗಿ. ಜಹಂಗೀರ್, ನೂರ್‌ಜಹಾನ್ ಮದುವೆಯಾದ 1612 ರಲ್ಲಿ ಪನ್ನೀರ ಕಾಲುವೆಯನ್ನೇ ಹರಿಸಿದರಂತೆ.

ಹಾಗೆಯೇ ಹೊಗೆಸೊಪ್ಪು, ನಶ್ಯ, ಬೀಡಿ, ಸಿಗರೇಟಿನಿಂದ ಮನುಷ್ಯನನ್ನು ಕಲಕಿ ಹೊಸಹೊಸ ಐಡಿಯಾ ಕೊಡುವ ಹೊಗೇಸೊಪ್ಪು, ಅದು ಭಾರತಕ್ಕೆ ಕಾಲಿಕ್ಕಿದ್ದು ಹದಿನಾರನೆ ಶತಮಾನದಲ್ಲಿ.

ಆಮೇಲೆ ತಾವರೆ.... ಸಂಸ್ಕೃತ ಕಾವ್ಯದಲ್ಲಿ ಅಂಬುಜ, ಪದ್ಮ ಎಂಬ ಸುಮಾರು ಅರವತ್ತು ರೀತಿಯಲ್ಲಿ ಕರೆಯಲ್ಪಡುವ ತಾವರೆ ಭಾರತದ್ದು. ಸಂಸ್ಕೃತದಲ್ಲಿ ನೀರಿನಲ್ಲಿ ಹುಟ್ಟಿದ ಮೀನು, ಮೊಸಳೆ, ತಾವರೆ, ನೈದಿಲೆಗಳೆಲ್ಲ ಅಂಬುಜಗಳೇ. ಆದರೆ ಎಷ್ಟು ಸುಂದರ ಹೂವು ತಾವರೆ! ನಮ್ಮೂರ ತಾವರೆ ಕೆರೆ ಇವತ್ತಿಗೂ ನನ್ನ ಸುಂದರ ನೆನಪು. ಈ ಊರು ಬತ್ತಿದ ನೀರು, ಮಾಯವಾದ ತಾವರೆಯಂತೆಯೇ ಪತನಗೊಂಡಿದೆ. ಗೇಣುದ್ದದ ದಳ, ನಡುವೆ ಹಳದಿ ಬೀಜದ ಪೀಠ, ಪೀಠದ ಸುತ್ತ ದುಂಬಿಯ ಆಕರ್ಷಣೆಯಾದ ಪಕಳೆಗಳು. ಹಾಗೆಯೇ ನೀರಿನ ಮೇಲೆ ಹರಡಿಕೊಂಡು ಮಂಜಿನ ತಂಪನ್ನು ಹೊಳೆಹೊಳೆವ ಹನಿಯಾಗಿ ಆಡಿಸುವ ತಾವರೆ ಎಲೆ. ತಾವರೆ ಬೀಜದ ಪಪ್ಪು ಕೂಡ ತಿನ್ನಲು ತುಂಬ ಸವಿ.

ಕಪ್ಪು ವಜ್ರ



ಮೊನ್ನೆ ದೂರದರ್ಶನದ "ಫೇಸ್ ಟು ಫೇಸ್" ಕಾರ್ಯಕ್ರಮದಲ್ಲಿ ಬಂದ ಜೂಲಿಯಸ್ ನೈರೇರೆ ಅವರೊಂದಿಗಿನ ಸಂದರ್ಶನವನ್ನು ನೀವು ನೋಡಿರಬಹುದು. ನಾನು ನೋಡಲಾಗಲಿಲ್ಲ, ಗೆಳೆಯರೊಬ್ಬರು ವಿವರವಾಗಿ ಹೇಳಿದರು; ನಮ್ಮ ಹಲವರು ಓದುಗರು ಪತ್ರ ಬರೆದು 'ಅದ್ಭುತ ವ್ಯಕ್ತಿ' ಅಂತ ತಿಳಿಸಿದ್ದಾರೆ. ನೋಡಲಾಗದ್ದಕ್ಕೆ ನಿರಾಶೆಯಾಗಿದೆ.

ನಾನು ಟಾಂಜನೀಯಾದ ಮಾಜಿ ಪ್ರಧಾನಿಯಾದ ಈ ನೈರೇರೆಯವರ ಅಭಿಮಾನಿ. ಈತ ತಮ್ಮ ಸಂದರ್ಶನದಲ್ಲಿ ತಮ್ಮಲ್ಲೇ ತಾವು ಹುದುಕಿಕೊಂಡು ಮಾತಾಡುತ್ತಿದ್ದ ರೀತಿ, ಈತನ ಸ್ಪಷ್ಟತೆ ಮತ್ತು ಘನತೆಯನ್ನು ಕುರಿತು ಗೆಳೆಯರು ಹೇಳಿದರು. ಒಂದು ಪ್ರಶ್ನೆ "ಈಚೆಗೆ ಯಾವ ಪುಸ್ತಕ ಓದ್ತಿದ್ದೀರಿ?" ಎಂಬುದಕ್ಕೆ "ಏನೇನೋ ಓದ್ತಿರ್ತೇನೆ.... ನಿಜ ಹೇಳಬೇಕೆಂದರೆ, ಮ್ಯಾಕಿಯವೆಲ್ಲಿಯ ಪುಸ್ತಕ ಓದ್ತಿದ್ದೇನೆ" ಅಂದರಂತೆ. ನಾನು ನಕ್ಕೆ. ನಾನು ಓದುತ್ತಿದ್ದುದೂ ಮ್ಯಾಕಿಯವೆಲ್ಲಿಯ 'ಪ್ರಿನ್ಸ್'

ಕಪ್ಪುಬಣ್ಣದ, ಪರಿಶುದ್ಧ ಚಾರಿತ್ರ್ಯದ ಈ ಆಫ್ರಿಕನ್ ನಾಯಕನ ಬಗ್ಗೆ ನಿಮಗೆ ಅಷ್ಟಾಗಿ ಗೊತ್ತಿರಲಿಕ್ಕಿಲ್ಲ. ಟಾಂಜನೀಯಾ ದೇಶ ಪೂರ್ಣ ಸಾಕ್ಷರಗೊಳ್ಳುವಂತೆ ಮಾಡಿದ ವ್ಯಕ್ತಿ ನೈರೇರೆ; ನೆಲ ಉಳುತ್ತಿದ್ದ ರೈತರನ್ನು ಸರ್ಕಾರದ ಆಯಕಟ್ಟಿನ ಸ್ಥಳಗಳಿಗೆ ನೇಮಕ ಮಾಡಿ ದೊಡ್ಡ ಪ್ರಯೋಗ ನಡೆಸಿದ ವ್ಯಕ್ತಿ. ಇಡೀ ಆಫ್ರಿಕಾ ಖಂಡ ಭ್ರಷ್ಟತೆ, ಹಿಂಸೆಯ ಅಮಲಿನಲ್ಲಿ ಮುಳುಗುತ್ತಿದ್ದಾಗ ಪ್ರಾಮಾಣಿಕವಾಗಿ ಆಡಳಿತ ನಡೆಸಿದ ನಾಯಕ. ಹಲವಾರು ವರ್ಷ ಪ್ರಧಾನಿಯಾಗಿದ್ದರೂ ನೈರೇರೆಯವರ ಖಾಸಗಿ ಮನೆಗೆ ಹೋಗುವ ರಸ್ತೆ ದುರಸ್ತಿಗೊಂಡಿರಲಿಲ್ಲ. ಆ ಬಗ್ಗೆ ಕೇಳಿದಾಗ ನೈರೇರೆ ಹೇಳಿದರು. "ನನ್ನ ದೇಶದ ಬಡಜನರು ಪ್ರಯಾಣಿಸುವ ರಸ್ತೆಗಳೆಲ್ಲ ಮೊದಲು ಉತ್ತಮಗೊಳ್ಳಲಿ" ಎಂದು.

ಗಾಂಧೀಜಿಯವರನ್ನು ಮೆಚ್ಚುವ ನೈರೇರೆ ಗಾಂಧೀಜಿಯವರನ್ನು ಅನುಕರಿಸುವವರಲ್ಲ. "ಅಹಿಂಸೆ ಒಳ್ಳೆಯದು. ಅದನ್ನು ಎಲ್ಲರೂ ಪಾಲಿಸಬೇಕು. ಆದರೆ ಹಿಂಸೆ ಅನಿವಾರ್ಯವಾದಾಗ ಅದನ್ನೂ ಬಳಸಬೇಕಾಗುತ್ತದೆ" ಇದು ನೈರೇರೆ ನಿಲುವು.

ರಷ್ಯಾ, ಆಫ್ರಿಕಾದ ದೇಶಗಳಿಗೆ 'ಬಡತನವೇ ಸಮಸ್ಯೆಯಲ್ಲ' ಎಂದು ಹೇಳಿದ ನೈರೇರೆ (ಇದು ಅವರ ಪುಸ್ತಕವೊಂದರ ಶೀರ್ಷಿಕೆ) ಒಂದು ದೇಶಕ್ಕೆ ಜಡತೆ, ಮೌಢ್ಯ, ವಿವಿಧ ರೀತಿಯ ಗುಲಾಮಗಿರಿ ಕೂಡ ಸಮಸ್ಯೆಗಳು ಎಂದು ನಂಬುವವರು.

ಟಾಟಾನ ನ್ಯಾನೋ ರಿಲಯನ್ಸ್‌ನ ಪವರ್ರು



ಇತ್ತೀಚೆಗೆ ಭಾರತದ ದೊಡ್ಡ ಬಂಡವಾಳಶಾಹಿಗಳಾದ ಟಾಟಾ ಮತ್ತು ರಿಲಯನ್ಸ್ ಕಂಪನಿಗಳು ಜನತೆಯ ಹೆಸರಲ್ಲಿ ಪ್ರಾರಂಭಿಸಿರುವ ಉದ್ಯಮದಲ್ಲಿ ಜನಪರ ಹಿತಾಸಕ್ತಿ ಎಷ್ಟು ಮತ್ತು ಜನರಿಗೆ ಹಾಕಿದ ಟೋಪಿಯೆಷ್ಟು ಎಂಬುದನ್ನು ಇಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

[illegible]ನೇ ಪುಟದಿಂದ

ಅಂದರೆ ಒಟ್ಟು ನ್ಯಾನೋ ಕಾರನ್ನು ತಯಾರು ಮಾಡಲು ಆಗುವ ಖರ್ಚು - 95,000 ರೂ.! ಅಂದರೆ ಟಾಟಾಗೆ ಒಂದು ನ್ಯಾನೋ ಕಾರು ಮಾರಿದರೆ ಬರುವ ಲಾಭ 5,000 ರೂ. ಮಾತ್ರ. ಇದರಲ್ಲಿ ಡೀಲರ್ಸ್ ಕಮಿಷನ್ ಹೋದರೆ ಅದು 2.5 ಸಾವಿರದಿಂದ ನಾಲ್ಕು ಸಾವಿರವಾಗಬಹುದು. ಈ ರೇಂಜಿನಲ್ಲಿ ಅದು 2020ರ ವೇಳೆಗೆ ನಲವತ್ತು ಲಕ್ಷ ಕಾರುಗಳನ್ನೇ ಉತ್ಪಾದನೆ ಮಾಡಿದರೂ ಟಾಟಾ ಅದರಿಂದ ಪಡೆಯುವುದು ಕೇವಲ 1,600 ಕೋಟಿ ರೂ.ಗಳನ್ನು ಮಾತ್ರ. ಆದರೆ ಈ ಪ್ಲಾಂಟನ್ನು ಸ್ಥಾಪಿಸಲು ಆಗುವ ಖರ್ಚು 1,700 ಕೋಟಿ ರೂ.ಗಳು! ಹಾಗಿದ್ದಲ್ಲಿ ಟಾಟಾ ತನಗೆ ನಷ್ಟ ಮಾಡಿಕೊಂಡು ಜನರಿಗೆ ಕಾರು ಕೊಡುತ್ತಿದ್ದಾನೆಯೇ?

ಜನರಿಗೆ ಸರ್ಕಾರ ಮತ್ತು ಟಾಟಾ ತೋರಿಸುವುದು ಈ ಮುಖವನ್ನು ಮಾತ್ರ. ಆದರೆ ತೆರೆಯ ಹಿಂದೆ ಸಾರಾಸಗಟು ಲಾಭಲೂಟಿಯ ಅವಕಾಶಗಳನ್ನು ಸರ್ಕಾರ ಕಲ್ಪಿಸಿಕೊಟ್ಟಿರುವುದನ್ನು ಸರ್ಕಾರವೂ ಹೇಳುವುದಿಲ್ಲ, ಟಾಟಾ ಕೂಡಾ ಹೇಳುವುದಿಲ್ಲ. ಉದಾಹರಣೆಗೆ ಬಂಗಾಳದ ಆಡಳಿತಾರೂಢ ಸಿಪಿಎಂ ಪಕ್ಷದವರೇ ಆಗಿದ್ದ ಅಶೋಕ್ ಮಿತ್ರ ಹೇಳುವಂತೆ ಟಾಟಾ ಸಂಸ್ಥೆಗೆ ಬಂಗಾಳ ಸರಕಾರ ಶೇ.1ರ ಬಡ್ಡಿ ದರದಲ್ಲಿ 200 ಕೋಟಿಗಳನ್ನು ಕೊಟ್ಟಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬಡ್ಡಿ ದರಗಳು ಶೇ.10-20ರವರೆಗೆ ಇರುವಾಗ ಈ ಶೇ.1ರ ಬಡ್ಡಿ ದರ ಎಂದರೆ ಟಾಟಾಗೆ ಮುಫತ್ ಆಗಿ 50-60 ಕೋಟಿ ಸಬ್ಸಿಡಿ ನೀಡಲಾಗಿದೆ ಎಂದೇ ಅರ್ಥ. ಇಷ್ಟು ಮಾತ್ರವಲ್ಲ ಪ. ಬಂಗಾಳ ಸರ್ಕಾರ ಮುಂದಿನ ಹತ್ತು ವರ್ಷಗಳ ಕಾಲ ನ್ಯಾನೋ ಕಾರಿಗೆ ಮೌಲ್ಯವರ್ಧಿತ ತೆರಿಗೆಯನ್ನು ಮನ್ನಾ ಮಾಡಿದೆ. ಅದರ ಬಾಬತ್ತಿನಲ್ಲೇ ಟಾಟಾಗೆ ಏನಿಲ್ಲವೆಂದರೂ 500 ಕೋಟಿ ರೂ.ಗಳಷ್ಟು ಉಳಿತಾಯವಾಗುತ್ತದೆಂದು ಹೇಳಲಾಗಿದೆ. ಇದಲ್ಲದೆ ಕೇಂದ್ರದಿಂದ ಎಕ್ಸೈಸ್ ಶುಲ್ಕ ವಿನಾಯತಿಯನ್ನೂ ಟಾಟಾ ಕೇಳುತ್ತಿದ್ದಾರೆ. ಆ ಬಾಬತ್ತಿನಲ್ಲೂ ಹೆಚ್ಚು ಕಡಿಮೆ 300 ಕೋಟಿ ರೂ.ಗಳಷ್ಟು ಉಳಿತಾಯ ಆಗಲಿದೆ. ಇದಲ್ಲದೆ ಈ ನ್ಯಾನೋ ಕಾರನ್ನು ತಯಾರು ಮಾಡುವ ಸಿಂಗೂರಿನಲ್ಲಿ ಟಾಟಾ ವಶಕ್ಕೆ ನೀಡಲಾಗಿರುವ 997 ಎಕರೆಗೆ ಟಾಟಾ ಕೊಡಬೇಕಾಗಿದ್ದದ್ದು 140 ಕೋಟಿ ರೂಪಾಯಿಗಳು. ಆದರೆ ಅದು ನೀಡುತ್ತಿರುವುದು ಕೇವಲ 20 ಕೋಟಿ. ಅಂದರೆ ಅದರಲ್ಲಿ ಸರ್ಕಾರವೇ -ಅಂದರೆ ಜನರ ಬೊಕ್ಕಸದಿಂದಲೇ - ಟಾಟಾಗೆ 120 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಅದೇ ರೀತಿ ಆ ಜಾಗವನ್ನು ಅಭಿವೃದ್ಧಿ ಪಡಿಸಲು ಕೇವಲ ಒಳ ಚರಂಡಿ ವ್ಯವಸ್ಥೆಗೇ ಟಾಟಾ 170 ಕೋಟಿ ವ್ಯಯ ಮಾಡಬೇಕಾಗುತ್ತಿತ್ತು, ಅದೂ 1,700 ಕೋಟಿ ಹೂಡಿಕೆಯ ಭಾಗವೇ ಆಗಿತ್ತು. ಆದರೆ ಅದನ್ನು ಇಡಿಯಾಗಿ ಸರ್ಕಾರವೇ ಜನರ ಬೊಕ್ಕಸದಿಂದ ಮಾಡಿಕೊಟ್ಟು ಟಾಟಾಗೆ 170 ಕೋಟಿ ಉಳಿತಾಯ ಮಾಡಿಕೊಟ್ಟಿದೆ. ಇದಲ್ಲದೆ ಜಗತ್ತಿನಲ್ಲಿ ವರ್ಷಕ್ಕೆ 2.5 ಲಕ್ಷ ಕಾರುಗಳನ್ನು ಉತ್ಪಾದಿಸುವ ಯಾವುದೇ ಕಾರು ಕಾರ್ಖಾನೆಗೂ 997 ಎಕರೆ ಬೇಕಾಗಿಲ್ಲ, ಒಂದು ಅಂದಾಜಿನ ಪ್ರಕಾರ ಅದಕ್ಕೆ ಬೇಕಾಗುವುದು ಕೇವಲ 100-200 ಎಕರೆ ಮಾತ್ರ. ಹೀಗಾಗಿ ದುರ್ಗಾಪುರ್ ಹೈವೇ ಪಕ್ಕದಲ್ಲಿರುವ, ಕೊಲ್ಕತ್ತಾಗೆ ಕೇವಲ 70 ಕಿ.ಮಿ ದೂರದಲ್ಲಿರುವ ಸುಮಾರು 700 ಎಕರೆ ಜಮೀನನ್ನು ತನಗೆ ಪೂರಕವಾದ ಕೈಗಾರಿಕೆಗಳಿಗಾದರೂ ಮಾರಿಕೊಳ್ಳಬಹುದು ಅಥವಾ ಒಂದು ಟೌನ್‌ಶಿಪ್ ಬೇಕಾದರೂ ಮಾಡಿಕೊಂಡು ಬಿಎಂಐಸಿಯ ಅಶೋಕ್ ಖೇಣಿಯ ತರ ದುಡ್ಡು ಗಳಿಸಬಹುದು. ಈ ಬಾಬತ್ತಿನಲ್ಲೂ ಟಾಟಾಗೆ ಏನಿಲ್ಲವೆಂದರೂ 70-100 ಕೋಟಿ ಆದಾಯ ಇದೆ. ಅಂದರೆ ಒಟ್ಟು ಉಳಿತಾಯ, ಸಬ್ಸಿಡಿ, ತೆರಿಗೆ ವಿನಾಯತಿ ಮತ್ತು ಭೂಮಿ ಎಲ್ಲವನ್ನೂ ಲೆಕ್ಕ ಹಾಕಿದರೆ 1,500 ಕೋಟಿಯಷ್ಟು ಹಣವನ್ನು ಸರ್ಕಾರವೇ ಜನರ ಬೊಕ್ಕಸದಿಂದ ಟಾಟಾಗೆ ನೀಡುತ್ತಿದೆ. 1,700 ಕೋಟಿ ಹೂಡಿಕಾ ವೆಚ್ಚದಲ್ಲಿ 1,500 ಕೋಟಿ ಹೀಗೆ ವಾಪಸ್ ಬಂದರೆ ಶೇ.80ರಷ್ಟು ಲಾಭವೇ ಅಲ್ಲವೇ? ಆಗ ಟಾಟಾರ ಹಿಡನ್ ಲಾಭ ಕಾರೊಂದಕ್ಕೆ ಕೇವಲ 5,000 ಅಲ್ಲ, ಬದಲಾಗಿ ಸರಾಸರಿ 50,000!

ಇದಲ್ಲದೆ ಈಗಾಗಲೇ ಟಾಟಾ ಸಹ ಮುಂದೆ ತಾನು ನ್ಯಾನೋವನ್ನು ಮಾರುಕಟ್ಟೆಗೆ ಇಳಿಸುವ ವೇಳೆಗೆ ಇತರ ಕಚ್ಚಾ ಸಾಮಗ್ರಿಗಳ ಬೆಲೆ ಏರಿದ್ದರೆ ಅದರ ವೆಚ್ಚವನ್ನು ಗ್ರಾಹಕರೇ ಭರಿಸಬೇಕಾಗುವುದೆಂದು ಸೂಚನೆ ನೀಡಿದ್ದಾರೆ. ಅಂದರೆ ಜನರ ಹಣ, ಆದರೆ ಟಾಟಾಗೆ ಮತ್ತು ಆತನ ಬ್ರಾಂಡಿಗೆ ಜಗತ್ತಿನಾದ್ಯಂತ ಪುಕ್ಕಟೆ ಪ್ರಚಾರ. ಇಷ್ಟು ಪ್ರಚಾರ ಸಿಗಬೇಕಾಗಿದ್ದರೆ ಮಿಕ್ಕ ಸಮಯದಲ್ಲಿ ಟಾಟಾ ಸಂಸ್ಥೆ ನೂರಾರು ಕೋಟಿಗಳನ್ನು ವ್ಯಯಿಸಬೇಕಾಗುತ್ತಿತ್ತು, ಈ ಪ್ರಚಾರ ಟಾಟಾ ಸಾಮ್ರಾಜ್ಯದ ಮುಂದಿನ ಜಾಗತಿಕ ವಿಸ್ತರಣೆಗೆ ಭೂಮಿಕೆ ಹಾಕಿಕೊಟ್ಟಿದೆಯಷ್ಟೇ. ಇದರಲ್ಲಿ ದೇಶ ಕಟ್ಟುವಿಕೆಯೇನಿದೆ? ಸ್ವಾರ್ಥವಿಲ್ಲದ ನಿರಂತರ ಅನ್ವೇಷಣೆಯೇನಿದೆ? ಸಮಷ್ಟಿ ಕಲ್ಯಾಣದ ಕಾಳಜಿಯೇನಿದೆ? ಆರೋಗ್ಯಕರ ಬಿಸಿನೆಸ್ ಸಂಹಿತೆ ಏನಿದೆ? ಇವೆಲ್ಲವೂ ಮೋಸಕರ ಬೋಗಲೆಂದೇ ಸಿದ್ಧವಿರುವ ಭದ್ರಬುನಾದಿಯಿಲ್ಲದ ಬುದ್ಧಿಜೀವಿಗಳ ಬಡಬಡಿಕೆಯಷ್ಟೆ.

ಇನ್ನು ರಿಲಯನ್ಸ್ ಪವರ್. ಈಗಲೂ ಕತ್ತಲಲ್ಲಿರುವ ಭಾರತದ ಸುಮಾರು ಒಂದು ಲಕ್ಷ ಹಳ್ಳಿಗಳಿಗೆ ಬೆಳಕನ್ನು ನೀಡುವ ನೆಪದಡಿ ವಿದ್ಯುತ್ತಿನ ಉತ್ಪಾದನೆಗೆ ಖಾಸಗಿ ಮತ್ತು ವಿದೇಶಿ ಬಂಡವಾಳವನ್ನು ಆಕರ್ಷಿಸಲು ಕೇಂದ್ರ ಸರ್ಕಾರ ಹೊಸ ಯೋಜನೆಯೊಂದನ್ನು ಅನುಷ್ಠಾನಕ್ಕೆ ತಂದಿದೆ. **UMPP-Ultra Mega Power Project** ಎಂದು ಕರೆಸಿಕೊಳ್ಳಲ್ಪಡುವ ಈ ಯೋಜನೆಯು ಮುಂದಿನ ಐದು ವರ್ಷಗಳಲ್ಲಿ 70,000 ಮೆಗಾವ್ಯಾಟನಷ್ಟು ಅಧಿಕ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಸೇರಿಸುವ ಉದ್ದೇಶ ಹೊಂದಿದೆ. ಈವರೆಗೆ ಖಾಸಗಿ ವಿದ್ಯುತ್ ಉತ್ಪಾದನಾ ಕಂಪನಿಗಳಿದ್ದರೂ ಅವು ಹೆಚ್ಚೆಂದರೆ 500-1500 ಮೆಗಾವ್ಯಾಟನಷ್ಟು ವಿದ್ಯುತ್ತನ್ನು ಉತ್ಪಾದಿಸುತ್ತಿದ್ದವಷ್ಟೆ. ಆದರೆ ಸರ್ಕಾರದ ಈ ಹೊಸ ಯೋಜನೆಯ ಪ್ರಕಾರ ಇವು ಕನಿಷ್ಠವೆಂದರೂ 4,000 ಮೆಗಾವ್ಯಾಟನಷ್ಟು ವಿದ್ಯುತ್ ಅನ್ನು ಉತ್ಪಾದಿಸಬೇಕು. ಇಂತಹ 13 ಬೃಹತ್ ಯೋಜನೆಗಳನ್ನು ಸರ್ಕಾರ ರೂಪಿಸಿದೆ. ಇದರಲ್ಲಿ ಒಂದು ಉತ್ತರ ಕನ್ನಡ ಜಿಲ್ಲೆಯ ತದಡಿಯಲ್ಲಿ ತಲೆಯೆತ್ತಬೇಕಿದ್ದ ಉಷ್ಣ ವಿದ್ಯುತ್ ಯೋಜನೆ.

ಇಂತಹ ಬೃಹತ್ ಯೋಜನೆಗಳಲ್ಲಿ ಹಣ ಹೂಡಿಕೆ ಮಾಡುವವರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡಲೆಂದೇ ಸರ್ಕಾರ ತನ್ನ ಅಧೀನದಲ್ಲಿರುವ **PFC-Power Finance Corporation** ಪುನರ್ರಚಿಸಿದೆ. ಈ ಸರ್ಕಾರಿ ಸಂಸ್ಥೆ ಮೊದಲು ಇಂತಹ ಯೋಜನೆಯನ್ನು ರೂಪಿಸಿ ಅದಕ್ಕೆ ಬೇಕಾದ ನೆಲ, ಜಲ, ಅನುಮೋದನೆ ಮತ್ತು ಪರವಾನಗಿಗಳನ್ನು ಪಡೆದುಕೊಂಡು ನಂತರ ಅಂತರರಾಷ್ಟ್ರೀಯ ಬಿಡ್ಡಿಂಗ್ ಕರೆಯುತ್ತದೆ. ಆ ರೀತಿ ಬಿಡ್ಡಿಂಗ್ ಮಾಡುವ ಕಂಪನಿಗಳಲ್ಲಿ ಯಾವ ಕಂಪನಿ ಪ್ರತಿ ಯುನಿಟ್ಟಿಗೆ ಅತ್ಯಂತ ಕಡಿಮೆ ದರವನ್ನು ಬಿಡ್ ಮಾಡುವುದೋ ಆ ಕಂಪನಿಗೆ ಮಾತ್ರ ಈ ಯೋಜನೆಯನ್ನು ನೀಡಲಾಗುತ್ತದೆ.

ಉದಾಹರಣೆಗೆ ಇಂದು ರಿಲಯನ್ಸ್ ಕಂಪನಿ ಈ ಯೋಜನೆಯಡಿಯಲ್ಲಿ ಶೇ.40 ರಷ್ಟು ಅಂದರೆ 28,200 ಮೆಗಾವ್ಯಾಟನಷ್ಟು ಉತ್ಪಾದನಾ ಪರವಾನಗಿಯನ್ನು ಪಡೆದುಕೊಂಡಿದೆ. ಅದರಲ್ಲಿ ಅದು ಇತ್ತೀಚೆಗೆ ಮಧ್ಯಪ್ರದೇಶದಲ್ಲಿ ಪಡೆದುಕೊಂಡ 4,000 ಮೆಗಾವ್ಯಾಟನಷ್ಟು ಸಾಮರ್ಥ್ಯದ ಸಾಸನ್ ವಿದ್ಯುತ್ ಉತ್ಪಾದನಾ ಯೋಜನೆಯೂ ಒಂದು. ಈ ಯೋಜನೆಯನ್ನು ಪಡೆಯಲು ರಿಲಯನ್ಸ್‌ನೊಂದಿಗೆ, ಟಾಟಾ, ಜಯಪ್ರಕಾಶ್ ಸಂಸ್ಥೆ ಮತ್ತು ಸರ್ಕಾರಿ ಸ್ವಾಮ್ಯದ ಎನ್‌ಟಿಪಿಸಿಯೂ ಬಿಡ್ಡಿಂಗ್ ಮಾಡಿತ್ತು. ಟಾಟಾ ಪ್ರತಿ ಯೂನಿಟ್ಟಿಗೆ 1.41 ರೂ.ಗಳನ್ನು ಬಿಡ್ ಮಾಡಿದ್ದರೆ, ಜಯಪ್ರಕಾಶ್ 2.12 ರೂ.ಗಳನ್ನೂ, ಎನ್‌ಟಿಪಿಸಿ 1.60 ರೂ.ಗಳನ್ನು ಬಿಡ್ ಮಾಡಿತ್ತು, ಆದರೆ ರಿಲಯನ್ಸ್ ಬಿಡ್ ಮಾಡಿದ್ದು ಕೇವಲ 1.19 ರೂ.ಗಳನ್ನು ಮಾತ್ರ.

ಅದೇ ರೀತಿ ಆಂಧ್ರದ ಕೃಷ್ಣಪಟ್ಟಣಮ್‌ನಲ್ಲಿ ಮತ್ತೊಂದು 4,000 ಮೆಗಾವ್ಯಾಟ ಯೋಜನೆಯನ್ನು ಸಹ ರಿಲಯನ್ಸ್ ಪಡೆದುಕೊಂಡಿದೆ. ಈ ಯೋಜನೆಯಲ್ಲೂ ಇತರ ಸ್ಪರ್ಧಿಗಳನ್ನು ಹಿಂದಕ್ಕೆ ಹಾಕಿ ರಿಲಯನ್ಸ್ ಕಂಪನಿ ಪ್ರತಿ ಯೂನಿಟ್ಟಿಗೆ ಕೇವಲ 2.33 ರೂ.ಗಳನ್ನು ಬಿಡ್ ಮಾಡಿ ಆ ಯೋಜನೆಯನ್ನು ತನ್ನದಾಗಿಸಿಕೊಂಡಿದೆ. ಈಮಾರ್ಗದಲ್ಲಿ ಅದು ಪಶ್ಚಿಮ ಭಾರತದಲ್ಲಿ 1220 ಮೆಗಾವ್ಯಾಟನಷ್ಟು ಉತ್ಪಾದನೆಯನ್ನೂ, ಉತ್ತರ ಭಾರತದಲ್ಲಿ 9080, ಈಶಾನ್ಯ ಭಾರತದಲ್ಲಿ 2900, ದಕ್ಷಿಣದಲ್ಲಿ 4000 ಮೆಗಾವ್ಯಾಟನಷ್ಟು ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಗಳನ್ನು ಹೊಡೆದುಕೊಂಡಿದೆ. ಈ ಪ್ರಕಾರ ಇನ್ನು ಐದು ಹತ್ತು ವರ್ಷಗಳಲ್ಲಿ ಅನಿಲ್ ಅಂಬಾನಿ ಭಾರತದ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಶೇ.40ಕ್ಕೂ ಹೆಚ್ಚಿನ ಪಾಲು ದಕ್ಕಿಸಿಕೊಳ್ಳುವುದಲ್ಲದೆ ಆ ಕ್ಷೇತ್ರದಲ್ಲಿ ಏಕಸ್ವಾಮ್ಯವನ್ನು ಪಡೆದುಕೊಂಡುಬಿಡುತ್ತಾನೆ. ಅದರ ಪರಿಣಾಮಗಳನ್ನು ಚರ್ಚಿಸುವ ಮೊದಲು ರಿಲಯನ್ಸ್‌ಗೆ ಮಾತ್ರ ಅತ್ಯಂತ ಕಡಿಮೆ ಬಿಡ್ ಮಾಡಿದರೂ ಲಾಭ ದೊರೆಯುವುದು ಹೇಗೆ ಎಂಬುದನ್ನು ಅರ್ಥ ಮಾಡಿಕೊಳ್ಳೋಣ.

1991ರಿಂದ ಜಾರಿಯಾಗುತ್ತಿರುವ ಜಾಗತೀಕರಣದ ನೀತಿಗಳಲ್ಲಿ ಅತ್ಯಂತ ಮುಖ್ಯವಾದದ್ದು ಮತ್ತು ಜನವಿರೋಧಿಯಾದದ್ದು ಅದರ ಖಾಸಗೀಕರಣದ ಅಂಶ. ಸರ್ಕಾರಿ ಸಂಸ್ಥೆಗಳನ್ನು ಲಾಭದಾಯಕವಲ್ಲ ಎನ್ನುವ ಹೆಸರಿನಲ್ಲಿ ಅತ್ಯಂತ ಕಡಿಮೆ ದರದಲ್ಲಿ ಖಾಸಗಿ ಉದ್ಯಮಿಗಳಿಗೆ ಮಾರಲಾಗುವ ಈ ದಂಧೆಯಲ್ಲಿ ಫಲಾನುಭವಿಗಳು ಖಾಸಗಿ ಉದ್ಯಮಿಗಳು ಮತ್ತು ಅವರಿಂದ ಲಂಚ ಪಡೆಯುವ ರಾಜಕಾರಣಿ ಮತ್ತು ಅಧಿಕಾರಿಗಳೇ. ಉದಾಹರಣೆಗೆ ಸರ್ಕಾರಿ ಸ್ವಾಮ್ಯದಲ್ಲಿದ್ದ 1,200 ಕೋಟಿಯ ಮಾಡ್ರನ್ ಬ್ರೆಡ್ ಕಂಪನಿಯನ್ನು ಹಿಂದೂಸ್ತಾನ್ ಲಿವರ್ ಕಂಪನಿಗೆ 120 ಕೋಟಿಗೆ ಮಾರಲಾಯಿತು. ಅದೇ ರೀತಿ 5,500 ಕೋಟಿ ಬೆಲೆಯ ಮತ್ತು 500 ಕೋಟಿಯಷ್ಟು ಹಣಕಾಸು ನಿಧಿಯನ್ನೇ ಹೊಂದಿದ್ದ ಬಾಲ್ಕೋ ಕಂಪನಿಯನ್ನು ಕೇವಲ 550 ಕೋಟಿಗೆ ಮಾರಲಾಯಿತು. ಹಾಗೆಯೇ ಇನ್ನೂ ಹಲವಾರು ಸರ್ಕಾರಿ ಕಂಪನಿಗಳ ಶೇರುಗಳನ್ನು ಖಾಸಗಿಯವರಿಗೆ ಮಾರುವಾಗ ಅದರ ಬೆಲೆಯನ್ನು ಅತ್ಯಂತ ಕಡಿಮೆ ಮಾಡಲಾಗಿತ್ತು. ಆದರೆ ಇವೆಲ್ಲವು ಬಯಲಿಗೆ ಬಂದು ಜನ ಮತ್ತು ಕೋರ್ಟುಗಳು ಅದರ ಬಗ್ಗೆ ತಕರಾರು ಮಾಡಲು ಪ್ರಾರಂಭಿಸಿದ ಮೇಲೆ ಸರ್ಕಾರ ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಈಗ ಬೇರೆ ತಂತ್ರವನ್ನು ಅನುಸರಿಸುತ್ತಿದೆ.

ಈಗ ಸರ್ಕಾರ ತನ್ನ ಕಂಪನಿಗಳ ಶೇರನ್ನು ಖಾಸಗಿಯವರಿಗೆ ಮಾರುವಾಗ ತನ್ನ ಶೇರಿನ ಬೆಲೆಯನ್ನು ಕಡಿಮೆ ಮಾಡುವುದಿಲ್ಲ, ಬದಲಿಗೆ ಆ ಶೇರಿಗೆ ಅತ್ಯಂತ ಹೆಚ್ಚಿನ ಬೆಲೆಯನ್ನು ಕೊಡುವವರಿಗೆ ಮಾತ್ರ ಮಾರುತ್ತದೆ. ಇದನ್ನು ನೋಡಿದರೆ ಸರ್ಕಾರದ ಬೊಕ್ಕಸಕ್ಕೆ ಇದರಿಂದ ಲಾಭವೇ ಅಲ್ಲವೇ ಎನ್ನಿಸಿಬಿಡಬಹುದು. ಉದಾಹರಣೆಗೆ ರಿಲಯನ್ಸ್ ಕಂಪನಿ 2002ರಲ್ಲಿ ತೈಲ ಮತ್ತು ಪೆಟ್ರೋಕೆಮಿಕಲ್ ಉದ್ಯಮದಲ್ಲಿದ್ದ ಸರ್ಕಾರಿ ಸ್ವಾಮ್ಯದ ಐಪಿಸಿಎಲ್ ಕಂಪನಿಯನ್ನು ಕೊಂಡುಕೊಂಡಿತು. ಅದರ ಶೇರು ಬೆಲೆ ಸರ್ಕಾರದ ಪ್ರಕಾರ 180 ರೂ.ಗಳಿತ್ತು, ರಿಲಯನ್ಸ್ ಕಂಪನಿಯೊಂದಿಗೆ ಬಿಡ್ ಮಾಡಿದ್ದ ಸರ್ಕಾರಿ ಸಂಸ್ಥೆಯಾಗಿದ್ದ ಐಒಸಿಎಲ್ ಕಂಪನಿ ಅದಕ್ಕೆ 121 ರೂ. ಬಿಡ್ ಮಾಡಿತ್ತು, ಆದರೆ ರಿಲಯನ್ಸ್ ಮಾತ್ರ ಅದಕ್ಕೆ 231 ರೂ.ಗಳನ್ನು ಬಿಡ್ ಮಾಡಿತ್ತು, ಅಂದರೆ ಒಟ್ಟು 1,400 ಕೋಟಿ ರೂ.ಗಳನ್ನು ಕೊಟ್ಟು ಐಪಿಸಿಎಲ್ ಕಂಪನಿಯನ್ನು ತನ್ನದಾಗಿಸಿಕೊಂಡಿತು.

ಇದರಿಂದ ಸರ್ಕಾರಕ್ಕೆ ಲಾಭವೇ ಆಯಿತೆಂದು ಖಾಸಗೀಕರಣವನ್ನು ವಿರೋಧಿಸುತ್ತಿದ್ದವರೂ ಸಹ ಸುಮ್ಮನಾದರು. ಆದರೆ ರಿಲಯನ್ಸ್ ಅದನ್ನು ಕೊಂಡ ಮರುವಾರದಲ್ಲಿ ಸರ್ಕಾರ ಅದು ಬಾಕಿ ತೆರಬೇಕಿದ್ದ 600 ಕೋಟಿ ರೂ. ಎಕ್ಸೈಸ್ ಡ್ಯೂಟಿಯನ್ನು ಮನ್ನಾ ಮಾಡಿತು. ಅದರ ಮುಂದಿನ ವಾರ ಅದು ವಿಶ್ವಬ್ಯಾಂಕಿಗೆ ತೆರಬೇಕಿದ್ದ 400 ಕೋಟಿ ರೂ.ಗಳಿಗೆ ಭಾರತ ಸರ್ಕಾರ ಸಾವರಿನ್ ಗ್ಯಾರಂಟಿ ನೀಡಿತು. ಅಂದರೆ ರಿಲಯನ್ಸ್ ತೆತ್ತಿದ್ದು 1,400 ಕೋಟಿ ಮಾತ್ರ. ಆದರೆ ಅದಕ್ಕೆ ಬದಲಾಗಿ ಸರ್ಕಾರ ತನ್ನ ಅಧಿಕೃತ ನೀತಿಗಳ ಪ್ರಕಾರವೇ 1,000 ಕೋಟಿಯಷ್ಟು ರಿಯಾಯಿತಿ ನೀಡಿತು. ಇದರರ್ಥ ಅದು ಕೊಟ್ಟ ಹಣದ ಶೇ.60ರಷ್ಟು ಹಿಂದಕ್ಕೆ ಪಡೆದಿತ್ತು, ಅಂದರೆ ಅದ ಐಪಿಸಿಎಲ್‌ನ ಪ್ರತಿ ಶೇರಿಗೆ 231 ರೂ. ಕೊಟ್ಟಿದ್ದರು ಅದರ ಶೇ. 60ರಷ್ಟನ್ನು, ಅಂದರೆ 150 ರೂ.ಅನ್ ಹಿಂದಕ್ಕೆ ಪಡೆದಿತ್ತು.

ಸಾರಾಂಶದಲ್ಲಿ ಅದು ಪ್ರತಿ ಶೇರಿಗೆ ನೀಡಿದ್ದು ಕೇವ ರೂ. 81 ಹೊರತು 231 ರೂ. ಅಲ್ಲ. ಬದಲಿ ಸರ್ಕಾರಿ ಸಂಸ್ಥೆಯಾದ ಐಒಸಿಎಲ್‌ಗೆ ಕೊಟ್ಟಿದ್ದರೆ ಕನಿ ಪ್ರತಿ ಶೇರಿಗೆ 41 ರೂ. ಅಧಿಕವಾಗಿ ಸಿಗುತ್ತಿತ್ತು. ಇಷ್ಟು ಮಾತ್ರವಲ್ಲದೆ ನಂತರ ತಿಳಿದು ಬಂದ ಸಂಗತಿಯೆಂದ ಈ ಸರ್ಕಾರಿ ಸಂಸ್ಥೆ ರಿಲಯನ್ಸ್‌ಗಿಂತ ಕಡಿಮೆ ಬಿಡ್ ಮಾಡಬೇಕೆಂದು ಈ ಮೊದಲೇ ಪರಸ್ಪರ ಒಪ್ಪಂದ ಬರಲಾಗಿತ್ತೆಂಬುದು. ಇದು ಜನತೆಯನ್ನು ಮೋಸಗೊಳಿಸಲ ಸರ್ಕಾರ ಮತ್ತು ರಿಲಯನ್ಸ್‌ನಂಥ ಪರಮ ವಂಚಕ ಕಂಪ ಹೆಣೆದಿರುವ ಜನದ್ರೋಹಿ, ದೇಶದ್ರೋಹಿ ಸಂಚು ಅಂಬಾನಿಗಳು ಈ ದೇಶದ ಅತಿ ದೊಡ್ಡ ಶ್ರೀಮಂತರಾಗಿರು ವುದು ಈ ರೀತಿ ಜನರ ಬೊಕ್ಕಸಕ್ಕೆ ಕನ್ನ ಕೊರೆದಿರು ವುದರಿಂದ. ದುರಂತವೆಂದರೆ 1991ರ ಹಿಂದೆ ಇವೆಲ ಕಾನೂನುಬದ್ಧ ಅಪರಾಧವಾಗಿತ್ತು, ಈಗ ಅವೇ ಅಭಿವೃ ಸ್ನೇಹಿ ನೀತಿಗಳಾಗಿ ಬಿಟ್ಟಿವೆ.

ಈ ಅಲ್ಟ್ರಾ ವಿದ್ಯುತ್ ಯೋಜನೆಗಳಲ್ಲೂ ರಿಲಯನ ಕಂಪನಿ ಅತಿ ಕಡಿಮೆ ಪ್ರತಿ ಯೂನಿಟ ದರವನ್ನು ಕೋಟ್ ಮಾಡುತ್ತಿದ್ದರೂ ಲಾ ಮಾಡುತ್ತಿರುವುದು ಹೀಗೆ. ಉದಾಹರಣೆ ಅದು ಸ್ಥಾಪಿಸಲಿರುವ ವಿದ್ಯುತ್ ಸ್ಥಾವ ಗಳಲ್ಲಿ ಆರು ಕಲ್ಲಿದ್ದಲು ಆಧಾರಿತ, ಎರಡ ಗ್ಯಾಸ್ ಆಧಾರಿತ ಮತ್ತು ನಾಲ್ಕು ಜ ಆಧಾರಿತ ಘಟಕಗಳು. ಇವುಗಳಲ್ಲಿ ಇಂಧ ವಾಗಿ ಬಳಸಲಿರುವ ನ್ಯಾಚುರಲ್ ಗ್ಯಾಸ ಅನ್ನು ಅದು ಈಗಾಗಲೇ ಮೇಲೆ ವಿವರಿ ಲಾದ ರೀತಿಯಲ್ಲಿ ಸರ್ಕಾರದಿಂದ ತಾನ ವಶಪಡಿಸಿಕೊಂಡಿರುವ ಸ್ಥಾವರಗಳಿಂ ಅತ್ಯಂತ ಕಡಿಮೆ ದರದಲ್ಲಿ ಪಡೆದ ಕೊಳ್ಳುತ್ತದೆ. ಹಾಗೆಯೇ ಕಲ್ಲಿದ್ದಲನ್ನು ಪಡೆದ ಕೊಳ್ಳಲೂ ಸಹ ಅದು ಈಗಾಗಲ ಸರ್ಕಾರದಿಂದ ಹಲವಾರು ಗಣಿಗಳನ ಪುಕ್ಕಟೆಯಾಗಿ ಪಡೆದುಕೊಂಡಿದೆ. ವಿದ್ಯು ಉತ್ಪಾದನೆಯಲ್ಲಿ ಪ್ರಧಾನ ವೆಚ್ಚ ಇಂಧನದ್ದ ವಿದ್ಯುತ್ ಉತ್ಪಾದನಾ ಉದ್ಯಮಕ್ಕೆ ಬರು ಮುನ್ನ ಅವೆಲ್ಲವನ್ನೂ ಸರ್ಕಾರದಿಂ ವಶಪಡಿಸಿಕೊಂಡೇ ಈ ಉದ್ಯಮ ಕಾಲಿಟ್ಟಿರುವ ರಿಲಯನ್ಸ್ ಕಂಪನಿ ಸಹ ವಾಗಿ ಬೇರೆ ಯಾವುದೇ ಕಂಪನಿಗೆ ಇಲ್ಲದಿರುವ ಲಾಭ ವಕಾಶವನ್ನು ಪಡೆದುಕೊಂಡಿದೆ. ಅಂದರೆ ಮೇಲ್ನೋಟ ಅತ್ಯಂತ ಕಡಿಮೆ ದರದಲ್ಲಿ ವಿದ್ಯುತ್ ಸರಬರಾಜ ಮಾಡುವಂತೆ ತೋರಿದರೂ ಅದು ದರ ಏರಿಸಿದ ಎಷ್ಟು ಲಾಭ ಮಾಡುತ್ತಿತ್ತೋ ಅದರ ದುಪ್ಪಟ್ಟು ಲಾಭವ ಅದು ಸರ್ಕಾರಿ ಬೊಕ್ಕಸಕ್ಕೆ ಮತ್ತು ಸಂಪನ್ಮೂಲಕ್ಕೆ ಕ ಹಾಕುವುದರಿಂದ ಪಡೆದುಕೊಳ್ಳುತ್ತಿದೆ.

ಇದೇರೀತಿ ಲಾಭದ ಕಳ್ಳದಾರಿಯನ್ನೇ ಹೆದ್ದಾ ಯನ್ನಾಗಿಸಿಕೊಂಡಿರುವ ಟಾಟಾ, ಎಸ್ಸಾರ್, ಎಲ್ ಅಂ ಟಿ, ಜಿಂದಾಲ್‌ನಂತಹ ಸ್ಥಳೀಯ ದೊಡ್ಡ ಉದ್ಯಮಿಗಳ ಎಇಎಸ್, ಚೈನಾ ಲೈಟ್ ಅಂಡ್ ಪವರ್, ಮಿಟ್ಸುಬಿ ಸೂಯಿಜ್ ಎನರ್ಜಿ, ಸುಮಿಟೊಮೋನಂಥ ವಿದೇ ಬಹುರಾಷ್ಟ್ರೀಯ ಕಂಪನಿಗಳು ಈ ಅಲ್ಟ್ರಾ ಯೋಜನೆಗ ಲಾಭ ಪಡೆಯಲು ತುದಿಗಾಲಲ್ಲಿ ನಿಂತಿವೆ.

ಮೇಲಿನ ರಿಲಯನ್ಸ್‌ನ ದ್ರೋಹದ ಕಥೆ ಸ್ಪಷ್ಟ ಪಡಿ ವಂತೆ ಬೆಳಕನ್ನು ಉತ್ಪಾದಿಸುವ ಈ ವಿದ್ಯುತ್ ಕಂಪನಿಗ ಹೆಚ್ಚೆಚ್ಚು ಬೆಳಕನ್ನು ಉತ್ಪಾದಿಸಿದಷ್ಟೂ ಬಡ ಮಧ್ಯ ವರ್ಗದವರ ಬದುಕು ಹೆಚ್ಚೆಚ್ಚು ಅಂಧಕಾರದತ್ತ ಸರಿಯುತ್ತ

ಟಾಟಾನ ನ್ಯಾನೋ ಕಾರಿನ ಮತ್ತು ರಿಲಯ ಪವರ್‌ನ ರಾಜಕೀಯ, ಆರ್ಥಿಕತೆ ಮತ್ತು ದ್ರೋಹ ಕಥೆ ಸ್ಪಷ್ಟಪಡಿಸುವುದೊಂದೇ: ಜನತೆಯನ್ನು ಸರ್ಕಾ ಮತ್ತು ಈ ಕಂಪನಿಗಳು ಬಣ್ಣದ ಮಾತಿನಲ್ಲಿ ಮರ ಗೊಳಿಸಿ ಕಿತ್ತು ತಿನ್ನುತ್ತವೆ. ಆದರೂ ಅಭಿವೃದ್ಧಿಯ ಭ್ರಾಮ ಯಲ್ಲಿ ಪ್ರಾಣ ಹೋದರೂ ಶವ ಮಾತ್ರ ಚಲಿಸುತ್ತಿರುತ್ತ ಅದನ್ನೇ ಜೀವಂತಿಕೆ ಎಂದು ಬೆರಗುಗಣ್ಣಿನ ಪಂಡಿತ ಬಣ್ಣಿಸುತ್ತಾರೆ.

ಇಂಥ ಗಾಂಧಾರಿ ಕುರುಡಿನ ಜನರನ್ನು ನೋಡಿಯ ಲೆನಿನ್ ಹೀಗೆ ಹೇಳುತ್ತಾರೆ:

"ಎಲ್ಲಿಯತನಕ ಜನತೆ ಆಳುವವರ್ಗದ ಪ್ರತಿ ಭರವ ಪ್ರತಿ ಘೋಷಣೆ, ಪ್ರತಿ ಯೋಜನೆಯ ಹಿಂದೆ ಒಂ ಸ್ಪಷ್ಟ ವರ್ಗ ಹಿತಾಸಕ್ತಿಯನ್ನು ಅರಿಯಲು ವಿಫಲರಾ ವರೋ ಅಲ್ಲಿಯವರೆಗೆ ಅವರು ವಂಚನೆಯ ಮತ್ತು ಆ ವಂಚನೆಯ ಮುಗ್ಧ ಬಲಿಪಶುಗಳಾಗುತ್ತಲೇ ಇರುತ್ತಾ



ಬಿಂದಾಸ್ ಬದಲಾವಣೆ!

ಪುನೀತ್ ರಾಜ್‌ಕುಮಾರ್ ನಟಿಸಿರುವ 'ಬಿಂದಾಸ್' ಚಿತ್ರವನ್ನು ಬಿಡುಗಡೆಗೆ ಸಿದ್ಧಪಡಿಸಿದ ಮರುಕ್ಷಣವೇ ಅದರ ನಿರ್ದೇಶಕ ಡಿ. ರಾಜೇಂದ್ರ ಬಾಬು ಗಣೇಶ್ ನಟಿಸುತ್ತಿರುವ 'ಬೊಂಬಾಟ್' ಎಂಬ ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಇದರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್. ಇದರಲ್ಲಿ ಮೊದಲ ಬಾರಿಗೆ ಗಣೇಶ್ ಜೊತೆ ರಮ್ಯಾ ನಟಿಸುತ್ತಿದ್ದಾಳೆ.

ಈ ಚಿತ್ರದ ಒಂದು ವಿಶೇಷತೆ ಯಾವುದೆಂದರೆ ರಾಜೇಂದ್ರ ಬಾಬು ಮತ್ತು ರಾಕ್‌ಲೈನ್‌ರಂತಹ ಹಳೇ ತಲೆಗಳು ಕೂಡ ತಮ್ಮ ಚಿತ್ರಕ್ಕೆ 'ಬೊಂಬಾಟ್' ಎಂದು ನಾಮಕರಣ ಮಾಡಿರುವುದು! ಕಾಲ ಬದಲಾಗಿದೆ; ಕಾಲಕ್ಕೆ ತಕ್ಕಂತೆ ಹಳಬರೂ ಕುಣಿಯುತ್ತಿದ್ದಾರೆ ಎನ್ನೋಣವೇ?

ಮಯೂರನ 'ಮುನಿಯಾ'




ಒನ್ ಲೈನ್:

– ಸೋಲಿನ ಮೇಲೆ ಸೋಲು ಕಂಡಿರುವ ನಟ ಮಯೂರ್ ಈಗ 'ಮುನಿಯಾ' ಆಗಿ ತೆರೆಯ ಮೇಲೆ ಕಾಣಿಸಿಕೊಂಡು ತನ್ನ ಸಿನಿಮಾ 'ದುನಿಯಾ'ವನ್ನು ಬದಲಾಯಿಸಿಕೊಳ್ಳಲು ಹೊರಟಿದ್ದಾನೆ. ಈ ಚಿತ್ರಕ್ಕಾಗಿ ಹಳ್ಳಿ ಭಾಷೆಯನ್ನು ಕಲಿತಿರುವ ಮಯೂರ್ ಬಗ್ಗೆ ಪ್ರೇಕ್ಷಕ ಮಹಾಪ್ರಭು 'ಮುನಿಸಿ'ಕೊಳ್ಳದಿದ್ದರೆ ಸಾಕು.

ಕೊನೆಗೂ ಬಿಡುಗಡೆ ಕಂಡಿತು:

– ಒಂಭತ್ತು ಜನ ನಟಿಯರು ಅಭಿನಯಿಸಿರುವ, ಮಹಿಳಾ ನಿರ್ಮಾಪಕಿ ಜಯಶ್ರೀದೇವಿ ತಯಾರಿಸಿರುವ 'ನವಶಕ್ತಿ ವೈಭವ' ಎಂಬ ಸಿನಿಮಾ ಕೊನೆಗೂ ಬಿಡುಗಡೆಗೊಂಡಿದೆ. ಮಹಿಳಾವಾದಕ್ಕೆ ನಮ್ಮ ಬೆಂಬಲ ಸದಾ ಇರುವುದರಿಂದ, ಮತ್ತು ಮಹಿಳಾ ಶಕ್ತಿಗಳನ್ನು ಪ್ರೋತ್ಸಾಹಿಸುವುದು ನಮ್ಮ ಉದ್ದೇಶವಾಗಿರುವುದರಿಂದ ಈ ಚಿತ್ರದಲ್ಲಿ ತೊಡಗಿಸಿಕೊಂಡಿರುವ ಹೆಂಗೆಳೆಯರ ಮನಸ್ಸಿಗೆ ನೋವುಂಟು ಮಾಡಬಾರದೆಂದು ನಾವು ಈ ಚಿತ್ರದ ಬಗ್ಗೆ ಏನನ್ನೂ ಹೇಳುತ್ತಿಲ್ಲ!!



ಮಟ್ಟಣ್ಣನ 'ತಂತ್ರ'


ಈಗಾಗಲೇ 'ಮಠ' ಚಿತ್ರದಲ್ಲಿ ಒಂದು ಪುಟ್ಟ ಪಾತ್ರದಲ್ಲೂ, 'ಮುಕ್ತ' ಧಾರಾವಾಹಿಯ ಕೆಲ ಎಪಿಸೋಡುಗಳಲ್ಲೂ ಕಾಣಿಸಿಕೊಂಡಿರುವ ಮಟ್ಟಣ್ಣನವರ್ ಎಂಬ ಮಾಜಿ ಪೊಲೀಸಪ್ಪನಿಗೂ, ನಟನೆಗೂ ಕಿಂಚಿತ್ತೂ ಸಂಬಂಧವಿಲ್ಲ ಎಂಬುದು ಸಾಬೀತಾಗಿದೆ. ಆದರೂ ಜಿ.ಆರ್. ಮೋಹನ್‌ಕೃಷ್ಣ ಎಂಬ ಮಂಗಳೂರು ಮೂಲದ ಆಸಾಮಿ ಮಟ್ಟಣ್ಣನ ನಟನಾ ಸಾಮರ್ಥ್ಯವನ್ನು ನಂಬಿ ಆತನಿಗಾಗಿ 'ತಂತ್ರ' ಎಂಬ ಸಿನಿಮಾ ಮಾಡಲು ಸಿದ್ಧತೆ ನಡೆಸಿದ್ದಾರೆ.

ಇದು ಸೈಬರ್ ಕ್ರೈಂ ಕುರಿತ ಕತೆಯಾಗಿದ್ದು ಅದರಲ್ಲಿ ಹೀರೋ ಆಗಿ ಅಭಿನಯಿಸಲಿರುವ ಮಟ್ಟಣ್ಣನ ಪಾತ್ರ ಸೈಬರ್ ಕ್ರೈಮ್ ಬ್ರಾಂಚಿನ ಎಸಿಪಿಯದ್ದಂತೆ.

ರಕ್ತಪಿಪಾಸು ಸಂಘಪರಿವಾರದ ಬಿಜೆಪಿಯ ಯುವ ಮೋರ್ಚಾದ ಹಾಲಿ ರಾಜ್ಯಾಧ್ಯಕ್ಷನಾಗಿರುವ ಮಟ್ಟಣ್ಣನವರ್ ಕಳೆದ ಬಾರಿಯೇ ಲೋಕಸಭೆ ಅಥವಾ ವಿಧಾನಸಭೆ ಚುನಾವಣೆಗಳಲ್ಲಿ ಟಿಕೆಟ್ ಬಯಸಿದ್ದ. ಅದು ಸಿಗದಿದ್ದಾಗ ಅದೆಂಥದ್ದೋ 'ಚಳವಳಿ'ಗಳನ್ನು ನಡೆಸಲು ಯತ್ನಿಸಿ ತೋಪಾಗಿದ್ದ. ಈಗ ಮತ್ತೆ ಚುನಾವಣೆಗಳು ಬರಲಿದ್ದು ಮಟ್ಟಣ್ಣ ಮತ್ತೆ ಟಿಕೆಟ್ ಆಕಾಂಕ್ಷಿಯಾದರೆ ಅಚ್ಚರಿ ಇಲ್ಲ. ಆ ನಿಟ್ಟಿನಲ್ಲಿ 'ತಂತ್ರ' ಎಂಬ ಈ ಚಿತ್ರವೂ ಒಂದು ತಂತ್ರವಾಗಿರಬಹುದೇ?

ಅದೇನೇ ಇರಲಿ, ಮಟ್ಟಣ್ಣನ ಈ 'ತಂತ್ರ'ದಿಂದಾಗಿ ನಿರ್ಮಾಪಕ ಮಾತ್ರ ಅತಂತ್ರನಾಗದಿದ್ದರೆ ಅದೇ ಆತನ ಪುಣ್ಯ!


ಓಂ ಪ್ರಕಾಶ್ ಪ್ರಮಾಣ



ಅದೇನೋ 'ಶೀಲ ಕೆಟ್ಟ ಮೇಲೆ ಬುದ್ಧಿ ಬಂತು' ಅಂತಾರಲ್ಲ ಹಾಗ ತಮಿಳು ಮತ್ತು ತೆಲುಗು ಸಿನಿಮಾಗಳಿಂದ ಕದ್ದು ರೀಮಿಕ್ಸ್ ಸಿನಿಮಾಗಳನ್ನು ಮಾಡಿ ಕನ್ನಡ ಪ್ರೇಕ್ಷಕರ ಅಭಿರುಚಿಯನ್ನು ಕೆಡಿಸಿದ ಮೇಲೆ ನಿರ್ದೇಶಕ ಓಂ ಪ್ರಕಾಶ್ ರಾವ್‌ಗೆ ಬುದ್ಧಿ ಬಂದಿದೆಯಂತೆ. ಹಾಗಂತ ಅವರೇ ಮೊನ್ನೆ ಒಪ್ಪಿಕೊಂಡಿದ್ದಾರೆ!

"ಇನ್ನು ಮುಂದೆ ನಾನು ಹೀಗೆ ಕದ್ದು ಸಿನಿಮಾ ಮಾಡುವುದನ್ನು ನಿಲ್ಲಿಸುತ್ತೇನೆ. ಸ್ವಂತ ಕತೆ ಬರೆದು ಸಿನಿಮಾ ಮಾಡುತ್ತೇನೆ" ಎಂದು ಆತ ಮೊನ್ನೆ ಪತ್ರಕರ್ತರ ತಲೆಯ ಮೇಲೆ ಕೈಯಿಟ್ಟು ಪ್ರಮಾಣ ಮಾಡಿದ್ದಾರೆ.

ಓಂ ಪ್ರಕಾಶ್ ರಾವ್‌ಗೆ ಹೀಗೆ ಆಣೆ ಮಾಡುವುದು ಹೊಸದೇನಲ್ಲ. ಅದನ್ನು ಚೆನ್ನಾಗಿ ಅರಿತಿರುವ ಪತ್ರಕರ್ತರು ಈಗ ಪ್ರಾಣಭಯದಿಂದ ಓಡಾಡುತ್ತಿದ್ದಾರೆ ಎಂಬುದೂ ಅಷ್ಟು ಸುಳ್ಳಲ್ಲ!



'ಮೆರವಣಿಗೆ'ಯಲ್ಲಿ ಪ್ರಜ್ವಲ್

'ನೆನಪಿರಲಿ' ಪ್ರೇಮ್ ನಟಿಸಿದ್ದ ಚಿತ್ರಗಳೆಲ್ಲ ಸಾಲಾಗಿ ತೋಪು ಹೊಡೆದ ನಂತರ ಪ್ರಜ್ವಲ್ ಎಂಬ ಮತ್ತೊಬ್ಬ ಯುವ ನಟನತ್ತ ಗಾಂಧಿನಗರ ನೋಡುತ್ತಿದೆ.

'ಸಿಕ್ಸರ್' ಎಂಬ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಪಡೆದ ಪ್ರಜ್ವಲ್ ಅದರಲ್ಲಿ ಸಿಕ್ಸರ್ ಬಾರಿಸಲಿಲ್ಲ, ಹಾಗೆಯೇ ಆ ನಂತರ ಬಂದ 'ಗೆಳೆಯ'ನನ್ನೂ ಉಳಿಸಲಿಲ್ಲ. ಆದರೂ ಈತನ ಬಗ್ಗೆ ಹಲವಾರು ಜನ ವಿಶ್ವಾಸ ಇಟ್ಟುಕೊಂಡಿದ್ದಾರೆ. ಅದರಲ್ಲೂ ಈತ ನಟಿಸಿರುವ ಮತ್ತು ಮಹೇಶ್ ಬಾಬು ನಿರ್ದೇಶಿಸಿರುವ 'ಮೆರವಣಿಗೆ' ಬಗ್ಗೆ ಗಾಂಧಿನಗರ ಈಗ ಅಪಾರ ಕುತೂಹಲವನ್ನು ಹೊಂದಿದೆ. ಅದಕ್ಕೆ ಕಾರಣ ಮಹೇಶ್ ಬಾಬು ಈಗಾಗಲೇ 'ಅರಸು' ಮತ್ತು 'ಆಕಾಶ್' ಎಂಬ ಎರಡು ಹಿಟ್ ಚಿತ್ರಗಳನ್ನು ನೀಡಿರುವುದು.

ಪ್ರಜ್ವಲ್ ನಟಿಸಿರುವ 'ಮೆರವಣಿಗೆ' ಮತ್ತು 'ಗಂಗೆ ಬಾರೇ ತುಂಗೆಬಾರೆ' ಸಿನಿಮಾಗಳು ಹಿಟ್ ಆದರೆ ಆತನಿಗೆ ಕೈತುಂಬ ಅವಕಾಶಗಳು ಸಿಗುವುದು ಗ್ಯಾರಂಟಿ ಎನ್ನುತ್ತಿದೆ ಗಾಂಧಿನಗರ. ಹೀಗಾಗಿ ಮಾರ್ಚ್ ತಿಂಗಳಲ್ಲಿ ಬಿಡುಗಡೆಯಾಗಲಿರುವ ಈ ಎರಡೂ ಚಿತ್ರಗಳು ಪ್ರಜ್ವಲ್ ಪಾಲಿಗೆ ಅಗ್ನಿಪರೀಕ್ಷೆಯಾಗಲಿವೆ.

'ಸಂಸ್ಕಾರ' ನಿರ್ದೇಶಕನ ಸ್ಮರಣೆ

ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಕಿರುತೆರೆಗೆ ಅಳವಡಿಸಿದ್ದ ಹುಲಿ ಚಂದ್ರಶೇಖರ್ ಎಂಬ ನಿರ್ದೇಶಕ ಈಗ 'ಸಂಸ್ಕಾರ' ಚಿತ್ರದ ನಿರ್ದೇಶಕ ಪಟ್ಟಾಭಿರಾಮ ರೆಡ್ಡಿಯವರನ್ನು ಕುರಿತ ಎರಡು ಗಂಟೆಗಳ ಡಾಕ್ಯುಮೆಂಟರಿ ಸಿನಿಮಾ ಮಾಡಿದ್ದಾರೆ. ಕನ್ನಡದಲ್ಲಿ ಹೊಸ ಅಲೆಯ ಸಿನಿಮಾಗಳಿಗೆ ನಾಂದಿ ಹಾಡಿದ್ದ 'ಸಂಸ್ಕಾರ' ಚಿತ್ರದ ನಿರ್ದೇಶಕನ ಬಗ್ಗೆ ಮಾಡಲಾಗಿರುವ ಈ ಡಾಕ್ಯುಮೆಂಟರಿ ಚಿತ್ರ ಮಾತ್ರ ತೆಲುಗು ಮತ್ತು ಇಂಗ್ಲಿಷ್‌ನಲ್ಲಿರುವುದು ವಿಚಿತ್ರ. ಆದರೆ ಕೆಲ ವರ್ಷಗಳ ಹಿಂದೆ ವಾರ್ತಾ ಇಲಾಖೆಯ ಅಧಿಕಾರಿಗಳು ರೆಡ್ಡಿಯವರು ಕನ್ನಡಿಗರಲ್ಲ ಎಂಬ ಕಾರಣಕ್ಕೆ ಸರ್ಕಾರದ ವತಿಯಿಂದ ಡಾಕ್ಯುಮೆಂಟರಿ ಮಾಡಲು ಅನುಮತಿ ಕೊಟ್ಟಿರಲಿಲ್ಲವಂತೆ. ಅದಕ್ಕಾಗಿಯೇ ಪಟ್ಟಾಭಿರಾಮರೆಡ್ಡಿ ಅವರ ಕುಟುಂಬದವರ ನಿಧಿಯಿಂದಲೇ ಈ ಡಾಕ್ಯುಮೆಂಟರಿ ನಿರ್ಮಿಸಿದ್ದಾರಂತೆ.

ಬರುವ ಫೆಬ್ರವರಿ 7 ರೆಡ್ಡಿಯವರ ಜನ್ಮದಿನವಾಗಿದ್ದು ಅಂದೇ ಇದನ್ನು ಬಿಡುಗಡೆ ಮಾಡಲಾಗುತ್ತಿದೆ.


ಅನಿಸಿದ್ದು ಯಾಕೋ ಹೀಗೆ....



ಸಂಗೀತ ನಿರ್ದೇಶಕ ಮನೋಮೂರ್ತಿ, ಕವಿ ಜಯಂತ್ ಕಾಯ್ಕಿಣಿ ಮತ್ತು ಹಾಡುಗಾರ ಸೋನು ನಿಗಮ್ – ಈ ಮೂವರ ಸಂಗಮ ಇತ್ತೀಚೆಗೆ ಹಲವಾರು ಹಿಟ್ ಹಾಡುಗಳನ್ನು ನೀಡಿ ಚಿತ್ರಸಂಗೀತ ರಸಿಕರನ್ನು ಥ್ರಿಲ್ ಮಾಡಿದೆ. ಆದರೆ ಆ ಯಶಸ್ಸಿನಿಂದ ಈ ಮೂವರು ಪ್ರತಿಭಾವಂತರಿಗೆ ದಕ್ಕಿದ್ದಾದರೂ ಏನು?

ಅವರವರ ಸಂಭಾವನೆ ಹೊರತಾಗಿ ಏನೂ ಇಲ್ಲ ಎಂದರೆ ತಪ್ಪಾಗಲಾರದು. ಯಾಕೆಂದರೆ ಅವರ ಹಾಡುಗಳಿಂದ ಆಡಿಯೋ ಕಂಪನಿಗಳು ಮತ್ತು ಚಿತ್ರದ ನಿರ್ಮಾಪಕರು ಲಕ್ಷಾಂತರ ರೂಪಾಯಿಗಳನ್ನು ಗಳಿಸಿದರೆ ಹೊರತು ಇವರಿಗೆ ಸಂಭಾವನೆಗಿಂತ ಹೆಚ್ಚಾಗಿ ಚಿಕ್ಕಾಸೂ ಸಿಗಲಿಲ್ಲ. ಅಂದಹಾಗೆ 'ಮುಂಗಾರು ಮಳೆ' ಚಿತ್ರದ ಹಾಡುಗಳಿಂದಲೇ ಅದರ ನಿರ್ಮಾಪಕ ಕೃಷ್ಣಪ್ಪನವರಿಗೆ ಹತ್ತು ಕೋಟಿ ರೂಪಾಯಿಗಳು ಬಂದವೆಂದರೆ ಅಚ್ಚರಿ ಆಗುವುದಿಲ್ಲ, ಅಲ್ಲವೆ?

ಈ ಮಧ್ಯೆ ಸೋನು ನಿಗಮ್‌ಗೆ ಒಂದು ಯೋಚನೆ ಹೊಳೆದಿದೆ. "ನಮ್ಮ ಮೂವರ ಕಾಂಬಿನೇಷನ್‌ನಿಂದಾಗಿ ನಾನು ಕಳೆದ ವರ್ಷ ಏಳು ಹಿಟ್ ಹಾಡುಗಳನ್ನು ನೀಡುವಂತಾಯಿತು. ಕನ್ನಡಿಗರು ನನಗೆ ಅಭೂತಪೂರ್ವ ಬೆಂಬಲವನ್ನು ನೀಡಿದ್ದಾರೆ. ಆದ್ದರಿಂದ ಕನ್ನಡಿಗರಿಗೆ ನಾನು ಏನನ್ನಾದರೂ ಕೊಡಬೇಕೆನಿಸುತ್ತಿದೆ..." ಎಂದರಂತೆ. ಆಗ ಹೊಳೆದಿದ್ದೇ ಈ ಹೊಸ ಯೋಜನೆ.



ಅದೇನೆಂದರೆ ಪ್ರೇಮದ ಹಲವಾರು ಆಯಾಮಗಳನ್ನು ಕುರಿತ ಹಾಡುಗಳ ಕ್ಯಾಸೆಟ್/ಸಿಡಿಯನ್ನು ಹೊರತರುವುದು. ಈ ಹಾಡುಗಳು ಯಾವ ಸಿನಿಮಾಗೂ ಸಂಬಂಧಪಟ್ಟಿರುವುದಿಲ್ಲವಾದ್ದರಿಂದ ಅವುಗಳಿಗೆ ಚಿತ್ರಕತೆಯ ಸಂದರ್ಭಕ್ಕೆ ಸೂಕ್ತವಾಗುವ ಪದಗಳಿರಬೇಕೆಂಬ ಹಂಗು ಇರುವುದಿಲ್ಲ.

ಈ ಯೋಜನೆ ಈಗಾಗಲೇ ಕಾರ್ಯರೂಪ ಪಡೆದಿದ್ದು ಕಾಯ್ಕಿಣಿ ಒಂಬತ್ತು 'ಲವ್' ಕವನಗಳನ್ನು ಬರೆದಿದ್ದಾರೆ ಮತ್ತು ಮನೋ ಮೂರ್ತಿ ಅವುಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಕಳೆದ ವಾರ ಸೋನು ನಿಗಮ್ ಅವುಗಳಿಗೆ ತಮ್ಮ ದನಿ ನೀಡಿದ್ದಾರೆ. ಈ ಯೋಜನೆಯ ಒಂದು ವಿಶಿಷ್ಟತೆ ಏನೆಂದರೆ ಆ ಕ್ಯಾಸೆಟ್/ಸಿಡಿಯ ಕೊನೆ ಹಾಡಾಗಿ ಒಂದು 'ನಾಡಗೀತೆ'ಯಂತಹ ಹಾಡೂ ಇರುವುದು. ಆದರೆ ಇದಕ್ಕೆ ಮನೋ ಮೂರ್ತಿಯವರು ಯುವಜನ ಮೆಚ್ಚುವಂತಹ ರಾಕ್ ಸಂಗೀತ ನೀಡಿದ್ದಾರಂತೆ. ಸದ್ಯದಲ್ಲೇ ಇದರ ಪ್ರಮೋಷನ್‌ಗೆಂದು ಒಂದು ಹಾಡಿನ ವಿಡಿಯೋ ಕೂಡ ಮಾಡುವ ಸಾಧ್ಯತೆ ಇದೆ.



ಸಿನಿಮಾಕ್ಕೆ ಸಂಬಂಧಪಟ್ಟಿರದ ಈ ತರಹದ ಆಲ್ಬಮ್‌ಗಳು ಈಗಾಗಲೇ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಬಂದಿವೆ. ಆದರೆ ಕನ್ನಡದಲ್ಲಿ ಇಲ್ಲಿಯತನಕ ಸುಗಮ ಸಂಗೀತ ಮತ್ತು ಭಕ್ತಿ ಗೀತೆಗಳು ಬಂದಿವೆಯೇ ಹೊರತು ಮಾಡರ್ನ್ ಹಾಡುಗಳ ಪ್ರತ್ಯೇಕ ಕ್ಯಾಸೆಟ್/ಸಿಡಿ ಬಂದಿಲ್ಲ. ಆ ಮಟ್ಟಿಗೆ ಇದೊಂದು ಹೊಸ ಪ್ರಯೋಗ.

ಪ್ರತಿಭಾವಂತ ಈ ಮೂವರ ಈ ಹೊಸ ಪ್ರಯೋಗ ಖಂಡಿತವಾಗಿಯೂ ಯಶಸ್ವಿಯಾಗುತ್ತದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ, ಅಲ್ಲವೇ?

■ ಅರುಣ್.ಜೆ

R B P LANKESH, Kannada Weekly Price Rs. 12/- 13-2-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4

'ವಿಜಯದ ವಾರ'ದಲ್ಲಿ ವಿಜಿ



ವಿವಾದ, ಗಾಸಿಪ್ ಮತ್ತು ಗೊಂದಲಗಳಿಂದ ಕೊನೆಗೂ ಹೊರಬಂದಿರುವ 'ದುನಿಯಾ' ಖ್ಯಾತಿಯ ವಿಜಯ್ ಪಾಲಿಗೆ ಇದೊಂದು ವಿಶೇಷ ವಾರ.

ಇದೇ ಶುಕ್ರವಾರ ಕವಿತಾ ಲಂಕೇಶ್ ನಿರ್ದೇಶನದ 'ಅವ್ವ' ತೆರೆ ಕಾಣಲಿದೆ. ಇಲ್ಲಿಯತನಕ ಬರೀ ದಿಶುಂ ದಿಶುಂ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ವಿಜಯ್ 'ಅವ್ವ'ದಲ್ಲಿ ಬ್ಯಾದರ ಮುಂಡ ಎಂಬ ಹಳ್ಳಿ ಹುಡುಗನ ಪಾತ್ರದಲ್ಲಿ ಮೊದಲ ಬಾರಿಗೆ ನಟಿಸಿದ್ದಾರೆ. ಅಂದಹಾಗೆ ಈ ಚಿತ್ರದಲ್ಲಿ ವಿಜಯ್‌ಗೆ ಹೊಡೆಯುವ ಬಡಿಯುವ ದೃಶ್ಯಗಳಿಲ್ಲದಿದ್ದರೂ ತೆರೆಯ ಮೇಲೆ ಹುಡುಗಿಯನ್ನು ಹಲವು ಬಾರಿ ಚುಂಬಿಸುವ ಅವಕಾಶಗಳು ಸಿಕ್ಕಿವೆ.

ಇದೇ ವಾರ ವಿಜಯ್ ನಟಿಸುತ್ತಿರುವ ಇನ್ನೆರಡು ಚಿತ್ರಗಳು ಪ್ರಾರಂಭವಾಗಿವೆ. ಪಿರಮಿಡ್ ಸಾಯಿಮಿರಾ ಸಂಸ್ಥೆ ನಿರ್ಮಿಸುತ್ತಿರುವ 'ಪುಟ್ಟ' ಚಿತ್ರದ ಮುಹೂರ್ತ ಮೊನ್ನೆ ನಡೆಯಿತು. ಮಸಾಲೆ ಚಿತ್ರಗಳ ಸರದಾರ ಓಂ ಪ್ರಕಾಶ್ ರಾವ್ ಇದನ್ನು ನಿರ್ದೇಶಿಸುತ್ತಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ 'ಸ್ಲಂ ಬಾಲ' ಎಂಬ ಮತ್ತೊಂದು ಚಿತ್ರವೂ ಶುರುವಾಗಲಿದ್ದು ಸುಮಾನಾ ಕಿತ್ತೂರು ಎಂಬಾಕೆ ಅದನ್ನು ನಿರ್ದೇಶಿಸುತ್ತಿದ್ದಾರೆ.

ಈ ಮಧ್ಯೆ ರವಿ ಬೆಳಗೆರೆ ನಿರ್ದೇಶನದ 'ಮುಖ್ಯಮಂತ್ರಿ ಐ ಲವ್ ಯೂ' ಚಿತ್ರದಲ್ಲೂ ವಿಜಯ್ ಹೀರೋ ಆಗಿ ನಟಿಸುತ್ತಿದ್ದು ಅದು ಕೂಡ ಸದ್ಯದಲ್ಲೇ ಮುಗಿಯಲಿದೆ. ಈಗಾಗಲೇ ಈ ಚಿತ್ರ ಎಲ್ಲೆಡೆ ಹಲವಾರು ವಿವಾದಗಳನ್ನು ಮತ್ತು ಚರ್ಚೆಗಳನ್ನು ಹುಟ್ಟು ಹಾಕಿದ್ದು ಅಪಾರ ಕುತೂಹಲ ಕೆರಳಿಸಿದೆ.

ಒಂದು ಚಿತ್ರ ಬಿಡುಗಡೆ, ಎರಡು ಹೊಸ ಚಿತ್ರಗಳ ಮುಹೂರ್ತ, ಮತ್ತೊಂದು ಚಿತ್ರದ ಅಂತ್ಯ.... ಇದು ವಿಜಯ್ ಪಾಲಿಗೆ 'ವಿಜಯದ ವಾರ' ಎನ್ನಬಹುದೇ?

'ಪ್ರಣಯರಾಜ'ನ ಹಸ್ತಾಂತರ


ಹಿಂದಿನ ಕಾಲದ ನಾಯಕ ನಟ ಶ್ರೀನಾಥ್ ಈಗ 60ರ ಆಜು-ಬಾಜಿನಲ್ಲಿದ್ದಾರೆ. ಆದರೆ ಈಗಲೂ ಜನ ಅವರನ್ನು ಸಭೆ ಸಮಾರಂಭಗಳಲ್ಲಿ 'ಪ್ರಣಯರಾಜ' ಎಂದು ಸಂಬೋಧಿಸುವುದು ಅವರಿಗೆ ಮುಜುಗರ ನೀಡುತ್ತದಂತೆ.

ಈ ಕಾರಣಕ್ಕಾಗಿ ಅವರು ಬರುವ ಯುಗಾದಿಯ ಸಂದರ್ಭದಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಿ ತಮ್ಮ 'ಪ್ರಣಯರಾಜ' ಬಿರುದನ್ನು ಈಗಿನ ಯುವ ನಾಯಕನಟರಲ್ಲಿ ಒಬ್ಬರಿಗೆ ವರ್ಗಾಯಿಸುತ್ತಾರಂತೆ. ಆದರೆ ಅದನ್ನು ಪಡೆಯಲಿರುವ ಆಧುನಿಕ 'ರೋಮಿಯೋ' ಯಾರಾಗಿರುತ್ತಾರೆಂಬ ಗುಟ್ಟನ್ನು ಮಾತ್ರ ಅವರು ಬಿಟ್ಟು ಕೊಡುತ್ತಿಲ್ಲ. "ನಾನು ಮತ್ತು ನನ್ನ ಹೆಂಡತಿ ಗೀತಾ ಈ ಬಗ್ಗೆ ಚರ್ಚಿಸಿ ಒಂದು ಅಂತಿಮ ನಿರ್ಣಯವನ್ನು ಕೈಗೊಳ್ಳುತ್ತೇವೆ" ಎಂದಷ್ಟೇ ಶ್ರೀನಾಥ್ ಹೇಳಿದ್ದಾರೆ.



ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಇದು ಒಂದು ಹೊಸ ಅಧ್ಯಾಯ. ಈ ತನಕ ಯಾವ ನಾಯಕನಟನೂ ತನ್ನ ಬಿರುದನ್ನು ಮತ್ತೊಬ್ಬ ನಾಯಕನಟನಿಗೆ ಹಸ್ತಾಂತರಿಸಿದ್ದೇ ಇಲ್ಲ. ಆದ್ದರಿಂದ ಇಂತಹ ಬಿರುದು ಬಾವಲಿಗಳು ಆ ನಟರ ಜೊತೆಗೇ ಅಸ್ತಂಗತವಾಗುತ್ತವೆ.

ಆದರೆ ಒಂದೇ ಒಂದು ಸಮಸ್ಯೆ ಏನೆಂದರೆ ಶ್ರೀನಾಥ್ ತಮ್ಮ ಈ ಬಿರುದನ್ನು ನವನಟನೊಬ್ಬನಿಗೆ ಹಸ್ತಾಂತರಿಸಿದ ನಂತರವೂ ಜನ ಅವರನ್ನು 'ಮಾಜಿ ಪ್ರಣಯರಾಜ' ಎಂದು ಕರೆದರೆ ಏನು ಮಾಡುವುದು?!



ಬಾಬು-ರಮ್ಯಾ ಜಟಾಪಟಿ

ಜಗಳವಾಡುವ ಮೂಲಕ ಮತ್ತೆ ರಮ್ಯಾ ಸುದ್ದಿಮಾಡಿದ್ದಾಳೆ. ಈ ಬಾರಿ ಆಕೆ ಜಗಳವಾಡಿರುವುದು ಹಿರಿಯ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಜೊತೆ.

'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಚಿತ್ರದ ಮುಖ್ಯ ಹಾಡಿನ ಚಿತ್ರೀಕರಣಕ್ಕೆ ಆಕೆ ಹಾಜರಾಗಲಿಲ್ಲವಾದ್ದರಿಂದ ಲಕ್ಷಾಂತರ ರೂಪಾಯಿ ನಷ್ಟವಾಗಿದೆ, ಆಕೆಯ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಬಾಬು ಫಿಲಂ ಚೇಂಬರ್‌ಗೆ ದೂರು ನೀಡಿದ್ದಾರೆ.

ಆದರೆ ಈ ಗಲಾಟೆಯ ಬಗ್ಗೆ ರಮ್ಯಾ ಹೇಳುವುದೇ ಬೇರೆ.

"ಈ ಪಾತ್ರವನ್ನು ಹೇಳಿಕೇಳಿ ನಾನೇ ಇಷ್ಟ ಪಟ್ಟು ಪಡೆದಿದ್ದೇನೆ. ಅಷ್ಟೇ ಅಲ್ಲ, ನಲವತ್ತು ದಿನಗಳ ಕಾಲ ಚಿತ್ರೀಕರಣ ಮಾಡಿದ ನಂತರ ಕೇವಲ ಎರಡು ಗಂಟೆ ಚಿತ್ರೀಕರಣ ಮಾಡಲು ನಾನು ಹಿಂದೇಟು ಹಾಕುತ್ತೇನೆಯೇ? ಅದೂ ಆ ಹಾಡಿನ ದೃಶ್ಯದಲ್ಲಿ ಕನ್ನಡ ಚಿತ್ರರಂಗದ ದೊಡ್ಡ ದೊಡ್ಡ ನಾಯಕನಟರು ಭಾಗವಹಿಸಿದ್ದರಿಂದ ಅವರ ಜೊತೆ ನಟಿಸುವ ಅವಕಾಶವನ್ನು ನಾನು ಕಳೆದುಕೊಳ್ಳುತ್ತೇನೆಯೇ? ಆದರೆ ಅಂದು ನನ್ನ ಆರೋಗ್ಯ ಸರಿ ಇರಲಿಲ್ಲ. ಅನಾರೋಗ್ಯದ ನಿಮಿತ್ತ ಮಾತ್ರ ನಾನು ಚಿತ್ರೀಕರಣಕ್ಕೆ ಹೋಗಲಾಗಿರಲಿಲ್ಲ" ಎಂದು ಆಕೆ ಹೇಳುತ್ತಿದ್ದಾಳೆ.

ರಮ್ಯಾ ಹೊಸ ಜಮಾನಾದ ಹುಡುಗಿ. ಬಾಬು ಅಂದಕಾಲತ್ತಿಲ್ ನಿರ್ದೇಶಕ. ಆದರೆ ಇವರಿಬ್ಬರೂ ಚಿತ್ರರಂಗದವರಿಗೆ ಎಂದೆಂದಿಗೂ ತಲೆನೋವಿನ ಗಿರಾಕಿಗಳು! ಆದ್ದರಿಂದ "ಇಬ್ಬರೂ ಬೇರೆ ಬೇರೆ ಕಾಲದವರಾಗಿದ್ದರೂ ಇಬ್ಬರ ಬುದ್ಧಿ ಒಂದೇ. ಇಬ್ಬರಿಗೂ ಈ ರೀತಿ ಕ್ಯಾತೆ ತೆಗೆಯುವ ದೊಡ್ಡ ಇತಿಹಾಸವೇ ಇದೆ. ಇಬ್ಬರೂ ಕಿರಿಕ್ಕುಗಳೇ. ಹೀಗಾಗಿ ಈ ಸಮಸ್ಯೆಗೆ ಪರಿಹಾರ ಸ್ವಲ್ಪ ಕಷ್ಟವೇ" ಎನ್ನುತ್ತಿದ್ದಾರೆ ಚೇಂಬರ್‌ನವರು!

ಎಲ್ಲಾ ಬಗೆಹರಿಯದ ಗಲಾಟೆಗಳು ಹೇಗೆ ಕೊನೆಗೆ ಅಂಬರೀಷ್ ಮನೆ ಬಾಗಿಲಿಗೆ ಬಂದು ನಿಲ್ಲುತ್ತಾವೆಯೋ ಹಾಗೆಯೇ ಇದು ಕೂಡ ಅಲ್ಲಿಗೇ ಹೋಗಬಹುದೆಂದು ಅಂದಾಜಿಸಲಾಗಿದೆ.

ಆದರೆ ಅಂಬರೀಷ್‌ಗೆ ಬಾಬು ಮೈಸೂರಿನ ಬಾಲ್ಯದ ಸ್ನೇಹಿತ. ಇನ್ನೊಂದೆಡೆ ರಮ್ಯಾ ಮಂಡ್ಯದ ಗೌಡ್ತಿ. ಹೀಗಾಗಿ ಮಂಡ್ಯದ ಗಂಡು ಅಂಬಿ ಪಾಲಿಗೂ ಇದೊಂದು ನುಂಗಲಾರದ ತುತ್ತಾಗಬಹುದು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-